ಅಧ್ಯಯನ ಪ್ರಬಂಧ

"ಬೊಳುವಾರು ಮಹಮದ್ ಕುಂಞಿ ಕಥೆಗಳಲ್ಲಿ ಸಾಮಾಜಿಕ ಮುಖಾಮುಖಿ"

ಕನ್ನಡ ವಿಶ್ವವಿದ್ಯಾಲಯಕ್ಕೆ

ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಅಧ್ಯಯನ ಪ್ರಬಂಧ

ಸಂಶೋಧನಾ ವಿದ್ಯಾರ್ಥಿ

ಬಿ.ವಿ.ರಾಜೇಶ್ವರಿ

ಮಾರ್ಗದರ್ಶಕರು

ಡಾ. ವಷ್ಟ ಹೇಮಲತಾ

(KAVMBKS00341)

ಕಾವ್ಯಮಂಡಲ

೧೩/೧೫, ರಾಷ್ಟ್ರೀಯ ವಿದ್ಯಾಲಯ ರಸ್ತೆ,

ಬಸವನಗುಡಿ, ಬೆಂಗಳೂರು – ೫೬೦ ೦೦೪

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ – ೫೮೩೨೭೬

<u>ದೃಢೀಕರಣ ಪತ್ರ</u>

ಬಿ.ವಿ.ರಾಜೇಶ್ವರಿ ಇವರು **"ಬೊಳುವಾರು ಮಹಮದ್ ಕುಂಞಿ ಕತೆಗಳಲ್ಲಿ ಸಾಮಾಜಿಕ ಮುಖಾಮುಖಿ"** ಎಂಬ ಶೀರ್ಷಿಕೆಯ ಕಿರುಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಅಧ್ಯಯನಾಂಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಈ ಕಿರುಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

[signature]

(ಡಾ.ವಡ್ಡೆ ಹೇಮಲತಾ)
ಕನ್ನಡ ಅಧ್ಯಯನ ಕೇಂದ್ರ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

ದಿನಾಂಕ : 16-09-10

ಸ್ಥಳ : ಬೆಂಗಳೂರು

ಪ್ರಮಾಣಪತ್ರ

"ಬೊಳುವಾರು ಮಹಮದ್ ಕುಂಞಿ ಅವರ ಕತೆಗಳಲ್ಲಿ ಸಾಮಾಜಿಕ ಮುಖಾಮುಖಿ" ಎಂಬ ಶೀರ್ಷಿಕೆಯ ಕಿರು ಪ್ರಬಂಧವನ್ನು ಡಾ.ವಡ್ಡೆ ಹೇಮಲತಾ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಅಧ್ಯಯನಾಂಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಕಿರು ಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ರಾಜೇಶ್ವರಿ ಬಿ.ವಿ

ಬಿ.ವಿ.ರಾಜೇಶ್ವರಿ
ಸಂಶೋಧಕಿ
ಎಂ.ಫಿಲ್ ವಿದ್ಯಾರ್ಥಿನಿ.
ಕಾವ್ಯ ಮಂಡಲ ೧೩/೧೫
ರಾಷ್ಟ್ರೀಯ ವಿದ್ಯಾಲಯ ರಸ್ತೆ,
ಬಸವನಗುಡಿ, ಬೆಂಗಳೂರು-೫೬೦ ೦೦೪

ದಿನಾಂಕ : 16-09-10

ಸ್ಥಳ : ಬೆಂಗಳೂರು.

ಪರಿವಿಡಿ

ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿದೆ. ಪಾಶ್ಚಾತ್ಯ ಸಾಹಿತ್ಯ ಪ್ರಭಾವದಿಂದ ಮೂಡಿ ಬಂದ ಇತರ ಪ್ರಕಾರಗಳು ಹುಲುಸಾಗಿ ಬೆಳೆದಿವೆ. ಆದರೆ ಕಾದಂಬರಿ ಪ್ರಕಾರವನ್ನು ಬಿಟ್ಟರೇ, ಸಣ್ಣಕಥೆ ಪ್ರಕಾರವು ಅತೀ ಹೆಚ್ಚು ಸಮೃದ್ಧ ಮತ್ತು ಉತ್ಕೃಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ ಎಂದು ಗುರುತಿಸಬಹುದಾಗಿದೆ.

ಸಾಮಾನ್ಯವಾಗಿ ಕನ್ನಡ ಕಥೆಗಾರರು ಮನುಷ್ಯನ ಹಿರಿಮೆ, ಬದುಕಿನ ಮೌಲ್ಯಗಳನ್ನು ಬೆಳಗಿಸುವ ಸೂಕ್ಷ್ಮ ಸಂವೇದನ ಮಾಧ್ಯಮವನ್ನಾಗಿ ಸಣ್ಣ ಕಥೆಯನ್ನು ಬಳಸಿಕೊಂಡಿದ್ದಾರೆ. ಈ ಮಾಧ್ಯಮವನ್ನು ಅರ್ಥಪೂರ್ಣವಾಗಿ ಬಳಸಿಕೊಂಡು ಬೆಳೆಸಿಕೊಂಡು ಉಳಿಸುತ್ತಿದ್ದಾರೆ. ಸಣ್ಣ ಕಥಾ ಪ್ರಕಾರವು ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಈ ಎಲ್ಲಾ ಘಟ್ಟಗಳಲೂ ಕಾಣಬಹುದು. ಕೆಲವು ವಿಶಿಷ್ಟ ಗುಣ ಲಕ್ಷಣಗಳಿಂದಾಗಿ ಒಂದೊಂದು ಕಾಲಘಟ್ಟದ ಕಥೆಗಳ ಸಂವೇದನೆಯ ಚಿತ್ರಣ ಒಂದೊಂದು ಕಾರಣಕ್ಕೆ ಮುಖ್ಯವಾಗುತ್ತದೆ. ಆಯಾ ಕಾಲದ ತಿರುವು, ಸವಾಲು, ಸ್ಥಿತ್ಯಂತರ, ಜೀವನ ವೈಖರಿಗಳ ಅನೇಕ ಕೊರತೆಗಳು ಮುಖ್ಯವಾದವು. ಆಯಾ ಕಾಲಘಟ್ಟದಲ್ಲಿನ ಮಿತಿಯನ್ನು ಮೀರಿಯೂ ತಮ್ಮ ಮಹತ್ವ ಉಳಿಸಿಕೊಂಡಿವೆ.

ಕನ್ನಡದ ಮೊದಲ ಕಥೆಗಳಲ್ಲೊಂದಾದ 'ರಂಗನ ಮದುವೆ'(೧೯೧೦) ಮೂಲಕ ಹೊಸಗನ್ನಡ ಕಥಾ ಚರಿತ್ರೆಗೆ ಮುನ್ನುಡಿ ಬರೆದವರು ಮಾಸ್ತಿಯವರು. ನಂತರ ಇದರೊಂದಿಗೆ ಮುಂದುವರೆದ ಬಾಗಲೋಡಿ ದೇವರಾಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕೊರಡ್ಕಲ್ ಶ್ರೀನಿವಾಸರಾಯರು, ಭಾರತೀ ಪ್ರಿಯ, ಕೆ.ಗೋಪಾಲಕೃಷ್ಣರಾವ್, ಅಶ್ವತ್ಥ, ಎಂ.ವಿ.ಸೀತಾರಾಮಯ್ಯ, ಬಸವರಾಜ ಕಟ್ಟಿಮನಿ, ನಿರಂಜನ, ಬರಗೂರು ರಾಮಚಂದ್ರಪ್ಪ, ಕಾಳೇಗೌಡ ನಾಗವಾರ, ದೇವನೂರು, ಮಹಾದೇವರು; ಸಿದ್ದಲಿಂಗಯ್ಯ ಇನ್ನೂ ಮುಂತಾದವರನ್ನು ಇಲ್ಲಿ ಹೆಸರಿಸಬಹುದು.

ಈ ಮೇಲಿನ ವಿವಿಧ ಪಂಥಕ್ಕೆ ಸೇರಿದವರು ತಮ್ಮದೇ ಆದ ಸಮುದಾಯವನ್ನು, ಸಮಾಜವನ್ನು ಕುರಿತು ಅವರ ಕಥೆಗಳಲ್ಲಿ ಕಾಣಬಹುದು. ಸಮಾಜದಲ್ಲಿ ಮತ್ತೊಂದು ಸಮುದಾಯವಾದ ಅಲ್ಪಸಂಖ್ಯಾತರ ಕುರಿತು ಬರೆದವರು ಬಹಳ ಕಡಿಮೆ ಜನ ಎಂದು ಹೇಳಬಹುದು. ಆ ಅಲ್ಪಸಂಖ್ಯಾತ ಶೋಷಿತ ಸಮುದಾಯದಲ್ಲಿನ ಮೌಢ್ಯತೆ, ಅನಕ್ಷರತೆ, ಅಸ್ಪೃಶ್ಯತೆ, ಬಡತನ, ಗಂಡು-ಹೆಣ್ಣು, ವರ್ಗ

ಸಂಘರ್ಷ ಇತ್ಯಾದಿ ಅಂಶಗಳನ್ನು ಅಪರಿಚಿತ ಅನುಭವಗಳನ್ನು ಮುಖ್ಯ ನೆಲೆಗೆ ತರುವ ಮೂಲಕ ಮುಸ್ಲಿಂ ಸಂವೇದನೆಯನ್ನು ಆಧುನಿಕ ಕಥಾ ಸಾಹಿತ್ಯದಲ್ಲಿ ಗುರುತಿಸಬಹುದು.

ಫಕೀರ್ ಅಹಮ್ಮದ್ ಕಟ್ಪಾಡಿ, ಬಾನು ಮುಷ್ತಾಕ್, ಸಾರಾ ಅಬೂಬಕ್ಕರ್, ರಂಜಾನ್ ದರ್ಗ, ಅಬ್ದುಲ್ ರಶೀದ್ ಮುಂತಾದ ಕಥೆಗಾರರನ್ನು ಇಲ್ಲಿ ಹೆಸರಿಸಬಹುದು. ಇವರು ಅಲ್ಪಸಂಖ್ಯಾತ ಸಮುದಾಯದ ವಿವಿಧ ಮುಖಗಳನ್ನು ತಮ್ಮ ಕಥೆಗಳಲ್ಲಿ ಗುರುತಿಸಿದ್ದಾರೆ. ಹಾಗೆಯೇ ಕನ್ನಡ ಪ್ರಮುಖ ಬಂಡಾಯ ಕಥೆಗಾರರಲ್ಲಿ ಬೊಳುವಾರು ಮಹಮದ್ ಕುಂಞ ಪ್ರಮುಖರು. ಇವರು ಅಲ್ಪಸಂಖ್ಯಾತ ಸಮುದಾಯವನ್ನು ಸಾಮಾಜಿಕ ಮುಖಾಮುಖಿ ಮೂಲಕ, ಅಲ್ಲಿನ ವಿವಿಧ ಸ್ತರಗಳ ಚಿತ್ರಣ ಕೊಡುವದು ಈ ಅಧ್ಯಯನದ ಪ್ರಮುಖ ಭಿತ್ತಿಯಾಗಿದೆ.

ಬೊಳುವಾರುರವರ 'ದೇವರುಗಳ ರಾಜ್ಯದಲ್ಲಿ' (೧೯೮೩), 'ಅಂಕ' (೧೯೮೬), 'ಆಕಾಶಕ್ಕೆ ನೀಲಿ ಪರದೆ" (೧೯೯೩) ಮತ್ತಿತರ ಕಥೆಗಳನ್ನು ಪ್ರಾತಿನಿಧಿಕ ಕಥೆಗಳಾಗಿ ಪರಿಗಣಿಸಿ, ಅಲ್ಲಿ ಅಭಿವ್ಯಕ್ತವಾಗುವ ಅಲ್ಪಸಂಖ್ಯಾತ ಸಮುದಾಯವನ್ನು ವಿಭಿನ್ನ ನೆಲೆಗಳಲ್ಲಿ ಸಾಮಾಜಿಕ ಮತ್ತು ವಸ್ತುಕೇಂದ್ರಿತ ವಿವಿಧ ಅಧ್ಯಾಯಗಳಲ್ಲಿ ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಲ್ಪಸಂಖ್ಯಾತ ಸಮುದಾಯದ ಚಿತ್ರಣ ಎಂಬ ಶೀರ್ಷಿಕೆಯಡಿಯಲ್ಲಿ ಅಲ್ಪಸಂಖ್ಯಾತರು ಎಂದರೇನು? ಮುಸ್ಲಿಮರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಏಕೆ ಕರೆಯುತ್ತಾರೆ? ಆ ಸಮುದಾಯದಲ್ಲಿನ ಅಸ್ಪೃಶ್ಯತೆ ಮತ್ತು ಇನ್ನಿತರ ಅಂಶಗಳ ಸಂಪೂರ್ಣ ವಿವರವನ್ನು ಕೊಡುವ ಮೂಲಕ ಸಮಾಜವನ್ನು ಮುಖಾಮುಖಿಯಾಗಿಸಿರುವುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗುತ್ತದೆ.

ಅಲ್ಪಸಂಖ್ಯಾತ ಸಮುದಾಯದ ಸಮಾಜದಲ್ಲಿನ ಸ್ತ್ರೀಯರ ಚಿತ್ರಣವನ್ನು ಎರಡನೆಯ ಅಧ್ಯಾಯದಲ್ಲಿ ನೀಡಲಾಗಿದೆ. ಅಲ್ಪಸಂಖ್ಯಾತ ಸಮುದಾಯದಲ್ಲಿನ ಸ್ತ್ರೀಯರ ಅನಕ್ಷರತೆ, ಬಡತನ, ಬಾಲ್ಯವಿವಾಹ ಮುಂತಾದ ಸಮಾಜದ ಪಿಡುಗುಗಳ ಚಿತ್ರಣವನ್ನು ನೀಡಿದ್ದಾರೆ. ಇಲ್ಲಿ ವಿಧವಾ ವಿವಾಹದಂತಹ ಒಂದು ಬದಲಾವಣೆಯ ಅಂಶಗಳನ್ನು ಈ ಕಥೆಗಳಲ್ಲಿ ಕಾಣಬಹುದು.

ಗಂಡು-ಹೆಣ್ಣಿನ ಸಂಬಂಧಗಳ ಚಿತ್ರಣ ಎಂಬ ಮೂರನೆಯ ಅಧ್ಯಾಯದಲ್ಲಿ ಹಿಂದೂ-ಮುಸ್ಲಿಂ ಅಂತರ್ಧರ್ಮದ ವಿವಾಹದ ಮೂಲಕ ಅವರದೇ ಆದ ಸಮುದಾಯದೊಳಗಿನ ವಿವಾಹದ, ಗಂಡು-ಹೆಣ್ಣಿನ ಚಿತ್ರಣವನ್ನು ಈ ಅಧ್ಯಾಯದಲ್ಲಿ ಕಾಣಬಹುದು.

ದೇವರು-ಧರ್ಮ-ಮೌಢ್ಯತೆಗಳ ಚಿತ್ರಣ ಎಂಬ ನಾಲ್ಕನೆಯ ಅಧ್ಯಾಯದಲ್ಲಿ ದೇವರು, ಧರ್ಮ ಎನ್ನುವುದು ಕೇವಲ ಒಂದು ನಂಬಿಕೆ ಹಾಗೂ ಆಚರಣೆಯಾಗಿದೆ. ಅವುಗಳನ್ನು ತಪ್ಪು ಲಾಭಕ್ಕಾಗಿ ಬಳಸಿಕೊಳ್ಳುವುದರ ಕುರಿತು ಕೆಲವು ಕತೆಗಳಲ್ಲಿ ಹೇಳುತ್ತಾರೆ. ಇದೇ ಸಂದರ್ಭದಲ್ಲಿ ಮೌಢ್ಯತೆ, ಧರ್ಮ, ಆಚಾರ-ವಿಚಾರಗಳು ಮನುಷ್ಯನನ್ನು ಹೇಗೆ ಶೋಷಣೆಗೆ ಒಳಪಡಿಸುತ್ತವೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ.

''ಮುತ್ತುಪ್ಪಾಡಿ' ಎಂಬ ಕಾಲ್ಪನಿಕ ಪ್ರದೇಶದ ಚಿತ್ರಣದ ಕುರಿತು ಐದನೆಯ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ. 'ಮುತ್ತುಪ್ಪಾಡಿ' ಎಂಬ ಗ್ರಾಮವನ್ನು ಚಿತ್ರಿಸುವುದರ' ಮೂಲಕ ಮನುಷ್ಯನನ್ನು ದೇವರು ಸೃಷ್ಟಿಸಿ ಅವರಿಗೆ ಇಷ್ಟ ಬಂದಂತೆ ಇರಲು ಅವಕಾಶ ನೀಡಿದ್ದಾರೆ. ಹಾಗೆ ಮಾನವೀಯ ಮೌಲ್ಯ ಹೇಗೆ ಮುಖ್ಯವಾಗುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಲಾಗುತ್ತದೆ.

ಒಟ್ಟಿನಲ್ಲಿ ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಅಲ್ಪಸಂಖ್ಯಾತ ಸಮುದಾಯದ ಜನರ ಜೀವನ ಚಿತ್ರಣವನ್ನು ಚರ್ಚಿಸುವುದು ಈ ನಿಬಂಧದ ವ್ಯಾಪ್ತಿಗೆ ಒಳಪಡುತ್ತದೆ.

ಅಧ್ಯಾಯ – ೧

ಅಲ್ಪಸಂಖ್ಯಾತ ಸಮುದಾಯದ ಚಿತ್ರಣ

ಅಲ್ಪಸಂಖ್ಯಾತರು ಎಂಬ ಕನ್ನಡ ಪದವನ್ನು 'ಮೈನಾರಿಟಿ' ಎಂಬ ಇಂಗ್ಲೀಷ್ ಪದಕ್ಕೆ ಪರ್ಯಾಯ ಪದವಾಗಿ ಬಳಸುತ್ತೇವೆ. ಈ ಪದವೇ ಸೂಚಿಸುವಂತೆ ಸಂಖ್ಯೆಯಲ್ಲಿ ಅಲ್ಪವಾಗಿರುವವರು ಅಥವಾ ಕಡಿಮೆ ಇರುವವರನ್ನು ಅಲ್ಪಸಂಖ್ಯಾತರು ಎಂದು ಕರೆಯುತ್ತಾರೆ. ಅಲ್ಲಿನ ಒಟ್ಟು ಸಮೂಹದಲ್ಲಿ ಅಲ್ಪಸಂಖ್ಯಾತರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಬಹುಸಂಖ್ಯಾತರು ಇರಲೇಬೇಕು ಎಂಬುದು ಇಲ್ಲಿ ಸೂಚ್ಯವಾಗಿರುವುದು, ಅಂತೆಯೇ ಒಂದು ಪೂರ್ಣ ಘಟಕದಲ್ಲಿರುವ ಉಪಸಮೂಹಗಳಲ್ಲಿ ಇರುವ ಇತರರ ಸಂಖ್ಯೆಗಿಂತ ಎಷ್ಟು ಪ್ರಮಾಣದ ಸಂಖ್ಯೆಯ ಸದಸ್ಯರುಗಳನ್ನು ಉಳ್ಳದ್ದಾಗಿದೆ ಎಂಬುದರ ಆಧಾರದ ಮೇಲೆ ಅಲ್ಪ ಸಂಖ್ಯಾತರು ಎಂಬುದು ನಿರ್ಧರಿಸಲ್ಪಡುತ್ತದೆ.

'ಕನ್ನಡ ವಿಶ್ವಕೋಶ'ದ ಪ್ರಕಾರ ಯಾವುದೇ ದೇಶದ ಬಹು ಜನರ ಬುಡಕಟ್ಟು, ಮತ, ಭಾಷೆ, ಆಚಾರ, ವ್ಯವಹಾರ ಇತ್ಯಾದಿಗಳು ಒಂದು ತೆರನಾಗಿದ್ದು, ಇವುಗಳಿಂದ ಭಿನ್ನವಿರುವ ಬುಡಕಟ್ಟು ಮತ್ತು ಭಾಷೆ ಇತ್ಯಾದಿಗಳನ್ನು ಅನುಸರಿಸುವ ಜನ ಸ್ವಲ್ಪವಿದ್ದರೆ ಅವರನ್ನು ಅಲ್ಪಸಂಖ್ಯಾತರು ಎನ್ನುತ್ತೇವೆ.(ಭಾರತೀಯ ಸಮಾಜ – ಕೆ ಬೈರಪ್ಪ)

'ಚೇಂಬರ್' ಶಬ್ದಕೋಶದ ಪ್ರಕಾರ ಅರ್ಧಕ್ಕಿಂತಲೂ ಕಡಿಮೆ ಇರುವ ಚಿಕ್ಕದಾದ ಸಂಖ್ಯೆ ಚೊಕ್ಕವಾಗಿ ಅಥವಾ ಕಡಿಮೆ ಸಂಖ್ಯೆಯಲ್ಲಿ ಇರುವಂತಹ ಪರಿಸ್ಥಿತಿಯನ್ನು ಅಲ್ಪಸಂಖ್ಯಾತರು ಎನ್ನುತ್ತೇವೆ. (ಅದೇ)

'ವಿಶ್ವಸಂಸ್ಥೆ'ಯ ವ್ಯಾಖ್ಯೆಯೊಂದರ ಪ್ರಕಾರ ಒಂದು ಜನಸಂಖ್ಯೆಯಲ್ಲಿನ ಬಹುತೇಕ ಜನರಿಗಿಂತ ಸ್ಪಷ್ಟವಾಗಿ ಬೇರೆಯಾಗಿದ್ದು ಶಾಶ್ವತವಾದ ಜನಾಂಗೀಯ ಮತೀಯ ಇಲ್ಲವೇ ಭಾಷೆ ಪರಂಪ'ರೆ ಅಥವಾ ಲಕ್ಷಣಗಳನ್ನು ಹೊಂದಿರುವ ಮತ್ತು ಅವುಗಳನ್ನು ಸಂರಕ್ಷಿಸಲು ಇಚ್ಛಿಸುವ ಪ್ರಬಲವಲ್ಲದ ಸಮೂಹಗಳನ್ನು ಮಾತ್ರ ಅಲ್ಪಸಂಖ್ಯಾತ ಎಂಬ ಪದವು ಒಳಗೊಂಡಿದೆ. (ಅದೇ)

'ಸ್ಕೀಮರ್ ಟಾಮ್‌ರ್'ವರ ಪ್ರಕಾರ ಅಲ್ಪಸಂಖ್ಯಾತರು ಎಂಬ ಪದವು ಅನಾದಿ ಕಾಲದಿಂದಲೂ ಒಂದು ನಿರ್ದಿಷ್ಟ ಭೂಪ್ರದೇಶದಲ್ಲಿ ನೆಲೆಸಿದ್ದು ಅಧೀನರಾದ ಜನರ ಸಮೂಹಕ್ಕೆ ಅನ್ವಯವಾಗುತ್ತದೆ. (ಅದೇ)

'ಲೂಯಿಸ್ ವಿರ್ತ್'ರವರ ಪ್ರಕಾರ "ಅಲ್ಪಸಂಖ್ಯಾತರು ಒಂದು ಸಮೂಹವಾಗಿದ್ದು, ಅವರು ತಮ್ಮದೇ ಆದ ಶಾರೀರಿಕ ಇಲ್ಲವೇ ಸಾಂಸ್ಕೃತಿಕ ಲಕ್ಷಣಗಳನ್ನು ಹೊಂದಿದ್ದು ಬಹುಸಂಖ್ಯಾತರಿಂದ ಬೇರ್ಪಟ್ಟಿದ್ದಾರೆ. ಸಮಾಜದಲ್ಲಿ ಅವರು ಅಸಮಾನತೆ ಮತ್ತು ತಾರತಮ್ಯಕ್ಕೊಳಗಾಗಿ ತಾವು ಬೇರ್ಪಟ್ಟ ಸಮೂಹವೆಂಬ ಭಾವನೆಯನ್ನು ಹೊಂದಿದವರಾಗಿದ್ದಾರೆ.

ಸಾಮಾನ್ಯವಾಗಿ ಒಂದು ರಾಜಕೀಯ ವ್ಯವಸ್ಥೆಯ ವ್ಯಾಪ್ತಿಯ ಒಳಗೆ ವಾಸಿಸುವ ಒಟ್ಟು ಜನರಲ್ಲಿ ಕೆಲವರು ತಮ್ಮ ಮತ, ಭಾಷೆ, ಜನಾಂಗ ತಮ್ಮ ಜನರ ಮೂಲ ಪ್ರಾಂತ್ಯ, ಜಾತಿ ಮುಂತಾದ ದೃಷ್ಟಿಯಿಂದ ಸಂಖ್ಯೆಯಲ್ಲಿ ಕಡಿಮೆಯಿದ್ದು ಅದೇ ಕಾರಣದಿಂದಾಗಿ ತಮ್ಮನ್ನು ಇತರರಿಗಿಂತ ಪ್ರತ್ಯೇಕವಾಗಿರುವವರು ಎಂಬುದಾಗಿ ಗುರುತಿಸಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ತಮ್ಮ ಸ್ವಂತಿಕೆಯನ್ನು ಕಾಪಾಡಿಕೊಳ್ಳಲು ಇಲ್ಲವೇ ಬಹುಸಂಖ್ಯಾತರೊಂದಿಗೆ ಸಮರಸಗೊಳ್ಳುವ ಸದುದ್ದೇಶದಿಂದ ಸಮಾನ ಇಲ್ಲವೇ ವಿಶೇಷ ಹಕ್ಕುಗಳು ಹಾಗೆಯೇ ಸೌಲಭ್ಯಗಳನ್ನು ಅಪೇಕ್ಷಿಸುವ ಜನ ಸಮೂಹವನ್ನು ಅಲ್ಪಸಂಖ್ಯಾತರು ಎಂಬುದಾಗಿ ಕರೆಯುತ್ತೇವೆ" (ಅದೇ)

ಬೊಳುವಾರು ಮಹಮದ್ ಕುಂಞಿ ಅವರ ಬರಣಿಗೆಯ ಹಿಂದೆ ಇರುವ ಉದ್ದೇಶವನ್ನು ಎರಡು ಗುರಿಯ ಮೂಲಕ ತಿಳಿಸಿದ್ದಾರೆ.

ಕನ್ನಡದ ಓದುಗರಿಗೆ ಅಷ್ಟೇನೂ ಪರಿಚಿತವಲ್ಲದ ಜನಸಮೂಹವನ್ನು (ಅವರನ್ನು ದ್ವೀಪ'ವೆಂದೂ ಕರೆಯಲಾಗುತ್ತಿತ್ತು) 'ಹೌದಾ, ಅವರು ಹಾಗಿಲ್ಲವಾ?' ಎಂಬಂತೆ ಉಳಿದವರಿಗೆ ಪರಿಚಯಿಸುವುದು ಮೊದಲ ಗುರಿ. ಅಂತೆಯೇ, ಕನ್ನಡದ ಓದಿಗೆ ಬಹುಪಾಲು ಕುರುಡಾಗಿದ್ದ ಅದೇ ಜನ ಸಮೂಹವನ್ನು ಓದುವಂತೆ ಪ್ರೇರೇಪಿಸಿ 'ಹೌದಾ ನಾವು ಹೀಗಿದ್ದೇವಾ?' ಎಂದು ಪ್ರಶ್ನಿಸಿಕೊಳ್ಳುವುಂತೆ ಒತ್ತಾಯಿಸುವುದು ಎರಡನೆಯ ಗುರಿ.

ಒಂದು ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯದ ಸದಸ್ಯನಿಗೆ ಅಲ್ಲಿನ ಒಳಜಗತ್ತಿನಲ್ಲಿ ಉಸಿರಾಡಿ, ಅಲ್ಪಸಂಖ್ಯಾತ ಸಮುದಾಯಗಳ ಓದುಗರಿಗೆ ನೈಜ ಬದುಕಿನ ಚಿತ್ರಣವನ್ನು ಕೊಡುವುದು ಲೇಖಕರ ಮೊದಲನೆಯ ಗುರಿಯಾಗಿದೆ.

ಹಾಗೆಯೇ ಅಲ್ಪಸಂಖ್ಯಾತರು ತಮ್ಮ ಸಮುದಾಯದವರಿಗೆ ತಮ್ಮ ಬದುಕಿನ ಸ್ಥಿತಿಗತಿಗಳ ಬಗ್ಗೆ ಇದ್ದ ಕುರುಡತನದಲ್ಲಿ ಕನ್ನಡ ಓದಿಗೆ ಪ್ರೇರೇಪಿಸುವುದರ ಮೂಲಕ ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುವಂತೆ ಮಾಡುವುದು.

ಭಾರತೀಯ ಸಮಾಜವು ಅಲ್ಪಸಂಖ್ಯಾತರನ್ನು ಗುರುತಿಸಲು ಜನಸಂಖ್ಯಾ ಮಾನದಂಡವನ್ನು ಬಿಟ್ಟು ಭಾಷೆ, ಮತ, ಸಂಸ್ಕೃತಿಯ ಆಧಾರದ ಮೇಲೆ ವರ್ಗೀಕರಣವನ್ನು ಮಾಡುತ್ತಿದೆ.

೧ ಭಾಷಾ ಅಲ್ಪಸಂಖ್ಯಾತರು

ಲಿಪಿಯಿರುವ ಭಾಷೆಯನ್ನು ಪ್ರಮಾಣ ಭಾಷೆಯಾಗಿ ಸ್ವೀಕರಿಸುವುದರಿಂದ ಎಷ್ಟೋ ನಿರ್ಲಿಪಿ ಭಾಷೆಗಳು ಜಗತ್ತಿನಲ್ಲಿ ಅವಜ್ಞೆಗೊಳಗಾಗುತ್ತಿವೆ. ಅವುಗಳನ್ನಾಡುವ ಜನರ ಸಂಖ್ಯೆಯೂ ಕಡಿಮೆಯಿದ್ದು ಮುಖ್ಯ ವಾಹಿನಿಯಿಂದ ದೂರ ಉಳಿದಿರುವುದರಿಂದ ಭಾಷಾ ಕ್ಷೇತ್ರದಲ್ಲಿ ಈ ಭಾಷಾ ಅಲ್ಪಸಂಖ್ಯಾತರ ಪ್ರಶ್ನೆ ಇಂದು ಜಾಗತಿಕ ಮಟ್ಟದಲ್ಲಿ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಸುಮಾರು ಏಳು ಸಾವಿರದಷ್ಟಿದ್ದ ಭಾಷೆಗಳು ಇಂದು ಆರು ಸಾವಿರಕ್ಕಿಳಿದಿರುವುದೇ ಅಲ್ಪಸಂಖ್ಯಾತ ಭಾಷೆಗಳ ಅವನತಿಯನ್ನು ಸೂಚಿಸುತ್ತಿದೆ. ಜೀವನಕ್ಕಾಗಿ ಜನ ಇಂದು ಪ್ರಮಾಣಿತ ಭಾಷೆಯ ಕಡೆಗೆ ವಾಲುತ್ತಿದ್ದಾರೆ. ಉದಾ: ತುಳುವರು, ಕುಣಿಯರು ಇತ್ಯಾದಿ

೨ ಜಾತಿ ಅಲ್ಪಸಂಖ್ಯಾತರು

ವೃತ್ತಿಯನ್ನು ಆಧರಿಸಿಯೇ ವರ್ಗೀಕರಣವನ್ನೂ ಮಾಡಲಾಗಿದೆ. ಅದು ಅವರ ವೃತ್ತಿ ಸೂಚಕವಾಗಿಯೂ, ಜಾತಿ ಸೂಚಕವಾಗಿಯೂ ಬಳಸಲಾಗುತ್ತಿತ್ತು. ಉದಾ: ಕುಂಬಾರರು, ಕಮ್ಮಾರರು, ಮಡಿವಾಳರು, ಭಜಂತ್ರಿಯವರು ಇತ್ಯಾದಿ

೩ ಮತೀಯ ಅಲ್ಪಸಂಖ್ಯಾತರು ಅಥವಾ ಧಾರ್ಮಿಕ ಅಲ್ಪಸಂಖ್ಯಾತರು

ಭಾರತದಲ್ಲಿ ಮತೀಯ ಅಲ್ಪಸಂಖ್ಯಾತರನ್ನು ಮುಖ್ಯ ವಾಹಿನಿಗೆ ತರುವ ಸಲುವಾಗಿ ವರ್ಗೀಕರಿಸಿದರು. ಆದರೆ ಇಂದು ಆ ವರ್ಗೀಕರಣ ಅವರಿಗಾಗಿ ಅಲ್ಲದೇ ರಾಜಕಾರಣಿಗಳ ಉದ್ಧಾರಕ್ಕಾಗಿ ದುರುಪಯೋಗಗೊಳ್ಳುವುದನ್ನು ಕಾಣುತ್ತಿದ್ದೇವೆ.

೪ ಧಾರ್ಮಿಕ ಅಲ್ಪಸಂಖ್ಯಾತರು ಮುಸಲ್ಮಾನರು

ಮುಸ್ಲಿಮರು ಭಾರತಕ್ಕೆ ಬಂದು ಸುಮಾರು ೧೨೫೦ ವರ್ಷಗಳು ಕಳೆದಿವೆ. ಅಂದರೆ ಇವರು ಕ್ರಿ.ಶ. ಎಂಟನೆಯ ಶತಮಾನದದಲ್ಲಿ ಭಾರತವನ್ನು ಪ್ರವೇಶಿಸಿದರು. ಮೊದಲಿಗೆ ಇವರು ಭಾರತದ ಅನೇಕ ಪದಾರ್ಥಗಳನ್ನು ಯೂರೋಪು ದೇಶಗಳಿಗೆ ಕೊಂಡೊಯ್ಯುತ್ತಿದ್ದರು. ಇವರ ಮೂಲ ಉದ್ದೇಶ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸುವುದೇ ಆಗಿತ್ತು. ಆದರೆ

ಮೊಹಮ್ಮದ್ ಘಜ್ನಿ, ಮೊಹಮದ್ ಘೋರಿಗಳ ದಾಳಿ ಮತ್ತು ಇನ್ನಿತರ ಕಾರಣಗಳಿಂದಾಗಿ ಇಸ್ಲಾಂ ಧರ್ಮ ಭಾರತಕ್ಕೆ ಪ್ರವೇಶಿಸಿ ಸ್ಥಿರವಾಗಿ ನೆಲೆಸಿತು. ಅನಂತರ ಅಸ್ತಿತ್ವಕ್ಕೆ ಬಂದ ಮುಸ್ಲಿಂ ಸಾಮ್ರಾಜ್ಯವು ಭಾರತದಲ್ಲಿ ಸುಮಾರು ೪೦೦ ವರ್ಷಗಳವರೆಗೆ ಆಳ್ವಿಕೆ ನಡೆಸಿ, ಬ್ರಿಟಿಷ್‌ರ ಆಡಳಿತದ ಸ್ಥಾಪನೆಯಿಂದಾಗಿ ಕೊನೆಗೊಂಡಿತ್ತು. ಮುಸ್ಲಿಂ ಸಾಮ್ರಾಜ್ಯಗಳು ನಮ್ಮ ದೇಶದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯದ ಮೇಲೆ ಮಹತ್ತರ ಪ್ರಭಾವವನ್ನು ಬೀರಿದವು.

ಭಾರತೀಯ ಮುಸ್ಲಿಮರಲ್ಲಿ ಬಹುತೇಕರು ಹಿಂದೂ ಧರ್ಮದಿಂದ ಮತಾಂತರ ಹೊಂದಿದವರಾಗಿದ್ದಾರೆ. ಇವರಲ್ಲಿ ಸುಮಾರು ಶೇ.೮೦ ರಷ್ಟು ಹಿಂದೂಗಳು ಸೇರಿದ್ದಾರೆ. ಇದಕ್ಕೆ ಆ ಕಾಲಘಟ್ಟದಲ್ಲಿದ್ದ ಹಿಂದೂ ಧರ್ಮದ ಕಂದಾಚಾರಗಳ ಜೊತೆಗೆ ಆಗಿನ ಮುಸ್ಲಿಂ ರಾಜರ ಒತ್ತಡವೂ ಕಾರಣವಾಗಿರ ಬಹುದು. ಇದಕ್ಕೆ ಉದಾಹರಣೆಯೆಂದರೆ ಮಾಸ್ತಿಯವರ 'ಡುಬಾಯಿ ಪಾದ್ರಿ' ಕತೆಯಾಗಿದೆ.

'ಡುಬಾಯಿ ಪಾದ್ರಿ' ಕಥೆಯಲ್ಲಿ ಮಾಸ್ತಿಯವರು ಪ್ರಸ್ತಾಪಿಸಿರುವಂತೆ ಟಿಪ್ಪು ಸುಲ್ತಾನನ ಕಾಲದಲ್ಲಿ ಹೇಗೆ ಮುಸ್ಲಿಂ ಅಧಿಕಾರಿಗಳು ಎಷ್ಟೋ ಜನ ಮುಗ್ಧ ಹಿಂದೂಗಳನ್ನು ಬಲವಂತವಾಗಿ ಮತಾಂತರಕ್ಕೆ ಒಳಪಡಿಸುತ್ತಿದ್ದರು ಎಂಬ ವಿಚಾರ ಅತ್ಯಂತ ಅರ್ಥಪೂರ್ಣವಾಗಿ ವಿವರಿಸಲಾಗಿದೆ. ೧೯೪೭ರಲ್ಲಿ ಭಾರತದಿಂದ ಪಾಕಿಸ್ತಾನವು ವಿಭಜನೆಗೊಂಡಾಗ ಅಲ್ಲಿದ್ದ ಮುಸ್ಲಿಮರಲ್ಲಿ ಶೇ.೧೭ರಷ್ಟು ಮಾತ್ರ ವಲಸೆ ಹೋಗಿ ಶೇ.೮ರಷ್ಟು ಭಾರತದಲ್ಲೇ ಉಳಿದರು. ಇಲ್ಲೇ ನೆಲೆಸಿದವರಲ್ಲಿ ಬಹುಮಂದಿ ಅವಿದ್ಯಾಂತರು ಮತ್ತು ಕಡು ಬಡವರಾಗಿದ್ದರು. ಅಂದು ಶೇ.೮ರಷ್ಟಿದ್ದ ಮುಸ್ಲಿಮರು ಇಂದು ಶೇ.೧೧.೬೭ಕ್ಕಿಂತಲೂ ಹೆಚ್ಚಾಗಿದ್ದಾರೆ.

ನವೋದಯ ಸಾಹಿತ್ಯ ಬಿಟ್ಟರೆ ನಂತರ ಅಲ್ಪಸಂಖ್ಯಾತರ ಕುರಿತಾದ ಸಾಹಿತ್ಯ ಬೆಳಕಿಗೆ ಬಂದದ್ದು ಪತ್ರಿಕೆಗಳ ಮೂಲಕವೇ. ಸಾರಾರವರ ಸಾಹಿತ್ಯವು ಬೆಳಕಿಗೆ ಬಂದದ್ದು ಲಂಕೇಶ್ ಪತ್ರಿಕೆಯ ಮೂಲಕವೇ. ಬೊಳುವಾ'ರುರವರು ತಮ್ಮದೇ ಅಲ್ಪಸಂಖ್ಯಾತ ಸಮುದಾಯದ ಕತೆಗಳ ಪ್ರಕಟಣೆಗೆ ಆಯ್ದುಕೊಂಡ ಮಾಧ್ಯಮ ಪತ್ರಿಕೆಗಳೇ.

ಬಂಡಾಯ ಸಾಹಿತ್ಯದ ಮತ್ತೊಂದು ಮಹತ್ವದ ಆಯಾಮವೆಂದರೆ ಮುಸ್ಲಿಂ ಲೇಖಕರು ತಮ್ಮ ಲೋಕದ ಮೌನವನ್ನು ಒಡೆದು ಅದರೊಳಗೆ ಅಡಗಿರುವ ಸತ್ಯವನ್ನು ಸಾಹಿತ್ಯದ ಮೂಲಕ ಅನಾವರಣಗೊಳಿಸಿದ್ದೇ ಆಗಿದೆ. ಧರ್ಮದ ಹೆಸರಿನಲ್ಲಿ ಕ್ರಿಮಿಗಳಂತೆ ಜನರ ರಕ್ತ ಹೀರುವ

ಜಮೀನ್ದಾರಿ ಮತ್ತು ಬಂಡವಾಳ ಶಾಹಿಗಳ ಹಿಡಿತವನ್ನು ಅವರು ನಮ್ಮ ಮುಂದೆ ತೆರೆದಿಡುತ್ತಾರೆ. ಕನ್ನಡದಲ್ಲಿ ಬರೆಯಲು ತೊಡಗಿದ ಮುಸ್ಲಿಂ ಲೇಖಕಿಯರು ಮಹಿಳಾ ಸಾಹಿತ್ಯಕ್ಕೆ ಮಾತ್ರವಲ್ಲ, ಕನ್ನಡ ಸಾಹಿತ್ಯಕ್ಕೇ ಒಂದು ಮಹತ್ವದ ಕೊಡುಗೆ ನೀಡಿದ್ದಾರೆ. ಈ ಪೈಕಿ ಸಾರಾ ಅಬೂಬಕರ್, ಬಾನು ಮುಷ್ತಾಕ್, ಬೊಳುವಾರು, ಕಟ್ಪಾಡಿ ಮೊದಲಾದವರು ಮುಖ್ಯವಾಗಿ ಕಂಡುಬರುತ್ತಾರೆ. ಧರ್ಮದ ಹಿಡಿತದ ಮೂಲಕ ಪುರುಷರು ದೌರ್ಜನ್ಯಕ್ಕೆ ಒಳಗಾಗಿರುವ, ಸಮುದಾಯದಲ್ಲಿದ್ದು ಅದರೊಳಗಿಂದಲೇ ಅದನ್ನು ವಿರೋಧಿಸಿ ಮಹಿಳೆಯರು ಬರೆಯಲು ತೊಡಗಿದ್ದು ಒಂದು ದೊಡ್ಡ ಬಂಡಾಯ ಎನ್ನಬಹುದು.

ಸಾರಾರವರ 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿಯು ಆರ್ಥಿಕ ಪರಾಧೀನತೆಯಲ್ಲಿರುವ ಹೆಣ್ಣನ್ನು ಧರ್ಮದ ಹೆಸರಿನಲ್ಲಿ ಹತ್ತಿಕ್ಕುವುದನ್ನು ಬಿಚ್ಚಿ ತೋರಿಸುತ್ತದೆ. ನಾಯಕಿ ನಾದಿರಾ, ಗಂಡ ಮತ್ತು ತಂದೆಯ ಪ್ರತಿಷ್ಠೆಗಳಿಗೆ ಬಲಿಪಶುವಾಗುತ್ತಾಳೆ. ಹೆತ್ತ ತಂದೆ ಮತ್ತು ಕಟ್ಟಿಕೊಂಡ ಗಂಡ ಇಬ್ಬರೂ ತಮ್ಮ ಸ್ವಪ್ರತಿಷ್ಠೆಯ ಹೆಸರಿನಲ್ಲಿ ಅವಳನ್ನು ಸಂಕಟಕ್ಕೀಡು ಮಾಡುತ್ತಾರೆ. ಕಾದಂಬರಿಯಲ್ಲಿ ತಂದೆ, ಮಗಳು, ಅಳಿಯ ಮುಂತಾದ ಎಲ್ಲ ಸಂಬಂಧಗಳನ್ನು ಒರೆಗೆ ಹಚ್ಚಲಾಗಿದೆ. ನಾದಿರಾಳ ತಂದೆ ಮಗಳಿಗೆ ಗೊತ್ತಿಲ್ಲದ ಹಾಗೆ ಅಳಿಯನಿಂದ ತಲಾಕ್ ಕೊಡುವ ಹಾಗೆ ಮಾಡುತ್ತಾನೆ. ಗಂಡನಾದವನು ಹೆಂಡತಿಗೆ ತಿಳಿಯದಂತೆ ಅವಳಿಂದ ಮಗುವನ್ನು ಕದ್ದೊಯ್ಯುತ್ತಾನೆ. ಗಂಡ, ಹೆಂಡತಿಯಾದವಳನ್ನು ತನ್ನೊಂದಿಗೆ ಬದುಕು ಸಾಗಿಸಲು ಕರೆಯುವುದಿಲ್ಲ. ಅದೇ ರೀತಿ ತಂದೆಯಾದವನು ಮಗಳ ಸಂಸಾರ ಸರಿ ಮಾಡಿ ಅವಳನ್ನು ಗಂಡನ ಮನೆಗೆ ಕಳುಹಿಸುವುದಿಲ್ಲ. ಇವೆಲ್ಲವುನ್ನೂ ಸಹಿಸಿಕೊಂಡ ನಾದಿರಾ ತಂದೆ ತನಗೆ ಮರುಮದುವೆ ಮಾಡಲು ಸಿದ್ದನಾದಾಗ ಅದನ್ನು ವಿರೋಧಿಸಿ ಹಾಗೆ ಮಾಡಿದರೆ ತಾನು ಸಾಯುವುದಾಗಿ ಹೇಳುತ್ತಾಳೆ. ಸುಖ ಸಂಸಾರಕ್ಕಾಗಿ ಅಥವಾ ಮಗಳ ಸುಂದರ ಭವಿಷ್ಯಕ್ಕಾಗಿ ಹಂಬಲಿಸಬೇಕಾದ ತಂದೆ, ತಾಯಿ, ಗಂಡ ಮೊದಲಾದ ಸಂಬಂಧಗಳು ತಮ್ಮ ಪ್ರತಿಷ್ಠೆಗಾಗಿ ಹೆಣ್ಣಿನ ಆಸೆ, ಆಕಾಂಕ್ಷೆಗಳಿಗೆ ಗಮನ ನೀಡದೆ ವರ್ತಿಸುವುದನ್ನು ಇಲ್ಲಿ ಕಾಣಬಹುದು. ಹೆಣ್ಣಿನ ಜೀವನದಲ್ಲಿ ಬರುವ ಪ್ರತಿಯೊಬ್ಬರು ಆಕೆಯ ಮೇಲೆ ಶೋಷಣೆ ಮಾಡುತ್ತಿದ್ದರೂ, ಹೆಣ್ಣೊಬ್ಬಳು ಮೌನವಾಗಿರುವುದರ ಬಗ್ಗೆ ಇಲ್ಲಿ ಲೇಖಕರು ಮಾತನಾಡಿದ್ದಾರೆ.

ಸಾರರವರ "ಚಪ್ಪಲಿಗಳು" ಕತೆಯಲ್ಲಿ ಇಸ್ಲಾಂ ಧರ್ಮದಲ್ಲಿ ವಜ್ರಗಳ ಹಾಗೆ ನಮ್ಮ ಹೆಣ್ಣುಗಳನ್ನು ಜೋಪಾನವಾಗಿ ರಕ್ಷಿಸಬೇಕು ಎನ್ನುತ್ತಲೇ ಚಪ್ಪಲಿಯ ಹಾಗೆ ಬಳಸಿ ಎಸೆದಿದ್ದರ ಬಗ್ಗೆ ಸಾಕಷ್ಟು

ಪುರಾವೆಗಳನ್ನು ಒದಗಿಸಿದ್ದಾರೆ. ಸಂಸ್ಕೃತಿ, ಧರ್ಮದ ಹೆಸರಿನಲ್ಲಿ ನಡೆದಿರುವ ಮಹಿಳೆಯರ ಶೋಷಣೆಯನ್ನು ಅವರು ಗಂಭೀರವಾಗಿ ಪರಿಗಣಿಸಿ ಪ್ರತಿಭಟಿಸಿದ್ದಾರೆ.

ಸಾರಾ ಅವರ ನಂತರ ಬಂದಂತಹ ಮತ್ತೊಬ್ಬ ಲೇಖಕಿ ಬಾನು ಮುಷ್ತಾಕ್. ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಪ್ರಪಂಚದಾದ್ಯಂತ ಧರ್ಮ ಮತ್ತು ದೇವರುಗಳನ್ನು ನಿರಾಯಾಸವಾಗಿ ಬಳಸಿ ಕೊಳ್ಳಲಾಗಿದೆ ಎಂದು ಹೇಳುತ್ತಾ ಈ ಬಳಕೆ ತಮ್ಮ ಮುಸ್ಲಿಂ ಜನಾಂಗದಲ್ಲಿ ನಡೆಯುತ್ತಿರುವುದರ ವಸ್ತುನಿಷ್ಠ ಚಿತ್ರಣ ನೀಡಿದ್ದಾರೆ. ಪುರುಷರು ತಮಗೆ ದೊರೆತ ಧಾರ್ಮಿಕ ಸವಲತ್ತುಗಳನ್ನು ಹೇಗೆ ಸ್ತ್ರೀಯರ ಶೋಷಣೆಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಚಿತ್ರಿಸುತ್ತಾರೆ.

ಬಾನುರವರ "ದೇವರು ಮತ್ತು ಅಪಘಾತ"[೨] ಕತೆಯಲ್ಲಿ ಮುಸ್ಲಿಂ ಜನಾಂಗದಲ್ಲಿನ ಒಬ್ಬ ಬಡ ಮಹಿಳೆಯ ಜೀವನದ ಚಿತ್ರಣವಿದೆ. ಮಧ್ಯಮ ಮತ್ತು ಶ್ರೀಮಂತ ವರ್ಗದಲ್ಲಿನ ಮಹಿಳೆಯರು ಪುರುಷರ ಅಧೀನದಲ್ಲಿ ಬದುಕುತ್ತಲೇ ತಮ್ಮ ಬದುಕನ್ನು ಕಳೆದುಕೊಳ್ಳುತ್ತಿದ್ದರೆ, ಕತೆಯ ನಾಯಕಿ ಮುಂಮಮ್ ಬೀ ಬೇರೆ ರೀತಿಯವಳು. ಈಕೆಗೆ ಗಂಡ ಅಥವ ಇತರ ಪುರುಷ ಪಾತ್ರಗಳು ಇವರ ಜೀವನದಲ್ಲಿ ಇಲ್ಲ. ಆದರೆ ಅವರೆಲ್ಲಗಿಂತಲೂ ಇವಳನ್ನು ಕಾಡುವುದು ಕಾಡುತ್ತಲೇ ಮುಂದಿನ ಜೀವನದ ಬಗ್ಗೆ ಯೋಚಿಸುವಂತೆ ಮಾಡುವ ಬಡತನ. ಸತ್ತ ಹೆಂಗಸರ ಶವವನ್ನು ಶುದ್ಧಿ ಮಾಡಿ ಅಂತಿಮ ಕಾರ್ಯಕ್ಕೆ ಹೆಣಗಳನ್ನು ಅಣಿ ಮಾಡುವ ಕೆಲಸದಲ್ಲಿ ಜೀವನ ಸಾಗಿಸುವಳು. ಇತರರಂತೆ ತಾನು ಬದುಕಬೇಕು ಎಂಬ ಕನಸು ಕಾಣುವ ಈಕೆ ಅದು ತನ್ನ ಜೀವನದಲ್ಲಿ ಸಾಧ್ಯವಿಲ್ಲ ಎಂದು ಅರಿತಾಗ ಈ ಕೆಲಸವನ್ನು ಆಯ್ದುಕೊಳ್ಳುತ್ತಾಳೆ. ಈ ಕಾರ್ಯದ ಮುಖಾಂತರವೇ ಹೆಣಗಳ ಮೈ ಮೇಲಿನ ವಸ್ತ್ರ, ಒಡವೆಗಳನ್ನು ಪಡೆಯುವ ಮೂಲಕ ತೃಪ್ತಳಾಗುತ್ತಾಳೆ. ಆದರೆ ಈ ಜೀವನ ದಿನವೂ ನಡೆಯುವುದಿಲ್ಲ. ಪ್ರತಿದಿನವೂ ಇವರ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಮಹಿಳೆಯರು ಸಾಯುವುದಿಲ್ಲ. ಈ ಮೂಲಕ ಇವಳಿಗೆ ತನ್ನ ಬಾಣಂತಿ ಮಗಳಿಗೆ ಆಹಾರ ದೊರಕಿಸಿಕೊಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿದ್ದಾಳೆ. ಕೆರೆಯ ಅಂಗಳದಲ್ಲಿ ಗುಡಿಸಲು ಹೊಂದಿರುವ ಇವಳಿಗೆ ಮಳೆ ಬಂದರೆ ಮುಳುಗುವುದು ಎಂಬುದು ತಿಳಿದಿದೆ. ಆದರೂ ಪರಿಸ್ಥಿತಿಯ ಕೈಗೊಂಬೆಯಾದ ಈಕೆ ಆದರಲ್ಲೇ ವಾಸಿಸುತ್ತಾಳೆ. ತಾನು ಒಂದು ಹೆಣ್ಣಾಗಿದ್ದರೂ ಇಂದು ತನ್ನ ಪರಿಸ್ಥಿತಿಯ ಹಲವಾರು ಒತ್ತಡಗಳಿಂದ ಇದೀಗ ಈಕೆ ಯಾರಾದರೂ ಒಬ್ಬ ಮಹಿಳೆ ಸತ್ತರೆ ಸಾಕೆಂದು ದೇವರನ್ನು ಬೇಡುತ್ತಾಳೆ.

ಊರಿನ ಶ್ರೀಮಂತರೊಬ್ಬರ ಮನೆಯಲ್ಲಿ ಅಪಘಾತಕ್ಕೀಡಾಗಿ ಮೂರುಜನ ಹೆಣ್ಣು ಮಕ್ಕಳು ಸತ್ತಿದ್ದಾರೆ ಎಂದು ತಿಳಿದ ತಕ್ಷಣ ಆಕೆಗೆ ಸಂತಸವಾಗುತ್ತದೆ. ಸತ್ತರು ಎಂಬ ವಿಚಾರವನ್ನು ಕೇಳಿದಾಗ ಒಂದು ಕ್ಷಣವಾದರೂ ದುಃಖ ವ್ಯಕ್ತಪಡಿಸಬೇಕಾಗಿದ್ದ ಆಕೆಗೆ ತನ್ನ ಸಂದರ್ಭದ ಒತ್ತಡಗಳಲ್ಲಿ ಅದನ್ನು ಮರೆಯುತ್ತಾಳೆ. ಅತಿ ಶೀಘ್ರದಲ್ಲಿ ಆ ಸೂತಕದ ಮನೆಗೆ ತೆರಳುವ ಆಕೆ ಅಲ್ಲಿ ಹೆಪ್ಪುಗಟ್ಟಿರುವ ದುಃಖವನ್ನು ಗಮನಿಸಿಯೂ ಗಮನಿಸದವಳಂತೆ ತನ್ನ ಕಾರ್ಯದಲ್ಲಿ ಮಗ್ನಳಾಗುತ್ತಾಳೆ. ಯಾಂತ್ರಿಕವಾಗಿ ತನ್ನ ಕಾರ್ಯ ಮಾಡುತ್ತಿರುವ ಆಕೆಯ ಮನಸ್ಸಿನಲ್ಲಿ ಹಲವು ವಿಚಾರಗಳು ಬಂದು ಹೋಗುತ್ತವೆ. ಅಪಘಾತದಲ್ಲಿ ಸತ್ತಿರುವುದರಿಂದ ಅವರ ಒಡವೆ, ವಸ್ತ್ರಗಳು ತನಗೆ ದೊರೆಯಲಿಲ್ಲವೆಂದು ಕೊರಗುತ್ತಾಳೆ. ಶುದ್ಧಿಗೊಳಿಸುವ ಕಾರ್ಯ ಮುಗಿದು ಹೆಣಗಳನ್ನು ಅಂತಿಮ ಯಾತ್ರೆಗೆ ಸಿದ್ಧ ಮಾಡಿಕೊಟ್ಟ ನಂತರ ಅವಳು ತನ್ನ ದೇಹವನ್ನು ತಾನು ತುಂಬ ದಿನಗಳಿಂದ ಕಾಣದಿದ್ದ ಸೋಪು, ಸುಗಂಧ ದ್ರವ್ಯಗಳ ಮೂಲಕ ಶುದ್ಧಗೊಳಿಸುತ್ತಾಳೆ. ಹಸಿವಿನಿಂದ ಮನೆಯಲ್ಲಿ ಮಲಗಿರುವ ಮಗಳನ್ನು ಈ ಸಂದರ್ಭದಲ್ಲಿ ನೆನೆದರೂ ನಡೆಯುವುದು ಇವಳೊಬ್ಬಳ ಹಸಿವು ಹಿಂಗಿಸಿಕೊಳ್ಳುವ ಕಾರ್ಯ ಮಾತ್ರ.

ತನ್ನ ಹಸಿವು ತೀರಿಸಿಕೊಂಡು ಹೆಣಗಳ ಮೇಲಿನ ಬಟ್ಟೆಗಳು ಮತ್ತು ಅಲ್ಲಿ ನೀಡುವ ಅಕ್ಕಿ ಮತ್ತಿತರ ವಸ್ತುಗಳನ್ನು ಪಡೆದುಕೊಂಡು ಮನೆಗೆ ಮರಳುವ ಆಕೆ ಹೆಣಕ್ಕಿಂತ ಕಡೆಯಾಗಿ ಜೀವಂತ ಹೆಣವಾಗಿರುವ ಮಗಳಿಗೆ ಊಟ ಮಾಡಿಸುತ್ತಾಳೆ. ಹೆಣದ ದೇಹಗಳನ್ನು ಶುಚಿಗೊಳಿಸಿ ಅದರಿಂದ ಬರುವ ಆದಾಯದಿಂದ ತಮ್ಮ ಜೀವನ ನಿರ್ವಹಣೆ ಮಾಡುವ ಇವರು ತಾವು ಸಹ ಜೀವಂತ ಹೆಣಗಳಂತೆ ಯಾವುದೇ ಏರಿಳಿತಗಳಿಲ್ಲದೆ ಜೀವನ ವಿಧಾನಕ್ಕೆ ಒಗ್ಗಿಕೊಂಡಿರುತ್ತಾರೆ. ಇವರಿಗೆ ಯಾವುದೇ ಭಾವನೆಗಳಿಲ್ಲ. ಕೇವಲ ತಮ್ಮ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಿಕೊಂಡು ತಮ್ಮ ಹಸಿವು ನೀಗಿಸಿಕೊಳ್ಳುವುದೇ ಇವರ ಮುಖ್ಯ ಉದ್ದೇಶವಾಗಿದೆ. ಇಸ್ಲಾಂ ಧರ್ಮದಲ್ಲಿರುವ ನಿಯಮಗಳು ಹೆಣ್ಣಿಗೆ ಸತ್ತ ಮೇಲೂ ಹೇಗೆ ಮುಖ್ಯವಾಗುತ್ತವೆ ಎಂಬುದು ಕತೆಯಲ್ಲಿ ವ್ಯಕ್ತವಾಗುತ್ತದೆ. ಹೆಣ್ಣೊಬ್ಬಳು ಸತ್ತು ಮೂರು ದಿನವಾಗಿ ಆಕೆಯ ದೇಹ ಕೊಳೆತಾಗ ಮಾತ್ರ ಆಕೆ ಒಬ್ಬ ಉತ್ತಮ ಮಹಿಳೆಯಾಗಲು ಸಾಧ್ಯ ಎಂಬ ಘೋರ ನಿಯಮವನ್ನು ಕತೆ ಎತ್ತಿ ತೋರಿಸುತ್ತದೆ. ಮಹಿಳೆ ಬದುಕಿದ್ದಾಗ ಮಾತ್ರವಲ್ಲದೆ ಸತ್ತ ನಂತರವೂ ಗಂಡಿನ ಕಟ್ಟುನಿಟ್ಟುಗಳಿಗೆ ಒಳಗಾಗಿ ಅಲ್ಲಿಯೂ ನಿಯಮಗಳಿಗೆ ಬದ್ಧವಾಗಿ ಆಕೆಯ ಶವ ಸಂಸ್ಕಾರ ನಡೆಯಬೇಕು ಎಂಬುದು ಇಲ್ಲಿ

ತಿಳಿಸುತ್ತದೆ. ಈ ರೀತಿಯ ನಿಯಮಗಳಿಂದಲೇ ಅತಿ ಬಡತನದಲ್ಲಿದ ಕೆಲವು ಜನ ತಮ್ಮ ಕೆಲವು ಹೊತ್ತಿನ ಆಹಾರದ ಸಮಸ್ಯೆಗಳನ್ನು ನೀಗಿಸಿಕೊಳ್ಳುತ್ತಾರೆ ಎಂಬುದನ್ನು ಗಮನಿಸಬಹುದಾಗಿದೆ.

"ದೇವರು ಮತ್ತು ಅಪಘಾತ" ಎಂಬ ಕತೆಯಲ್ಲಿ ದೇವರ ಹೆಸರಿನಲ್ಲಿ ಇರುವ ನಿಯಮಗಳು, ಅದೇ ರೀತಿ ದೇವರೇ ಸೃಷ್ಟಿಸಿರುವ ಮನುಷ್ಯರ ಜೀವನ, ಅಪಘಾತಗಳು ಹಾಗೂ ಅದರಿಂದಾಗುವ ತಿರುವುಗಳನ್ನು ಕತೆಯು ಅನಾವರಣಗೊಳಿಸುತ್ತದೆ.

ಫಕೀರ ಮಹಮ್ಮದ್ ಕಟ್ಪಾಡಿಯವರ "ನೋಂಬು" ಕತೆಯಲ್ಲಿ ಬಡ ಮತ್ತು ಶ್ರೀಮಂತ ಅಲ್ಪಸಂಖ್ಯಾತ ಸಮುದಾಯದ ಚಿತ್ರಣವನ್ನು ಕಾಣಬಹುದು. ಬಡ ಹುಡುಗನೊಬ್ಬ ಉಪವಾಸದ ವ್ರತವನ್ನು ಕೈಗೊಂಡು ತಾನು ತನ್ನ ಸ್ನೇಹಿತನಂತೆ ಉತ್ತಮ ಸ್ಥಿತಿಯನ್ನು ಹೊಂದುವುದರ ಕನಸು ಹೊತ್ತು ವ್ರತ ನಿರತನಾಗುತ್ತಾನೆ.

ಬೊಳುವಾರುರವರ ಎಲ್ಲಾ ಸಂಕಲನಗಳ ಕಥೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ಚಿತ್ರಣವನ್ನು ಕಾಣಬಹುದು. ಅವರ 'ಕೇಸರಿ ಬಿಳಿ ಹಸುರು ಮೂರು ಬಣ್ಣ ನಡುವೆ ಚಕ್ರ' ಕತೆಯ'ಲ್ಲಿ, ಉತ್ತಮ ಸ್ಥಿತಿಯಲ್ಲಿರುವ ಅಲ್ಪಸಂಖ್ಯಾತ ಸಮುದಾಯವನ್ನು ಕಾಣಬಹುದು. ಇವರೊಂದಿಗೆ ಬಹುಸಂಖ್ಯಾತ ಸಮುದಾಯವನ್ನು ಚಿತ್ರಿಸಿದ್ದಾರೆ. ಊರಿನ ಜನ ಕೆಲಸಕ್ಕೆ ಬಾರದವರು ಎಂದು ತಿಳಿದಿದ್ದ 'ಮೂರೆಲೆ ಬಳಗ'ದ ಯುವ ಪಡೆ ಊರಿನ ಚಿತ್ರಣವನ್ನೇ ಬದಲಾಸುತ್ತಾರೆ. ಖಾದರ್ ಮತ್ತು ಸಿದ್ದಪ್ಪ ಈ ಇಬ್ಬರು ವ್ಯಕ್ತಿಗಳ ಮಾತುಗಳಿಂದ ಎರಡೂ ಸಮುದಾಯದ ಒಟ್ಟು ಅಭಿಪ್ರಾಯದ ಚಿತ್ರಣ ದೊರೆಯುತ್ತದೆ. ಇಲ್ಲಿ ಸಂಘಟಿತರಾದ ಅಸಂಖ್ಯಾತ ಮತ್ತು ಬಹುಸಂಖ್ಯಾತ ಸಮುದಾಯದ ಚಿತ್ರಣವನ್ನು ಕಾಣಬಹುದು. "ಓದು" ಎಂಬ ಕತೆಯಲ್ಲಿ ಬೊಳುವಾರುರವರು ಬಡತನ', ವಿದ್ಯೆಯಿಲ್ಲದ ಅಲ್ಪಸಂಖ್ಯಾತ ಸಮುದಾಯದ ಚಿತ್ರಣ ನೀಡುತ್ತಾರೆ. ಓದಿನಲ್ಲಿ ಆಸಕ್ತಿ ಹೊಂದಿ ಅದಕ್ಕಾಗಿ ಹೋರಾಡುವ ಚಿಕ್ಕ ಹುಡುಗನನ್ನು ಕಾಣಬಹುದು. ಈ ಕತೆಯಲ್ಲಿ ಸ್ನೇಹಿತನಾದ ಸದಾನಂದನ ಸಹಾಯದಿಂದ, ಅಲ್ಪಸಂಖ್ಯಾತ ಸಮುದಾಯದ ಸಣ್ಣ ಹುಡುಗನಿಗೆ ಓದಿನಲ್ಲಿ ಆಸಕ್ತಿ ಮೂಡುವಂತೆ ಮಾಡಿದ ನಾರಾಯಣ ಮಾಸ್ತರ್‌ರನ್ನು ಇಲ್ಲಿ ಕಾಣಬಹುದು. ಕಾಸಿಂ ಮದ್ರಾಸ್‌ನಲ್ಲಿ ಅರಬ್ಬಿ ಭಾಷೆಯನ್ನು ಕಲಿಯುತ್ತಿರುವುದು 'ಧಾರ್ಮಿಕ ಆಯ್ಕೆ' ಎಂಬುದನ್ನು ತಿಳಿಸುತ್ತಾನೆ. ಕನ್ನಡ, ಅರೇಬಿಕ್ ಭಾಷೆ ಓದಿಯೂ ಅಥವಾ ಓದದೆಯೂ ಯಾರಾದರೂ ಸಾಮಾಜಿಕವಾಗಿ ಸುಖವಾಗಿರಬಹುದು ಎಂಬುದನ್ನು ತಿಳಿಸುತ್ತಾನೆ. ತನ್ನ ಮಗನು ವಿದ್ಯೆ ಕಲಿಯಬೇಕು ಎಂದು

ಕಾತರಳಾದ ಸಾರಮ್ಮನನ್ನು ಇಲ್ಲಿ ಕಾಣಬಹುದು. ಬಡತನದಲ್ಲಿಯೂ ವಿದ್ಯೆ ಕಲಿಕೆಯಲ್ಲಿ ಆಸಕ್ತಿ ಹೊಂದಿರುವ ಅಲ್ಪಸಂಖ್ಯಾತ ಸಮುದಾಯವನ್ನು ಚಿತ್ರಿಸಲಾಗಿದೆ.

"ಮೀನು ಮಾರುವವನು" ಕತೆಯಲ್ಲಿ ಉದ್ಯೋಗನಿರತನಾದ ರಜಾಕ್‌ನನ್ನು ಕಾಣಬಹುದು. ಮೀನು ಮಾರುವುದರಲ್ಲಿ ಅವನಿಗಿರುವ ಆಸಕ್ತಿ, ಸಮಯ ವ್ಯರ್ಥ ಮಾಡದೇ ಅವನು ಕೆಲಸದಲ್ಲಿ ನಿರತನಾಗುವಂತೆ ಮಾಡುತ್ತದೆ. ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಎರಡು ಸಮುದಾಯದ ಚಿತ್ರಣವನ್ನು ಇಲ್ಲಿ ತಂದಿದ್ದಾರೆ. ಅಲ್ಪಸಂಖ್ಯಾತರು ಎಂದರೇ ಬರಿಯ ಕೊಳಕರು ಎಂದು ಭಾವಿಸುವ ಸಮುದಾಯಕ್ಕೆ ಅವರಲ್ಲಿಯೂ ಇರುವ ಶುಚಿತ್ವವನ್ನು ಬೊಳುವಾರುರವರು ಕಾಣಿಸಿದ್ದಾರೆ. ಈ ಮಾತುಗಳನ್ನೂ ಗಮನಿಸಿದರೆ ಅದು ತಿಳಿಯುತ್ತದೆ. "ಶುಕ್ರವಾರದಂದು ಅವನನ್ನು ಕಾಣಬೇಕಾದರೆ ಹಗಲಿನ ಹತ್ತೂವರೆಯಿಂದ ಹನ್ನೆರಡೂವರೆ ನಡುವೆ ಪೋಸ್ಟಾಫೀಸಿನ ರಸ್ತೆಯಲ್ಲಿರುವ ಸರಕಾರೀ ಬಾವಿ ಒಳಗೆ ಹೋಗಬೇಕು. ಆದಿನ ಅವನ ಕಾಲಿನ ಉಗುರುಗಳು ಮಾತ್ರವಲ್ಲ, ಶುಕ್ರವಾರಕ್ಕೆಂದೇ ಮೀಸಲಾಗಿಸಿರುವ ರಬ್ಬರಿನ ಬಿಳಿ ಬಣ್ಣದ ಚಪ್ಪಲಿಗಳು ಕೂಡ ಪರಿಮಳದ ಸಾಬೂನಿನಿಂದ ಘಮಘಮಿಸಲ್ಪಡುತ್ತದೆ." (ಪುಟ ೬೨) ಶುಕ್ರವಾರದಂದು ಅವನ ಚಟುವಟಿಕೆ ಏನು ಎಂಬುದನ್ನು ತಿಳಿಸುತ್ತಾರೆ. ಜೋಯಿಸರೊಬ್ಬರು ರಜಾಕ್ ಮೇಲೆ ಇಟ್ಟಿರುವ ಅಭಿಮಾನವನ್ನು ಕುರಿತು ಹೇಳುತ್ತಾರೆ.

'ಸ್ವಾತಂತ್ರ್ಯದ ಓಟ' ಕತೆಯಲ್ಲಿ ಅಲ್ಪಸಂಖ್ಯಾತ ಮತ್ತು ಇತರ ಸಮುದಾಯದ ಚಿತ್ರಣವನ್ನು ಕಾಣಬಹುದು. ಅಲ್ಪಸಂಖ್ಯಾತ ಸಮುದಾಯದ ಚಂದ್ ಆಲಿ ತನ್ನ ಸ್ನೇಹ ಗುಣವನ್ನು ಇಲ್ಲಿ ತೋರುತ್ತಾನೆ. ತಾನು ಇತರ ಜನರ ಸಹಾಯಕ್ಕಾಗಿ ಅವರ ಸ್ವಾತಂತ್ರ್ಯಕ್ಕಾಗಿ ಆತ ವಹಿಸುವ ಆಸಕ್ತಿಯನ್ನು ಚಿತ್ರಿಸಿದ್ದಾರೆ. ತಮ್ಮದೇ ಸಮುದಾಯವನ್ನು ಕುರಿತು ಹೇಳಿರುವ ರಹಮತ್ ತರೀಕೆರೆಯವರ ಅಭಿಪ್ರಾಯವೊಂದನ್ನು ಇಲ್ಲಿ ನೆನೆಯಬಹುದು. ವಸಾಹತುಶಾಹಿಯ ಆಳುವ ತಂತ್ರದಿಂದಾಗಿ ಹಾಗೂ ಮತೀಯ ರಾಜಕಾರಣದ ದುರಾಸೆ, ಹೊಂಬತನಗಳ ಫಲವಾಗಿ ಒಡೆದುಹೋಗಿದೆ ಎಂದು ಸಮುದಾಯಗಳು ಒಳಗೆ ಶಂಕೆ, ಅಪನಂಬಿಕೆಗಳಲ್ಲಿ ದ್ವೇಷ, ಆತಂಕಗಳನ್ನು ಬೆಳೆಸಿಕೊಂಡು ಮನಸ್ಸುಗಳ ನಡುವೆ ಗೋಡೆಗಳನ್ನು ಕಟ್ಟಿಕೊಂಡು ಬದುಕಿದವಷ್ಟೆ. ಪರಿಣಾಮವೆಂದರೆ ಮುಸ್ಲಿಂ ಸಮುದಾಯವು ಸ್ವರಕ್ಷಣೆಯಲ್ಲಿ ನಿರತವಾಗಿ ಸ್ವವಿಮರ್ಶೆಯನ್ನು ಕಳೆದುಕೊಂಡು ಬಿಟ್ಟಿತು. ಪುರೋಹಿತಶಾಹಿಯ ಹಿಡಿತಕ್ಕೆ ವಿಮರ್ಶೆ ಮಾಡುತ್ತಾ ಪ್ರೀತಿ ಸಹಾನುಭೂತಿಯಿಂದ ಬರೆಯುತ್ತಾ ಸಂಕುಚಿತ'ಗೊಂಡು ಎರಡು ಉದ್ದೇಶಗಳನ್ನು ಸಾಧಿಸಿದರು.

ಒಂದು : ಇಲ್ಲೂ ಮನುಷ್ಯ ಸಹಜ ದುಃಖ, ದುಮ್ಮಾನಗಳಿವೆ ಎಂದು ಚಿತ್ರಿಸಿ ಬಹುಸಂಖ್ಯೆಯಲ್ಲಿದ್ದ ತಪ್ಪು ಕಲ್ಪನೆಯನ್ನು ನಿವಾರಿಸಿದ್ದು.

ಎರಡು: ಸಮುದಾಯವನ್ನು ಧರ್ಮದ ಮುಖವಾಡದಲ್ಲಿ ಒಳಗೆ ಗೆದ್ದಲಿನಂತೆ ನಾಶ ಮಾಡುತ್ತಿದ್ದ ಪ್ರತಿಗಾಮಿ ಶಕ್ತಿಗಳನ್ನು ದುರ್ಬಲರ (ಸ್ತ್ರೀಯರ) ಪರವಾದ ದೃಷ್ಟಿಕೋನದಿಂದ ಅನಾವರಣ ಮಾಡಿ ಎಚ್ಚರ ಮೂಡಿಸಿದ್ದು. ಸ್ತ್ರೀಯರು ಬರೆದಿದ್ದಂತೂ ದೊಡ್ಡ ಬದಲಾವಣೆ. ಈ ಹಿಂದೆ ಸಂಕೋಚದಿಂದ ಬರೆಯುತ್ತಿದ್ದ ಮುಸ್ಲಿಂ ಬರಹಗಾರರು ಬಂಡಾಯ ಸಾಹಿತ್ಯದ ಸಂದರ್ಭದಲ್ಲಿಯೇ ನಿರ್ಭಿಡೆಯಿಂದ ಬರೆಯುತ್ತಿರುವುದು ಮುಖ್ಯ ಸಂಗತಿಯಾಗಿದೆ.

ಒಟ್ಟಾರೆ, ಈ ಅಧ್ಯಾಯದಲ್ಲಿ ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಸಮುದಾಯದ ಎಲ್ಲಾ ಸ್ತರದ ಚಿತ್ರಣವನ್ನು ಕಾಣಬಹುದು. ಅವರ ಓದು, ಉದ್ಯೋಗ, ಪುರೋಹಿತಶಾಹಿಯೊಂದಿಗೆ ಅವರ ಸ್ನೇಹ. ಈ ಎಲ್ಲಾ ಅಂಶಗಳ ಚಿತ್ರಣವನ್ನು ಇಲ್ಲಿ ನೋಡಬಹುದು.

ಕೊನೆ ಟಿಪ್ಪಣಿ:-

೧. ಭಾರತೀಯ ಸಮಾಜ :ಕೆ.ಭೈರಪ್ಪ ಎಂ.ಎ.:ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪನಿ ಪ್ರಕಾಶನ : ೧೯೯೭

೨. ಅಲ್ಪಸಂಖ್ಯಾತರು : ಟಿ ನಾಗರಾಜು ಎಂ. ಎ. : ಚೇತನ ಬುಕ್ ಹೌಸ್ ಪ್ರಕಾಶನ :೧೯೯೯

೩. ಒಂದು ತುಂಡು ಗೋಡೆ ಕಥಾಸಂಕಲನ : ಬೊಳುವಾರು ಮಹಮದ್ ಕುಂಞ : ೨೦೦೧ ಮೀನು ಮಾರುವವನು ಕಥೆಯ ಪುಟ-೬೨

ಅಧ್ಯಾಯ – ೨

ಅಲ್ಪಸಂಖ್ಯಾತ ಸಮುದಾಯದ ಸ್ತ್ರೀಸಮಾಜದ ಚಿತ್ರಣ

ಮತೀಯ ಚೌಕಟ್ಟಿನಿಂದ ಅಲ್ಪಸಂಖ್ಯಾತ ಪರಿಕಲ್ಪನೆಯನ್ನು ಲಿಂಗ ಕ್ಷೇತ್ರಕ್ಕೆ ಅಳವಡಿಸಿದರೆ ಮೇಲ್ವರ್ಗದಲ್ಲಿ ಪುರುಷನೂ ಕೆಳವರ್ಗದಲ್ಲಿ ಸ್ತ್ರೀಯು ನಿಲ್ಲುತ್ತಾಳೆ. ಪುರುಷ ಶೋಷಕನ ನೆಲೆಯಲ್ಲಿದ್ದರೆ ಸ್ತ್ರೀಯು ಸಾಮಾಜಿಕವಾಗಿ, ಧಾರ್ಮಿಕವಾಗಿ ಅಥವಾ ಸೀಮೋನ್‌ದಿ ಬೂವಾ ಹೇಳುವಂತೆ ಲೈಂಗಿಕವಾಗಿಯೂ ಇರಬಹುದು. ಹೆಣ್ಣಿನ ಸಮಸ್ಯೆಗಳಿಗೆ ನಿರ್ದಿಷ್ಟ ಪರಿಹಾರಗಳನ್ನು ಸೂಚಿಸುವುದು ಕಷ್ಟಸಾಧ್ಯ. ಏಕೆಂದರೆ ಹೆಣ್ಣಿನ ಸಮಸ್ಯೆ ಸಮಾಜದ ಎಲ್ಲ ಕ್ಷೇತ್ರಗಳೊಂದಿಗೆ ತಳುಕು ಹಾಕಿಕೊಂಡಿದೆ.

ಹೆಣ್ಣಿನ ಸಮಸ್ಯೆಯ ಮೂಲಭೂತ ಕಾರಣಗಳಲ್ಲಿ ಬಹುಮುಖ್ಯವಾದದ್ದು ವಿದ್ಯೆಯಿಂದ ದೂರ ಉಳಿಸಿ ಅದನ್ನೆ ಪ್ರಧಾನವಾಗಿಸಿ ವ್ಯವಸ್ಥಿತವಾಗಿ ಈ ಹುನ್ನಾರವನ್ನು ನಡೆಸಿಕೊಂಡು ಬಂದಿದೆ. ಮುಸ್ಲಿಂ ಸಮುದಾಯದಲ್ಲಿ ಇದು ತೀವ್ರವಾಗಿರುವುದನ್ನು ಕಾಣಬಹುದು. ಹೆಣ್ಣನ್ನು ತನ್ನ ಸರಿಸಮಾನಳು ಎಂದು ಪರಿಗಣಿಸದ ಮುಸ್ಲಿಂ ಸಮುದಾಯವು ಅವಳಿಗೆ ಬುರ್ಖಾ ಧರಿಸಿ ಅವಕಾಶ ವಂಚಿತಳನ್ನಾಗಿಸಿದೆ. ಯಾವುದೋ ಒಂದು ಕುಟುಂಬ ಹೆಣ್ಣಿಗೆ ವಿದ್ಯೆಯ ಅವಕಾಶ ನೀಡಲು ಪ್ರಯತ್ನಿಸಿದರೆ ಅದನ್ನು ತಡೆಯಲು ಇಡೀ ಸಮುದಾಯವೇ ಮುಂದಾಗುತ್ತದೆ. ಸಾರ ಅಬೂಬಕ್ಕರ್‌ರಂತಹ ಲೇಖಕಿಯೂ ಜೀವನವೂ ಸಹ ಇದರಿಂದ ಹೊರತಾಗಿರಲಿಲ್ಲ ಎಂಬುದನ್ನು ನಾವು ಕಾಣಬಹುದು.

ಬೊಳುವಾರು ಮಹಮ್ಮದ್ ಕುಂಞರವರು ಅಲ್ಪಸಂಖ್ಯಾತ ಮುಸ್ಲಿಂ ಸಮಾಜದಲ್ಲಿನ ಅನಕ್ಷರತೆ, ಅಸ್ಪೃಶ್ಯತೆ, ಬಡತನ, ಬಾಲ್ಯವಿವಾಹದಂತಹ ಸಾಮಾಜಿಕ ಪಿಡುಗುಗಳ ಮಧ್ಯೆ ಸ್ತ್ರೀಯೊಬ್ಬಳ ಚಿತ್ರಣವನ್ನು ನೀಡಿರುವ ಬಗೆ ವಿಶಿಷ್ಟವಾಗಿದೆ. ಮುಸ್ಲಿಂ ಸ್ತ್ರೀ ವಿದ್ಯಾವಂತಳಾಗುವ ಪ್ರಯತ್ನವನ್ನು ಇವರು ಕಥೆಗಳಲ್ಲಿ ತಂದಿದ್ದಾರೆ. ಸಾರಾರವರು ಸಹ ಮುಸ್ಲಿಂ ಸ್ತ್ರೀಯರಿಗೆ ಶಿಕ್ಷಣ ಕೊಡುವುದರ ಕುರಿತು ತಮ್ಮ ಕತೆಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಅವರ "ದೇವರುಗಳ ರಾಜ್ಯ"ದಲ್ಲಿ ಕಥಾ ಸಂಕಲನದ "ಮುನ್ನುಡಿ ಆದ ಮತ್ತುಚ್ಚೇರ" ಎಂಬ ಕಥೆಯಲ್ಲಿ ಒಂದು ಹಳ್ಳಿಯಲ್ಲಿ ಮುಸ್ಲಿಮ ಸ್ತ್ರೀಯರನ್ನು ಪಾಪ, ಕ್ರೌರ್ಯ ಮತ್ತು ದ್ರೋಹಗಳ

ಸಂಕೇತಗಳನ್ನಾಗಿ ಪರಿವರ್ತಿಸುವ ಬರ್ಬರತೆಯ ವಿರುದ್ಧ ದನಿ ಎತ್ತಿದ ವಸ್ತುವನ್ನು ಆಯ್ದುಕೊಂಡಿರುವ ಬೊಳುವಾರರ ಈ ಕಥೆ ಮನಮಿಡಿಯುವಲ್ಲಿ ಯಶಸ್ವಿಯಾಗಿದೆ.

ಅರಬ್ ಶ್ರೀಮಂತರು ತಮ್ಮ ಖರ್ಜೂರ ಹಾಗೂ ತೈಲದ ಉತ್ಪತ್ತಿಯಿಂದ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಕ್ಕೆ ಬಂದು, ಇಲ್ಲಿನ ಬಡ ಮುಸ್ಲಿಂ ಯುವತಿಯರನ್ನು ಮದುವೆಯಾಗಿ ಕೆಲ ತಿಂಗಳು ಜೊತೆಗಿದ್ದು, ಪುನಃ ತಮ್ಮ ದೇಶಕ್ಕೆ ಹೋಗಿ ತಿರುಗಿಯೂ ನೋಡದಂಥ ಪರಿಸ್ಥಿತಿ ಕತೆಗಳಲ್ಲಿ ಕಂಡುಬರುತ್ತದೆ. ಅಲ್ಲದೇ ಧರ್ಮದ ರಕ್ಷಣೆಯಲ್ಲಿ 'ತಲಾಖ್, ತಲಾಖ್, ತಲ್ಲಾಕ್' ಎಂದು ಹೇಳಿ ಬಡಹೆಣ್ಣಿನ ಬದುಕಲ್ಲಿ ಕರಾಳ ಇತಿಹಾಸ ನಿರ್ಮಿಸಿ, ಕ್ರೌರ್ಯ ಮೆರೆಯುವುದು ಇನ್ನೊಂದೆಡೆ ಇದೆ. ಇದು "ಮುನ್ನುಡಿಯ" ವಸ್ತು. ಬಡತನ, ಅನಕ್ಷರತೆ, ಧರ್ಮಾಂಧತೆಗಳಲ್ಲಿ ಸಿಲುಕಿದ ಧರ್ಮವೊಂದರ ವಸ್ತುಸ್ಥಿತಿಯನ್ನು ಇಲ್ಲಿ ಕಾಣಬಹುದು. ಹೀಗಾಗಿ ಮುಸ್ಲಿಂ ಶೋಷಿತ ಹೆಣ್ಣಿನ ಕತೆ ಮುಂತಾದ ಧರ್ಮ ಗುರುಗಳು ಮತ್ತು ಪುಢಾರಿಗಳಿಂದ (ಮುಸ್ಲಿಂ ಜನತೆಗೆ) ಆಗುತ್ತಿರುವ ಅನ್ಯಾಯಗಳ ವಿರುದ್ಧದ ಪ್ರತಿಭಟನೆಯ ಕಿಡಿ ಮಿಂಚಾಗಿ ಕಾಣಿಸಿದೆ. ಇದು ಪ್ರಪ್ರಥಮ ಬಾರಿಗೆ ಹೆಣ್ಣೊಬ್ಬಳ ಪ್ರತಿಭಟನೆಗೆ ನೂರಾರು ಹೆಣ್ಣುಗಳ ಮೊದಲ ಧ್ವನಿಯಂತೆ, ಮುನ್ನುಡಿಯಂತೆ ಇತಿಹಾಸ ನಿರ್ಮಿಸುತ್ತದೆ.

ಬಡತನದಿಂದ ಜೀವನದ ಅನೇಕ ಸಾಧ್ಯತೆಗಳನ್ನು ಕಳೆದುಕೊಂಡ ರುಖಿಯಾಬಿಗೆ ಒಬ್ಬ ದಳ್ಳಾಳಿ ಹಣದ ಆಸೆ ತೋರಿಸಿ ಅವಳ ಚೆಲುವಿನ ಮಗಳಾದ ಉನ್ನೀಸಾಳನ್ನು ಒಬ್ಬ ಅರಬ್‌ನೊಂದಿಗೆ "ನಿಖಾ" ನಡೆಸಲು ಒಪ್ಪಿಸುತ್ತಾನೆ. ಇಲ್ಲಿ ದಳ್ಳಾಳಿಯು ತನ್ನ ಮಗಳ ಮದುವೆಗಾಗಿ ಮತ್ತೊಂದು ಹೆಣ್ಣಿನ ಜೀವನವನ್ನು ಹಾಳುಮಾಡುವುದಕ್ಕೆ ತಯಾರಾಗುತ್ತಾನೆ. ಈ ಸುದ್ದಿಯನ್ನು ತಿಳಿದ ಮುತ್ತುಚ್ಚೇರದ 'ಯೂತ್ ಲೀಗ್‌ನ ಯುವಕರು ಮುಸ್ಲಿಂ ಜಾತಿಯಲ್ಲಿರುವ ಈ ಅನಿಷ್ಟ ಪದ್ಧತಿಯನ್ನು ನಿಲ್ಲಿಸಬೇಕೆನ್ನುವ ಉದ್ದೇಶದಿಂದ ರುಖಿಯಾಬಿ ಇದಕ್ಕೆ ಒಪ್ಪದಿರಲು ಒತ್ತಾಯಿಸುತ್ತಾರೆ. ಯುವಕರು ಹೇಳುವುದನ್ನು ತತ್ವಶಃ ಒಪ್ಪುವ ರುಖಿಯಾಬಿ ತನ್ನ ಮಗಳನ್ನು ನಿಮ್ಮಲ್ಲಿ ಯಾರಾದರೂ ಮದುವೆಯಾಗಲು ತಯಾರಿದ್ದೀರಾ?. ಎಂದು ಸವಾಲೆಸೆದಾಗ ಯುವಕರಲ್ಲಿ ಉತ್ತರವಿರುವುದಿಲ್ಲ. ಆದರ್ಶದ ಕಲ್ಪನೆಯ ಬೆನ್ನು ಹತ್ತಿದ ಆ ಯುವಕರು ಜೀವನದ ವಾಸ್ತವತೆಯನ್ನು ಯೋಚಿಸುವುದೇ ಇಲ್ಲ. ಹಾಗೆಯೇ ಯುವಕರಲ್ಲಿ ಬಂಡಾಯ ಕೇವಲ ಮಾತಿನಲ್ಲಿ ಮಾತ್ರ ಸಾಧ್ಯವೆನಿಸಿ ಅದನ್ನು ಕಾರ್ಯ ರೂಪಕ್ಕೆ ತರುವಲ್ಲಿ ಸೋತಿರುವುದನ್ನು ಕಥೆಗಾರ ಈ ಕಥೆಯಲ್ಲಿ ತೋರಿದ್ದಾರೆ.

ರುಖಿಯಾಬಿ ಯುವಕರಿಂದ ತೆಗೆದುಕೊಳ್ಳಲು ಆಗದಂತಹ ನಿರ್ಧಾರವನ್ನು ತಾನೇ ತೆಗೆದುಕೊಳ್ಳುವುದನ್ನು ಇಲ್ಲಿ ಕಾಣಬಹುದು. ತನ್ನ ನಿರ್ಧಾರದಿಂದ ಅರಬ್‌ನೊಂದಿಗೆ ತನ್ನ ಮಗಳ ನಿಖಾವನ್ನು ಪ್ರತಿಭಟಿಸುತ್ತಾಳೆ. ಬಡತನ, ಅನಕ್ಷರತೆ ಹಾಗೂ ಧರ್ಮಾಂಧತೆಯಲ್ಲಿ ಸಿಲುಕಿದ ಧರ್ಮವೊಂದರ ವಸ್ತು ಸ್ಥಿತಿಯನ್ನು ಕಾಣಬಹುದು. ಹಾಗಾಗಿ ಒಂದು ಬಡ ಅನರಕ್ಷರಸ್ಥ ಹೆಂಗಸಿನ ಪ್ರತಿಭಟನೆಯೂ, ಪ್ರತಿಭಟನೆಯ ಸಾಮರ್ಥ್ಯವಿಲ್ಲದೇ ಕೆಳಮಟ್ಟದ ಜೀವನ ನಡೆಸುತ್ತಿರುವ ದೇಶದ ಲಕ್ಷಾಂತರ ಹೆಂಗಸರ ಮೂಕ ಆಶಯವನ್ನು ಪ್ರತಿಬಿಂಬಿಸುತ್ತದೆ. ಮುತ್ತುಚ್ಚೇರ ಮುಸ್ಲಿಂ ಸಮುದಾಯದ ಒಂದು ಸಮಸ್ಯೆಯನ್ನು ಬೊಳುವಾರ್‌ರವರು ಕಥೆಯಲ್ಲಿ ಸಮಾಜಕ್ಕೆ ಮುಖಾಮುಖಿಯಾಗಿಸಿದ್ದಾರೆ.

ಈ ಕಥೆಯಲ್ಲಿ ಬಡ ಅನಕ್ಷರಸ್ಥ ಹೆಣ್ಣಿನ ಸಾಮರ್ಥ್ಯವನ್ನು ಸಮಾಜಕ್ಕೆ ತೋರಿಸುವ ಮೂಲಕ ಈ ಯುವಕರ ಶಕ್ತಿ ಸಾಮರ್ಥ್ಯ ಕೇವಲ ಬಾಯಿಮಾತಿನಲ್ಲಿ ಉಳಿಯುವುದನ್ನು ಕಾಣಬಹುದು. ಮುಸ್ಲಿಂ ಸಮುದಾಯದ ಹೆಣ್ಣೊಬ್ಬಳು ಮತಾಂಧ ಧರ್ಮ ಗುರುಗಳ ಮತ್ತು ಪಾಪಿಗಳಿಂದ (ಮುಸ್ಲಿಂ ಜನತೆಗೆ) ಆಗುತ್ತಿರುವ ಅನ್ಯಾಯಗಳ ಪ್ರತಿಭಟನೆಯು ತೀವ್ರವಾಗಿ ವ್ಯಕ್ತವಾಗಿದೆ. ಪ್ರಪ್ರಥಮ ಬಾರಿಗೆ ಹೆಣ್ಣೊಬ್ಬಳ ಪ್ರತಿಭಟನೆಯೂ ನೂರಾರು ಹೆಣ್ಣುಗಳ ಧ್ವನಿಯಂತೆ ಇತಿಹಾಸ ನಿರ್ಮಿಸುತ್ತಾಳೆ. ಈ ಪ್ರತಿಭಟನೆಯು ಅಲ್ಪಸಂಖ್ಯಾತ ಸಮುದಾಯವನ್ನು ಸಮಾಜಕ್ಕೆ ಮುಖಾಮುಖಿಯಾಗಿ ಮಾಡುತ್ತದೆ.

"ದೇವರುಗಳ ರಾಜ್ಯ"ದಲ್ಲಿ ಕಥಾಸಂಕಲನದ ಕತೆಯಾದ 'ಸೈತಾನ' ಮುಸ್ಲಿಂ ಹೆಣ್ಣಿನ ಮೇಲೆ ನಡೆಯುವ ದಬ್ಬಾಳಿಕೆಯ ಚಿತ್ರಣವನ್ನು ಎತ್ತಿಕೊಳ್ಳುತ್ತದೆ. ಅಹಮದ್ ತನ್ನ ಮೊದಲ ಹೆಂಡತಿಗೆ ಮಕ್ಕಳಾಗಲಿಲ್ಲವೆಂದು ಎರಡನೆಯ ಮದುವೆ ಮಾಡಿಕೊಳ್ಳಲು ನಿಶ್ಚಯಿಸುತ್ತಾನೆ. ಗಂಡನನ್ನು ಪ್ರತಿಭಟಿಸಲು ಸಾಧ್ಯವಿಲ್ಲದ, ಗಂಡಸರ ಸರ್ವಾಧಿಕಾರವಿರುವ ಮುಸ್ಲಿಂ ಸಮಾಜದಲ್ಲಿ ತನ್ನ ದುಃಖವನ್ನು ಹೇಳಿಕೊಳ್ಳಲು ಸಾಧ್ಯವಾಗದೇ ಅವಳಿಗೆ ದೆವ್ವ ಹಿಡಿದಿದೆ ಎಂದು ಮನೆಯವರು ಮಂತ್ರವಾದಿಯನ್ನು ಕರೆಯಿಸುವ ಯೋಚನೆಯಲ್ಲಿರುತ್ತಾರೆ.

ತನ್ನ ಎರಡನೆಯ ಮದುವೆಯೇ ಆಕೆಯ ಅಸ್ವಾಸ್ಥ್ಯಕ್ಕೆ ಕಾರಣವೆಂದು ತಿಳಿದ ಮೇಲೆ ಅಹಮದ್ ಎರಡನೆಯ ಮದುವೆ ಆಗುವುದು ಕೈಬಿಡುತ್ತಾನೆ. ಮುತ್ತೇಚ್ಚೆರದಲ್ಲಿ ಸಾಮಾಜಿಕವಾಗಿ ಮುಖಾಮುಖಿಯಾದ ರುಖಿಯಾಬಿಯಂತೆ, ಅಮಿನ ಪ್ರತಿಭಟಿಸಲು ಸಾಮರ್ಥ್ಯವಿಲ್ಲದ ಹೆಣ್ಣಾಗುತ್ತಾಳೆ. ಸಮಾಜದಲ್ಲಿ ಬಹಳಷ್ಟು ಹೆಣ್ಣುಮಕ್ಕಳು ವಿದ್ಯೆ ಇಲ್ಲದೇ ಸಾಮಾಜಿಕ ಪಿಡುಗುಗಳಿಗೆ ಒಳಗಾಗುತ್ತಿರುವುದನ್ನು ಈ ಕತೆಯಲ್ಲಿ ಕಾಣಬಹುದು. ಈ ಸಮಾಜದ ಹೆಣ್ಣು ತನ್ನ ಸುತ್ತಮುತ್ತಲಿನ

ಪರಿಸ್ಥಿತಿಯನ್ನು ಎದುರಿಸುವ ಶಕ್ತಿ ಸಾಮರ್ಥ್ಯ ಹೊಂದಿದ್ದವಳಾಗಿರುವುದಿಲ್ಲ. ಗಂಡನನ್ನು ಎದುರಿಸುವ ಧೈರ್ಯವು ಅವಳಲ್ಲಿರುವುದಿಲ್ಲ. ಹೀಗಾಗಿ ತನ್ನ ನೋವನ್ನು ಯಾರಿಗೂ ತಿಳಿಸಲು ಸಾಧ್ಯವಾಗದೇ ಮಾನಸಿಕ ರೋಗಕ್ಕೆ ತುತ್ತಾಗಿ ತಾನೇ ಅಂತ್ಯ ಕಾಣುತ್ತಾಳೆ. ಆದರೆ ಇದರ ನಡುವೆ ಅಹಮದ್ ಮದುವೆಯಾಗುವ ನಿರ್ಧಾರವನ್ನು ಕೈಬಿಟ್ಟಾಗ ಕತೆ ಮತ್ತೊಂದು ತಿರುವು ಪಡೆದುಕೊಳ್ಳುತ್ತದೆ. ಊರಿನ ಜಮಾತಿನಿಂದ ಮದುವೆಯಾಗಲೇ ಬೇಕು ಎಂಬ ಒತ್ತಾಯದ ಧ್ವನಿ ಕೇಳಿಬರುತ್ತದೆ. ಅವನನ್ನು ಜಮಾತಿನಿಂದ ಹೊರಹಾಕುವ ವಿಷಯವನ್ನು ತಿಳಿದ ಅಮಿನ ಪರಿಸ್ಥಿಯ ಒತ್ತಡಕ್ಕೆ ಮಣಿದ ಅವಳು ಬಾವಿಗೆ ಹಾರಿದಳು.

ಇಲ್ಲಿ ಬಹುಪತ್ನಿತ್ವದಲ್ಲಿರುವ ಸಮಸ್ಯೆಗಳ ಸಂಕೀರ್ಣತೆ ಹಾಗೂ ಮುಸ್ಲಿಂ ಸಮುದಾಯದ ಧಾರ್ಮಿಕ ಪ್ರಭುತ್ವದ ಹೆಸರಿನಲ್ಲಿ ನಡೆಯುವ ಕ್ರೌರ್ಯವನ್ನು ಕತೆಗಾರರು ವೈಯಕ್ತಿಕ ಸಮಾಜಕ್ಕೆ ಮುಖಾಮುಖಿಯಾಗಿಸಿದ್ದಾರೆ. ಕೌಟುಂಬಿಕ ಹಿನ್ನಲೆಯಿಂದಾಗಿ ಮನೋರೋಗಿಯಾದ ಹೆಣ್ಣು ತನ್ನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗದೇ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪುವುದರ ಮೂಲಕ ಮುಕ್ರಿಯ ಲಂಪಟತನಕ್ಕೆ ಬಲಿಯಾಗುವಳು. ಅನಂತರ ದಲ್ಲಾಳಿಯು ಪ್ರೆಸಿಡೆಂಟರಿಗೆ ಇಲ್ಲಸಲ್ಲದ್ದನ್ನು ಹೇಳಿದ್ದರ ಪರಿಣಾಮ ಮದುವೆ ಮಾಡಿಕೊಳ್ಳುವುದು ಅನಿವಾರ್ಯವೆಂದು ತಿಳಿದ ಅವನು ಗೊಂದಲಕ್ಕೆ ಒಳಗಾಗುತ್ತಾನೆ. ಇದನ್ನು ಕಂಡ ಅಮಿನ ತನ್ನ ಜೀವನ'ವನ್ನು ತಾನೇ ಕೊನೆ ಮಾಡಿಕೊಳ್ಳುತ್ತಾಳೆ. ಮುಸ್ಲಿಂ ಸಮುದಾಯದಲ್ಲಿ ಹೆಣ್ಣಿನ ಮೇಲೆ ನಡೆಯುವ ನಿರಂತರ ದೌರ್ಜನ್ಯ, ಕ್ರೌರ್ಯವನ್ನು ಅಮಿನಳ ಮೂಲಕ ಕಥೆಗಾರರು ವ್ಯಕ್ತಪಡಿಸಿದ್ದಾರೆ.

'ಅಂಕ' ಕಥಾಸಂಕಲನದ 'ರುಖಿಯಾ' ಕಥೆಯಲ್ಲಿ ಮುಸ್ಲಿಂ ಸಮುದಾಯದ ಸ್ತ್ರೀ ಬಾಲ್ಯದಲ್ಲಿ ವಿವಾಹವಾಗಿ ವಿಧವೆಯಾದ ವಿಷಯವನ್ನು ಕಾಣಬಹುದು. ಸಾಮಾಜಿಕ ಪಿಡುಗಾಗಿರುವ ಬಾಲ್ಯ ವಿವಾಹಕ್ಕೆ ಒಳಗಾಗಿ ವಿಧವೆಯಾದ ರುಖಿಯಾ ಎದುರಿಸಬೇಕಾಗಿ ಬಂದಂತಹ ಸಮಸ್ಯೆಗಳ ಚಿತ್ರಣವನ್ನು ಕೊಡುತ್ತಾರೆ. ಹದಿನೇಳು ವಯಸ್ಸಿನಲ್ಲಿ ವಿವಾಹವಾಗಿ ಪತಿ ಉಸ್ಮಾನ್‌ನನ್ನು ಕಳೆದುಕೊಂಡು ರುಖಿಯಾ ವಿಧವೆಯೂ ಆಗುತ್ತಾಳೆ. ಆರಂಭದಲ್ಲಿ ಸ್ವರ್ಗವೇ ಸಿಕ್ಕಷ್ಟು ಸಂತೋಷದಲ್ಲಿದ್ದ ರುಖಿಯಾ ಗಂಡ ಸತ್ತ ನಂತರ ಜೀವನವೇ ನಿಂತುಹೋದಷ್ಟು ದುಃಖಿಸುತ್ತಾಳೆ. ಗಂಡನಿಗೆ ವಿಷವಿಕ್ಕಿ ಕೊಂದ ಆರೋಪಕ್ಕೆ ಒಳಗಾಗುತ್ತಾಳೆ. ಅನಂತರ ಮನೆಯೊಡತಿ ಪಾತುಮ್ಮಳ ಪ್ರೀತಿ ಉಪಚಾರಗಳಿಂದ ಮತ್ತೆ ಜೀವನ ಪಡೆಯುತ್ತಾಳೆ. ಹೀಗಾಗಿ ರುಖಿಯಾ ಪಾತುಮ್ಮಳ ಮಗಳು ಹಲೀಮಳ ಅಕ್ಕ ಮತ್ತು ಆಪ್ತಸ್ನೇಹಿತೆಯಾಗುತ್ತಾಳೆ. ಹಲೀಮ ಬರೆದುಕೊಟ್ಟ ಕಾಗದವನ್ನು

ಕೊಡುವುದರ ಮೂಲಕ ಖಾದರ್‌ನಿಂದ ಪ್ರಶಂಸೆಯನ್ನು ಪಡೆದ ರುಖಿಯಾ ಆ ಕಾಗದ ತನ್ನದಲ್ಲವೆಂದು ಹೇಳುತ್ತಾಳೆ. ಇಲ್ಲಿ ವಿದ್ಯೆ ಅಥವಾ ಶಿಕ್ಷಣ ಶ್ರೀಮಂತರಿಗೆ ಸೇರಿದ ಸ್ವತ್ತು, ಇದು ಬಡವರಿಗೆ ಸಾಧ್ಯವಾಗದ ವಿಷಯ ಎಂದು ತಿಳಿಸುತ್ತಾಳೆ. ಅದನ್ನು ತಿಳಿಯಪಡಿಸುವ ಈ ಕೆಳಗಿನ ವಾಕ್ಯಗಳು ಗಮನಾರ್ಹವಾದದ್ದು.

"ಸಾರ್ ಒಳ್ಳೆಯ ತಮಾಷೆ ಮಾಡಿದ್ದೀರಿ. ನಾನೇಕೆ ಬರೆಯಲಿ? ನಾನೇನು ಸಾಹುಕಾರನ ಮಗಳ? ಬರೆದ ಜನ ಬೇರೆಯೇ ಉಂಟು."(ಪುಟ ೬೨) ಆನಂತರ ಮಾತು ಮುಂದುವರಿಸಿದ ರುಖಿಯಾ "ಪಾತ್ರೆ ತಿಕ್ಕುವ ನನ್ನಂತವಳ ಮಾತು ಇನ್ನೂ ಹೇಗಿರುತ್ತದೆ" ಎನ್ನುತ್ತಾಳೆ. ವಿದ್ಯೆ ಇಲ್ಲದವಳ ಮಾತಿನ ಶೈಲಿ ಹೇಗಿರಬಹುದು ಹಾಗೂ ಬಡವ ಮತ್ತು ಶ್ರೀಮಂತರ ನಡುವೆ ವ್ಯತ್ಯಾಸ ಬಹಳ ಎಂಬುದನ್ನು ಕಾಣಬಹುದು.

ಮೊದಲು ಶ್ರೀಮಂತ ಫಕೀರ ಸಾಹೇಬರ ಮಗಳು ಹಲೀಮನಿಂದ ತಮಾಷೆಗೆ ಪ್ರಾರಂಭವಾದ ಖಾದರ್ ಮತ್ತು ರುಖಿಯಾಳ ಗೆಳೆತನ ಗಾಢವಾಗುವುದನ್ನು ಗಮನಿಸಬಹುದು. ಆದರೆ ಈ ಸಂಬಂಧ ಅವರಿಗೆ ಅರಿವಾಗದೆಯೇ ಆಳವಾಗುತ್ತಾ ಹೋಗುತ್ತದೆ. ಅದನ್ನು ಈ ಕೆಳಗಿನ ಮಾತುಗಳ ಮೂಲಕ ತಿಳಿಯಬಹುದು "ಸಾರ್ ಇವಳಿಗೆ ನಿಮ್ಮ ಹತ್ತಿರ ಮಾತನಾಡಬೇಕಂತೆ" (ಪು.೬೬) ಎಂದು ಹೇಳುವಾಗ ಕಣ್ಣುಗಳ ತುಂಬ ಕಾಣಿಸಿದ್ದು ನಿರಾಸೆಯೇ? ನಿರುತ್ಸಾಹವೇ? ಅಥವಾ ಅಸೂಯೆಯೇ? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಹೀಗೆ ಗಾಢವಾದ ಈ ಸ್ನೇಹ ಅಲಿಮಳ ಸಮ್ಮುಖದಲ್ಲಿ ಅವಳಿಗಾಗಿಯೇ ನಡೆಯುತ್ತಿರುವಂತೆ ತೋರುತ್ತದೆ. ಖಾದರ್ ಮತ್ತು ರುಖಿಯಾಳ ಭೇಟಿಯ ಸಂದರ್ಭದಲ್ಲಿ ಅಲಿಮಳ ಬಗ್ಗೆ ಹೇಳುವ ಮಾತು ಮಾಳಿಗೆ ಮತ್ತು ಗುಡಿಸಲು ಮನೆಯವರಿಗೆ ಇರುವ ವ್ಯತ್ಯಾಸ ಸೂಚಿಸುತ್ತದೆ. "ಹಲೀಮ ಮಾಳಿಗೆಯ ಮನೆಯಲ್ಲಿರುವವಳು ಹಾಗೆಲ್ಲ ಓಡಿ ಬರಲು ಅವಳೇನು ಕೆಲಸದ ಹೆಣ್ಣೇ?" (ಪು.೬೬) ಇಲ್ಲಿ ಇಬ್ಬರು ಹೆಣ್ಣುಮಕ್ಕಳಾದರು ಅವರ ಮಧ್ಯೆ ಸಾಮಾಜಿಕ ಸ್ಥಾನಮಾನದಲ್ಲಿ ಇರುವ ವ್ಯತ್ಯಾಸವನ್ನು ಗುರುತಿಸಬಹುದು.

ಈ ವಾಕ್ಯವು ಬಡ ಮತ್ತು ಶ್ರೀಮಂತರಿಗಿರುವ ಸ್ಥಾನಮಾನ ಮತ್ತು ಅವರ ಸ್ಥಿತಿಗತಿಯನ್ನು ಹೇಳುತ್ತದೆ. ಇಲ್ಲಿ ಪಾತುಮ್ಮ ರುಖಿಯಾ ಮತ್ತು ಹಲೀಮಳ ವಯಸ್ಸಿನ ಅಂತರ ಅರಿಯದೇ ಹೋಗುತ್ತಾಳೆ. ಖಾದರನೊಡನೆ ನಡೆದ ಸಂಭಾಷಣೆಯ ವಿಷಯ ರುಖಿಯಾಳಿಗೆ ಹಲೀಮಳ ಮನೆಯ ದನ ಕಾಯುವ ಹುಡುಗನಿಂದ ತಿಳಿದು ಬರುತ್ತದೆ. ಈ ಸುದ್ದಿಯಿಂದ ಭಯಭೀತಳಾದ

ರುಖಿಯಾ ಪಾತುಮ್ಮಳಿಗೂ ವಿಷಯ ತಿಳಿಸುತ್ತಾಳೆ. ಅನಂತರ ಚೆಲ್ಲು ಮಾತಿನ ಹಲೀಮ, ನಗೆ ಬುಗ್ಗೆಯ ರುಖಿಯಾ ಮತ್ತು ಬಿಸಿ ನೆತ್ತರ್ ಖಾದರ್‌ನ ವಿಷಯ ಇತರರಿಗೆ ತಿಳಿಯುತ್ತದೆ. ಇದರಿಂದ ಕೋಪಗೊಂಡ ಪಾತುಮ್ಮ ಪೂರ್ವಾಪರ ವಿವೇಚಿಸದೇ ಚೆನ್ನಾಗಿ ರುಖಿಯಾಳಿಗೆ ಗುದ್ದುತ್ತಾಳೆ. ನಿಧಾನವಾಗಿ ಯೋಚನೆ ಮಾಡುವುದರ ಮೂಲಕ ಎಲ್ಲವನ್ನು ತಿಳಿಯುತ್ತಾಳೆ. ಒಟ್ಟಾರೆ ರುಖಿಯಾ ನೀರಿಗೆ ಬಿದ್ದ ಹಕ್ಕಿಯಾಗುತ್ತಾಳೆ. ಖಾದರ್ ಮತ್ತು ಹಲೀಮಳ ಬಗ್ಗೆ ಯೋಚಿಸಿದ ಇವಳು ಹಲೀಮಳ ಜೊತೆಗೆ ಸ್ಪರ್ಧೆ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾಳೆ. ಈ ಸಂದರ್ಭದಲ್ಲಿ ಖಾದರ್‌ನ ಮೇಲಿನ ಪ್ರೀತಿಯಿಂದಾಗಿ "ನನ್ನನ್ನು ಮದುವೆಯಾಗುತ್ತೀಯಾ ರುಖಿಯಾ ಎಂದು ಪ್ರಶ್ನಿಸಿದ್ದರೆ ಹಲೀಮಳಿಗೆ ದುಃಖವಾಗುತ್ತದೆ ಎಂಬುದನ್ನು ಕಡೆಗಣಿಸುತ್ತಿರಲಿಲ್ಲವೇ?" (ಪು.೭೮) ಎಂಬ ನೂರಾರು ಪ್ರಶ್ನೆಗಳನ್ನು ಹಾಕಿಕೊಳ್ಳುವುದರ ಮೂಲಕ ತಾನೂ ಇರುವ ಪರಿಸ್ಥಿತಿಯ ಅರಿವಾಗುತ್ತದೆ. ಆದರೆ ತನಗೆ ಪ್ರೀತಿಯ ಹಕ್ಕಾದರೂ ಎಲ್ಲಿದೆ? ಮಾಳಿಗೆ ಮನೆಯ ಉಪ್ಪು ತಿನ್ನುವ ತನ್ನಿಂದ ಹಲೀಮಳಿಗೆ ಮೋಸ ಮಾಡಲು ಹೇಗೆ ಸಾಧ್ಯವಾದೀತು? ಪ್ರೀತಿಗೆ ಮಾಳಿಗೆ ಮನೆ ಗುಡಿಸಲು ಮನೆ ವ್ಯತ್ಯಾಸವಿಲ್ಲದೇ ಉಪ್ಪು ತಿಂದಿದ್ದಕ್ಕಾಗಿ ತ್ಯಾಗ ಮಾಡಲು ಸಿದ್ಧಳಾಗುತ್ತಾಳೆ. ಹಾಗಾಗಿ ಅವರಿಗೆ ಪ್ರೀತಿಸುವ ಹಕ್ಕಿಲ್ಲ. ಪಾತುಮ್ಮ ಸಂತೈಸಿದ ರುಖಿಯಾ ಮಾಳಿಗೆ ಮನೆಯ ಸುಖಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ಧಳಾಗುತ್ತಾಳೆ.

"ಹೇಳಿ ಉಮ್ಮ, ನಾನೇನು ಮಾಡಬೇಕು ಹೇಳಿ. ಮಾಳಿಗೆ ಮನೆಯ ಸುಖಕ್ಕಾಗಿ ಕೆರೆಗೆ ಬೀಳಲು ಬೇಕಾದರೂ ನಾನು ತಯಾರು" (ಪು.೮೦) ವಿಷಾದದ ನಗು, ನೋವು ಎಲ್ಲವನ್ನೂ ಬೆರೆಸಿ ಬಿಕ್ಕಳಿಸುತ್ತ ಹೇಳಿದ್ದು ರುಖಿಯಾಳ ಆಗಿನ ಸ್ಥಿತಿಯನ್ನು ಬಿಂಬಿಸುತ್ತದೆ.

ಆ ಬಳಿಕ ಇಬ್ಬರು ಹಲೀಮಳಿಗೆ ತಿಳಿಯದಂತೆ ಒಂದು ಒಪ್ಪಂದಕ್ಕೆ ಬರುತ್ತಾರೆ. ಎಲ್ಲದಕ್ಕೂ ರುಖಿಯಾ ಹೂಗುಟ್ಟುತ್ತಾಳೆ. ಇದು ಮಾಳಿಗೆ ಮನೆಯ ದನಕಾಯುವ ಬಡ ಹೆಣ್ಣೊಬ್ಬಳ ಶೋಚನೀಯ ಸ್ಥಿತಿಯನ್ನು ಸಂಕೇತಿಸುತ್ತದೆ.

ಫಕೀರ್ ಸಾಹೇಬರಿಗೆ ಎಲ್ಲಿಯೂ ಹಣ ದೊರೆಯಲಾರದ ಸಂದರ್ಭದಲ್ಲಿ ರುಖಿಯಾಳ ನೆನಪಾಗಿ ಮತ್ತಷ್ಟು ಕಿಡಿಕಾರುತ್ತ ಅಸಮಾಧಾನಗೊಳ್ಳುತ್ತಾರೆ. ಹಿಂದೆ ರುಖಿಯಾಳ ಬಗ್ಗೆ ಆಡಿದ ಮಾತುಗಳಿಗೆ ತಲೆಕೆಡಿಸಿಕೊಳ್ಳದ ಈ ಸಂದರ್ಭದಲ್ಲಿ ಸಾಹೇಬರೂ ಕೋಪಗೊಳ್ಳುತ್ತಾರೆ.

"ಈಗೆರಡು ವಾರದಿಂದ ಮತ್ತೊಂದು ಕಥೆಯೂ ಶಾಲೆಯ ಗೋಡೆಯಲ್ಲಿ ನಾರ್ತಾ ಇದೆ. ಈ ಮಾಸ್ತರನಿಗೆ ಈ ಮುಂಡೆಯೇ ಬೇಕಾಯಿತು? ಮರ್ಯಾದೆಯಿಂದ ಕೇಳಿದರೆ ಯಾರಾದರೂ ಹೆಣ್ಣು

ಕೊಡುತ್ತಿರಲಿಲ್ಲವೇ? ಪ್ರಾಯದ ಕಣ್ಣಿಗೆ ಮುದಿ ಎಮ್ಮೆ ಚೆಂದವೇ?" (ಪು.೮೨) ಮುದಿ ಎಮ್ಮೆ ಎಂಬುದು ಗಂಡಿಗೆ ಹೆಣ್ಣಿನ ಬಗ್ಗೆ ಇರುವ ಭಾವನೆಯನ್ನು ತಿಳಿಸುತ್ತದೆ. ತಾಳ್ಮೆ ಕಳೆದುಕೊಂಡು ಟಾರ್ಚ್ ಬೆಳಗಿಸುತ್ತ ಬಂದ ಸಾಹೇಬರು ರುಖಿಯಾಳ ಮನೆಯ ಹೊರಗೆ ಚಪ್ಪಲಿ ಕಂಡು ಮತ್ತಷ್ಟು ಕೋಪಗೊಳ್ಳುತ್ತಾರೆ. ಇಂತಹ ಹೆಣ್ಣಿನಿಂದ ಇಡೀ ಜಾತಿಗೆ ಅವಮಾನವೆಂದು ಕೈಯಲ್ಲಿದ್ದ ಚಪ್ಪಲಿಯನ್ನು ಸಾಧ್ಯವಾದಷ್ಟು ದೂರ ಎಸೆದು 'ಥಕ್' ಮೂರು ಕಾಸಿನ ಹೆಣ್ಣು ಎಂದು ಅಸಹ್ಯ ಪಡುತ್ತಾರೆ. ಇದು ಗಂಡಿಗೆ ಹೆಣ್ಣಿನ ಮೇಲಿರುವ ಕ್ಷುಲ್ಲಕ ಧೋರಣೆಯನ್ನು ತಿಳಿಸುತ್ತದೆ.

ಸಾಹೇಬರೊಡನೆ ಬಂದ ಅದ್ದುಕಾಕ ರುಖಿಯಾಳ ಬಗ್ಗೆ ಆಡಿದ ಮಾತುಗಳಿಂದ ರೋಮಾಂಚನಗೊಳ್ಳುತ್ತಾನೆ. ಸ್ವತಃ ಅಲ್ಲಾವೂ ಬಂದಿದ್ದಾನೆ ಎಂದು ಅವರೊಡನೆ ಹೊರಡುತ್ತಾನೆ. ಐದಾರು ವರ್ಷಗಳಿಂದ ಅವಳನ್ನು ಮಾನಸಿಕವಾಗಿ ಬೆತ್ತಲೆಗೊಳಿಸಿ ಸುಖಿಸುತ್ತಿದ್ದ ಅವನಿಗೆ ಸ್ವರ್ಗವೇ ಕೈಬೀಸಿ ಕರೆದಂತಾಯಿತು. ಇದಕ್ಕಾಗಿ ತನುಮನಗಳನ್ನು ಸಿದ್ಧಗೊಳಿಸಿಕೊಂಡನು. ವಿಧವೆಯಾದ ಹೆಣ್ಣಿನ ಬಗ್ಗೆ ಗಂಡಸರಿಗಿದ್ದ ಮನಸ್ಥಿತಿಯನ್ನು ಇಲ್ಲಿ ವ್ಯಕ್ತವಾಗಿದೆ. ಪಾತುಮ್ಮ ಅಲ್ಲಿ ಇರುವುದನ್ನು ತಿಳಿಯದ ಅದ್ದುಕಾಕ ಮತ್ತು ಸಾಹೇಬರು ಮನೆಗೆ ನುಗ್ಗುತ್ತಾರೆ. ಇದರಿಂದ ಭೀತಿಗೊಂಡ ಸಾಹೇಬರ ಹೆಂಡತಿ ಮರೆಯಾಗುತ್ತಾಳೆ. ಹೀಗೆ ಬಂದ ಇವರು ಅವಾಚ್ಯ ಶಬ್ದಗಳಿಂದ ರುಖಿಯಾಳನ್ನು ನಿಂದಿಸುತ್ತಾರೆ. ಖಾದರ್‌ನನ್ನು ಬೈದು ಮನೆಗೆ ಹೋಗುವಂತೆ ತಿಳಿಸುತ್ತಾರೆ.

ರುಖಿಯಾ ಮತ್ತು ಖಾದರ್ ಇಬ್ಬರಿಗೂ ಕತ್ತಲೆಯೇ ಗತಿ. ಎಲ್ಲವೂ ಸುಖಾಂತವಾಗುತ್ತದೆಯೆಂದು ತಿಳಿದ ಅವರ ಎಣಿಕೆ ವ್ಯತಿರಿಕ್ತವಾಗುತ್ತದೆ. ಎಲ್ಲವೂ ಕನಸಿನಂತೆ ನಡೆದು ಹೋಗಿ, ವಿವೇಚನೆಗೆ ಅವಕಾಶವಿಲ್ಲದಂತಾಗುತ್ತದೆ. ಮುಂದಿನ ಭವಿಷ್ಯದಲ್ಲಿ ರುಖಿಯಾಳಿಗೆ ಮಾಳಿಗೆ ಮನೆಯ ಬಾಗಿಲು ಮುಚ್ಚಿ ಹೋಗುತ್ತದೆ ಎಂದು ತಿಳಿದು ಭಯವಾಗುತ್ತದೆ.

ಈ ಎಲ್ಲ ಘಟನೆಯಿಂದ ಭಯಗೊಂಡ ಖಾದರ್ ಅನುಮಾನದಿಂದಲೆ ಮೆಲ್ಲಗೆ ರುಖಿಯಾ ಎಂದು ಕರೆದಾಗ ಉತ್ತರವಿಲ್ಲದೆ ಇರುವುದನ್ನು ಗಮನಿಸಿದ ಅವನು ಮತ್ತೆ ಕೂಗುತ್ತಾನೆ. ಅನಂತರ ರುಖಿಯಾಳಿಂದ ಕತ್ತಲೆ ಗರ್ಭದಿಂದ ಬಂದಂತಹ "ಹೂಂ" ಎಂಬ ಉತ್ತರದಿಂದ ನಿರಾಳಗೊಳ್ಳುತ್ತಾನೆ. ಜೇಬಿನಿಂದ ಕಡ್ಡಿಪೆಟ್ಟಿಗೆ ತೆಗೆದು ಕಡ್ಡಿಗೀರಿ ಚಿಮಣಿ ದೀಪಕ್ಕೆ ಬೆಂಕಿ ಅಂಟಿಸಿದ. ಆ ಬೆಳಕಿನಲ್ಲಿ ಅವಳ ಕಣ್ಣುಗಳಲ್ಲಿ ಆದ ಬದಲಾವಣೆಯನ್ನು ಖಾದರ್ ಗಮನಿಸಿದ. ನಿಶ್ಶಬ್ದವನ್ನು ಸೀಳಿಕೊಂಡು ಬಂದಂತಹ ಶಬ್ದದೊಂದಿಗೆ ಅವಳು ನನ್ನನ್ನು ಕ್ಷೇಮಿಸುತ್ತಿರಾ ಎಂದು ಕೇಳುತ್ತಾಳೆ.

ಖಾದರ್ ಕಣ್ಣರಳಿಸಿ ರುಖಿಯಾಳ ಮುಖ ಓದಿದ. ಬಲಕ್ಕೆ ಚಾಚಿ ನಿರ್ಧಾರದ ಸ್ವರದಲ್ಲಿ ಹೇಳಿದ."ಬಾ ರುಖಿಯಾ ಹೋಗುವ!" (ಪು.೮೮)

ಈ ಕಥೆಯಲ್ಲಿ ಇಬ್ಬರಿಗೂ ಸಾಮಾನ್ಯವಾದ ನೋವಿನ ಅನುಭವವು ಅವರಿಬ್ಬರನ್ನು ಕೊನೆಗೆ ಒಂದುಗೂಡಿಸುತ್ತದೆ. ಬೊಳುವಾರು ಅವರ ಕತೆಗಳಲ್ಲಿ ಬರುವ ಮಾನವೀಯ ಸಂಬಂಧಗಳು ಎಷ್ಟೇ ಭಾವನಾತ್ಮಕವಾಗಿದ್ದರೂ ಅವುಗಳನ್ನವರು ನಿರ್ವಹಿಸುವ ರೀತಿ ಸಂಯಮ, ನಿರ್ಲಿಪ್ತತೆಗಳಿಂದ ಕೂಡಿದುದು. ಇಲ್ಲಿ ರುಖಿಯಾ ಮತ್ತು ಖಾದರರ ಸಂಬಂಧ ಖಾಸಗಿಯಾಗಿ ಉಳಿಯುವುದಿಲ್ಲ. ಅದು ಶಾಲೆಯ ಗೋಡೆಗಳ ಮೂಲಕ ಫಕೀರ ಸಾಹೇಬರನ್ನು ಮುಟ್ಟಿದಾಗ ಅದಕ್ಕೆ ನಿರ್ಣಾಯಕವಾದ ತಿರುವು ದೊರೆಯುತ್ತದೆ. ಈ ತಿರುವಿನಲ್ಲಿಯೇ ರುಖಿಯಾ ಮತ್ತು ಖಾದರ್ ತಮ್ಮ ಭವಿಷ್ಯವನ್ನು ಕಂಡುಕೊಳ್ಳುತ್ತಾರೆ.

ಮುಸ್ಲಿಂ ಸಮಾಜ ಮತ್ತು ಹಿಂದೂ ಸಮಾಜದಲ್ಲಿರುವ ಬಡತನ, ಕೌಟುಂಬಿಕ ಚೌಕಟ್ಟಲ್ಲಿ ಹೆಣ್ಣುಮಕ್ಕಳು ಅನುಭವಿಸುತ್ತಿರುವ ಯಾತನೆ ಈ ವಿಷಯಗಳನ್ನು ಸಾರಾ ಅಬೂಬಕರ್‌ರವರ ಕಥೆಗಳಲ್ಲೂ ಕಾಣಬಹುದು. ಅವರ ಕಥೆಗಳ ಹಿಂದೆ ಒಂದು ಸಾಮಾಜಿಕ ಸಮಸ್ಯೆ ಇರುವುದನ್ನು ಮತ್ತು ಕತೆಗಳಲ್ಲಿ ಅವುಗಳ ಪರಿಹಾರಕ್ಕಾಗಿ ಪ್ರಯತ್ನಿಸಿರುವುದನ್ನು ತಿಳಿಸಿದ್ದಾರೆ. ಅವರ ಸಮಾಜದ ತೀರಾ ಕಮ್ಮಿ ವಿದ್ಯೆ ಪಡೆದ ಹೆಣ್ಣುಮಕ್ಕಳು ಓದಿ ಅರ್ಥ ಮಾಡಿಕೊಳ್ಳಬಹುದಾದಂತಹ ಕತೆಗಳು, ಈ ಕತೆಗಳ ಸಂದೇಶ ಆ ಜನರಿಗೆ ತಲುಪಿ ಅವರನ್ನು ಚಿಂತನೆಗೊಡ್ಡಿದ್ದರೆ ಬರವಣಿಗೆ ಸಾರ್ಥಕವಾಗುತ್ತದೆ ಎನ್ನುತ್ತಾರೆ. ಇಲ್ಲಿ ಸಾರಾರವರು ಶಿಕ್ಷಣದ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ.

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಮಹಮದ್‌ರವರ 'ದೇವರುಗಳ ರಾಜ್ಯದಲ್ಲಿ' ಕಥಸಂಕಲನದ ಹಾಗೂ 'ಅಂಕ' ಕಥಾಸಂಕಲನದಲ್ಲಿನ ಕೆಲವು ಕಥೆಗಳಲ್ಲಿ ಅಲ್ಪ ಸಂಖ್ಯಾತ ಸಮುದಾಯದ ಸ್ತ್ರೀಯರ ಶೋಷಣೆಯ ವಿವಿಧ ಮುಖವನ್ನು ಚ್ಚರ್ಚಿಲಾಗಿದೆ. ಆ ಸಮಾಜದ ಬಹುಪತ್ನಿತ್ವ ವ್ಯವಸ್ಥೆ, ಒಂಟಿ ಹೆಣ್ಣೊಬ್ಬಳ ಮನಃಸ್ಥಿತಿಯನ್ನು ಈ ಕಥೆಗಳು ಬಿಂಬಿಸುತ್ತವೆ. ಸ್ತ್ರೀಯೊಬ್ಬಳು ಸಾಮಾಜಿಕವಾಗಿ ಗಂಡಿನ ದಬ್ಬಾಳಿಕೆಗೆ ಒಳಗಾಗುವುದನ್ನು ವಿವಿಧ ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸುತ್ತವೆ. ವಿದ್ಯೆಯಿಂದ ದೂರವಾದ ಅಲ್ಪಸಂಖ್ಯಾತ ಸ್ತ್ರೀ ಸಮಾಜವನ್ನು ಈ ಕತೆಗಳಲ್ಲಿ ಅನಾವರಣಗೊಳಿಸಲಾಗಿದೆ.

ಕೊನೆ ಟಿಪ್ಪಣಿ:-

೧ ಅಂಕ್ ಕಥಾಸಂಕಲನ : ಬೊಳುವಾರು ಮಹಮದ್ ಕುಂಞ:ಕಾಮಧೇನು ಪ್ರಕಾಶನ : ೧೯೯೬

ರುಖಿಯಾ ಕಥೆಯ ಪುಟ -೬೨

೨. ಅದೇ ಪಠ್ಯ-ಪುಟ-೬೬

೩. ಅದೇ ಪಠ್ಯ-ಪುಟ-೭೮

೪. ಅದೇ ಪಠ್ಯ-ಪುಟ-೮೦

೫. ಅದೇ ಪಠ್ಯ-ಪುಟ-೮೨

೬. ಅದೇ ಪಠ್ಯ-ಪುಟ-೮೮

ಅಧ್ಯಾಯ -೩

ಗಂಡು-ಹೆಣ್ಣಿನ ಸಂಬಂಧದ ಚಿತ್ರಣ

ನಾವಿಂದು ಚಿತ್ರಿಸಿಕೊಳ್ಳುತ್ತಿರುವ ಧಾರ್ಮಿಕ ಚೌಕಟ್ಟಿನೊಳಗಿನ ವಿವಾಹಕ್ಕಷ್ಟೇ ಗಂಡು-ಹೆಣ್ಣಿನ ಸಂಬಂಧ ಸೀಮಿತವಾಗಿಲ್ಲ. ಅದು ವಿವಾಹೇತರ ಸಂಬಂಧಗಳಾದ ವೇಶ್ಯಾ ಸಂಬಂಧವನ್ನು ಮೀರಿ ಇಂದು ಟಹಟಿಂ ಣಯಚಾಳಜಿ ಛಿಟಿಭಿಜಾಣ ವರೆಗೆ ಚಾಚಿಕೊಂಡಿದೆ. ವಿವಾಹವೆನ್ನುವುದು ಸಮಾನ ಆಸಕ್ತಿ, ಅಭಿರುಚಿಗಳ ಗಂಡು- ಹೆಣ್ಣಿನ ಪರಸ್ಪರ ಸಹಬಾಳ್ವೆ ಎಂಬ ಚೌಕಟ್ಟನ್ನು ಮೀರಿ ಸಂಬಂಧದ ದೃಢತೆಯ ನೆಲೆಯಲ್ಲಿ ಮಹತ್ವ ಗಳಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಹಲವು ಸಂಕೀರ್ಣತೆಗಳನ್ನು ಒಳಗೊಂಡಿರುವ ಗಂಡು-ಹೆಣ್ಣಿನ ಸಂಬಂಧವನ್ನು ಕುರಿತ ಜಿಜ್ಞಾಸೆ ಇಂದು ನಿನ್ನೆಯದಲ್ಲ. ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ ಅದು ಅವ್ಯಾಹತವಾಗಿ ಹರಿದು ಬಂದಿರುವುದನ್ನು ಕಾಣಬಹುದಾಗಿದೆ.

ಮುಸ್ಲಿಂ ಸಮುದಾಯದಲ್ಲಿ ನಿಖಾ ಹಾಗೂ ತಲಾಕ್‌ಗಳು ಹೆಣ್ಣನ್ನು ಗಂಡಿನ ಅಧೀನದಲ್ಲಿಡುವ ಶೋಷಣೆಯ ಎರಡು ಅಸ್ತ್ರಗಳು. ಸಾರಾರವರ 'ನಿಯಮ ನಿಯಮಗಳ ನಡುವೆ' ಕಥೆಯಲ್ಲಿ ತಲಾಕ್ ಪಡೆದಿದ್ದ ಹೆಣ್ಣೊಬ್ಬಳು ತನ್ನ ಗಂಡನ ಮರುವಿವಾಹದ ಮಾತಿಗೆ ಬಲಿಯಾದದ್ದನ್ನು ಕಾಣಬಹುದು. ಅಲ್ಪಸಂಖ್ಯಾತ ಸಮುದಾಯದಲ್ಲಿನ ಗಂಡು ಹೆಣ್ಣಿನ ಶೋಷಣೆಯ ಚಿತ್ರಣವನ್ನು ಈ ಕಥೆಯಲ್ಲಿ ಕಾಣಬಹುದು.

ಮಾನವೀಯ ಸಂಬಂಧಗಳಲ್ಲೆಲ್ಲ ಮಹತ್ತರವಾದದ್ದು ಗಂಡು-ಹೆಣ್ಣುಗಳ ಸಂಬಂಧ. ಅದು ಬದುಕನ್ನು ಪ್ರಚೋದಿಸುವ ಒಂದು ಪ್ರಮುಖವಾದ ಸಂಗತಿ. ಆದರೆ, ಗಂಡು ಹೆಣ್ಣುಗಳ ಸಂಬಂಧಗಳನ್ನು ಕೇವಲ ವ್ಯಕ್ತಿಗಳ ನೆಲೆಯಲ್ಲಿ ಗ್ರಹಿಸಲಾಗುವುದಿಲ್ಲ. ಈ ವ್ಯಕ್ತಿಗಳ ಸಾಮಾಜಿಕ ಹಾಗೂ ತಾತ್ವಿಕ ನೆಲೆಗಳೂ ಕೂಡ ನಮಗೆ ಮಹತ್ವದ್ದಾಗುತ್ತವೆ. ಹೀಗಾಗಿ ಪ್ರೀತಿ ಪ್ರೇಮಗಳ ಬಗ್ಗೆ ವ್ಯಕ್ತಿಗಳು ತಳೆಯುವ ತಾತ್ವಿಕ ನಿಲುವುಗಳು ಹಾಗೂ ಅವರ ಸಾಮಾಜಿಕ ಪರಿಸರದ ಸಮಸ್ಯೆಗಳು ಪ್ರಸ್ತುತತೆಯನ್ನು ಪಡೆಯುತ್ತವೆ. ವಿವಾಹ ಸಂಬಂಧಗಳಂಥ ಸಂಸ್ಥೆಗಳನ್ನು ನಿಯಂತ್ರಿಸುವ ಶಕ್ತಿಗಳು ಕೂಡ ಭಾರತೀಯ ಸಂದರ್ಭದಲ್ಲಿ ಸಂಪ್ರದಾಯ ಮತ್ತು ಆಧುನಿಕತೆಗಳ ದ್ವಂದ್ವ ಪ್ರಭಾವಕ್ಕೊಳಗಾಗುವುದರಿಂದ ಅವುಗಳಲ್ಲಿ ಬಿಕ್ಕಟ್ಟುಗಳು ತಲೆದೋರುತ್ತವೆ. ಮಾನವೀಯ

ಸಂಬಂಧಗಳ ವ್ಯಾಪ್ತಿ ವೈವಾಹಿಕ ಸಂದರ್ಭಕ್ಕೆ ಅಥವಾ ಹೆಣ್ಣು-ಗಂಡುಗಳ ಸಂಬಂಧಕ್ಕೆ ಮಾತ್ರ ಸೀಮಿತವಾಗುವುದಿಲ್ಲ.

ಬೊಳುವಾರುರವರ ಕಥಾ ಸಂಕಲನದ ಹಲವಾರು ಕತೆಗಳಲ್ಲಿ ಗಂಡು-ಹೆಣ್ಣಿನ ಸಂಬಂಧವನ್ನು ವಿವಿಧ ನೆಲೆಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಇಲ್ಲಿ ಮುಸ್ಲಿಂ ಸಮುದಾಯದಲ್ಲಿಯ ಗಂಡು-ಹೆಣ್ಣಿನ ಸಂಬಂಧ ಮತ್ತು ಅಂತರ್ ಮತೀಯ ಗಂಡು-ಹೆಣ್ಣಿನ ವಿವಾಹ ಪೂರ್ವ ಹಾಗೂ ವಿವಾಹದ ನಂತರದ ಸಂಬಂಧವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

'ಆಕಾಶಕ್ಕೆ ನೀಲಿ ಪರದೆ' ಈ ಕತೆಯಲ್ಲಿ ಮೊದಲು ಮುಕಂದಣ್ಣ ಬೇಬಿಯಕ್ಕಳನ್ನೂ ತನ್ನ ಮಗಳಂತೆ ಆಡಿ ಬೆಳೆಸಿದರೂ ನಂತರ ಅವಳ ಮಾತಿಗೆ ಕಟ್ಟು ಬಿದ್ದು ಆಕೆಯನ್ನೇ ಮದುವೆಯಾಗುವುದು ಕಾಣಬಹುದು. ಹೀಗೆ ಮದುವೆಯಾದ ಅವರಿಬ್ಬರ ವಿವಾಹ ನಂತರದ ಸಂಬಂಧವನ್ನು ಈ ಕಥೆಯಲ್ಲಿ ವಿವರಿಸಲಾಗಿದೆ. ಮದುವೆ ಎನ್ನುವುದು ಗಂಡು-ಹೆಣ್ಣಿನ ನಡುವಿನ ಒಂದು ಸಾಮಾಜಿಕ ಒಪ್ಪಂದ ಅಷ್ಟೇ ಅಲ್ಲ ಎರಡು ಹೃದಯಗಳ ಪವಿತ್ರ ಬಂಧನವೆಂದು ಹೇಳಬಹುದು.

ಬೇಬಿಯಕ್ಕನ ಪರಿಚಯವಾದ ನಂತರ, ಹಿಂದೆ ಅವಳ ಹುಟ್ಟೂರು ಕೂಡ ಮುತ್ತುಪ್ಪಾಡಿಯೇ ಎಂದು ಹೇಳುತ್ತಾ ಕತೆಯನ್ನು ಲೇಖಕರು ಪ್ರಾರಂಭಿಸುತ್ತಾರೆ. ಗೆಳೆಯನಾಗಿ ಪರಿಚಯವಾದ ಕತೆಗಾರರು ಬೇಬಿಯಕ್ಕನಿಂದ ಅವಳ ಜೀವನದ ಮಾಹಿತಿಯನ್ನು ಪಡೆದು ಅದನ್ನು ಪುಸ್ತಕವಾಗಿ ತರಲು ಪ್ರಾರಂಭಿಸಿದ್ದು ಈ ರೂಪ ಪಡೆದಿದೆ.

ಕುಂಞ ಪಾತಮ್ಮಳ ಮಗಳು ಮುಬೀನಾಳೇ ಈ ಮೇಲೆ ಹೇಳಿದ ಬೇಬಿಯಕ್ಕ. ಹಾಗೆ ಅವಳಿಗೆ ಹೆಸರಿಟ್ಟವನೇ ಮುಕುಂದಣ್ಣ. ಎರಡು ವರ್ಷದ ಮಗುವಾದಾಗಿನಿಂದಲೂ ತಂದೆಯನ್ನು ಕಾಣದ ಈ ಬೇಬಿಯಕ್ಕ ಮುಕುಂದಣ್ಣನ ಆಶ್ರಯದಲ್ಲಿ ಬೆಳೆದವಳು. ಆತನ ಆಶ್ರಯದಲ್ಲಿ ಯಾವ ಆತಂಕವಿಲ್ಲದೆ ಆಕೆ ಬೆಳೆಯಲು ಮುಕುಂದಣ್ಣನೇ ಕಾರಣ. ಆತನಿಗೆ ಯಾರೊಂದಿಗೂ ಸ್ನೇಹವಿರಲಿಲ್ಲ. ಬೇಬಿಯಕ್ಕನೊಬ್ಬಳೇ ಅವನಿಗೆ ಎಲ್ಲಾ. ಹೀಗೆ ಪ್ರಾರಂಭವಾಗುತ್ತದೆ ಅವರಿಬ್ಬರ ನಡುವಿನ ಸಂಬಂಧ. ಹೀಗೆ ಮುಕುಂದಣ್ಣನ ಆಶ್ರಯದಲ್ಲಿ ಬೆಳೆದ ಮುಬೀನಾ ಶಾಲೆಯನ್ನು, ಕಾಲೇಜನ್ನು ಮುಗಿಸುತ್ತಾಳೆ. ನೋಡುವುದಕ್ಕೆ ಕುರೂಪಿಯಾಗಿದ್ದ ಮುಕುಂದಣ್ಣ ಬೇಬಿಯಕ್ಕಳ್ ಬಾಯ್‌ಫ್ರೆಂಡ್ ಎಂದು ಗೆಳತಿಯರು ರೇಗಿಸುತ್ತಾರೆ. ಅವರ ಗೆಳತಿಯರು ಅವಳನ್ನು "ಗುಜ್ಜಾನೆ ಮರಿಯ ಗರ್ಲ್‌ಫ್ರೆಂಡ್' ಎಂದು ರೇಗಿಸಿದ್ದೇ ಮುಂದೆ ನಿಜವಾಗುತ್ತದೆ. ಈ ವಿಷಯವನ್ನು ಮುಕುಂದಣ್ಣನಿಗೆ ಹೇಳಿದಾಗ

ನಗುತ್ತಾ 'ಈಗ ಅಲ್ಲಾ ಎಂದವರು ಯಾರು?' ಎಂದು ಹೇಳುವುದು ಮುಕುಂದಣ್ಣನಿಗೆ ಅವಳ ಮೇಲೆ ಇದ್ದಿರಬಹುದಾದ ಭಾವನೆಯನ್ನು ಮಸುಕು ಮಸುಕಾಗಿ ತೋರಿಸುತ್ತದೆ. ಅತಿ ಸುಂದರಿಯಾದ ಮುಬೀನಾಳಿಗೆ ಈ ಎಲ್ಲದರ ಅರ್ಥ ಮುಂದೆ ತಿಳಿಯುತ್ತದೆ.

ಬೇಬಿಯಕ್ಕಳನ್ನು ಮಾತ್ರವಲ್ಲ ಅವಳ ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿಯೂ ಮುಕುಂದಣ್ಣನದೇ ಆಗಿತ್ತು. ಹೀಗಾಗಿ ಅವಳು ತನ್ನ ಬೇಕು-ಬೇಡಗಳನ್ನು ಕೇಳುವುದು ಅವನಲ್ಲಿಯೇ. ತನ್ನ ಮಗಳ ಮದುವೆಯ ಬಗ್ಗೆ ಕನಸು ಕಾಣಲೂ ಸಾಧ್ಯವಿಲ್ಲದ ಪಾತಮ್ಮಳಿಗೆ, ತನ್ನ ಮಗಳು ತಂದೆಯ ವಯಸ್ಸಿನ ಮುಕುಂದಣ್ಣನನ್ನು ಮದುವೆಯಾಗುತ್ತಾಳೆ ಎಂಬುದರ ಸೂಚನೆ ಇರಲಿಲ್ಲ.

ತನ್ನ ಧರ್ಮದ ಕಟ್ಟುಪಾಡು ಸಹಿಸದೆ ಮುಬೀನಾ ತನ್ನ ಆಯ್ಕೆಯಾದ ಮುಕುಂದಣ್ಣ ಎಲ್ಲಾ ವಿಧದಲ್ಲೂ ಉತ್ತಮ ಎಂದು ಭಾವಿಸುತ್ತಾಳೆ. ತನ್ನ ತಾಯಿಯಲ್ಲಿ ಹೇಳಿಕೊಳ್ಳಲಾಗದ ಎಷ್ಟೋ ವಿಚಾರಗಳನ್ನು ಅವನಲ್ಲಿ ಹಂಚಿಕೊಳ್ಳುತ್ತಾಳೆ. ಒಮ್ಮೆ ತನ್ನ ಪುಸ್ತಕದಲ್ಲಿ ದೊರೆತ ಮತ್ತೊಂದು ಪುಸ್ತಕದ ಬಗ್ಗೆ ಮುಕುಂದಣ್ಣ ಕೇಳಿದಾಗ ಅವನ ಮುಂದೆ ನಾಚಿಕೆಯಿಂದ ತಲೆ ತಗ್ಗಿಸುತ್ತಾಳೆ. ಆಗ ಮುಕುಂದಣ್ಣ ಕೊಡುವ ಸಲಹೆಯಿಂದ ಅವಳು ಮತ್ತೂ ಹತ್ತಿರವಾಗುತ್ತಾಳೆ. ಎಲ್ಲಾ ವಿಧದಲ್ಲಿಯೂ ಸಜ್ಜನಿಕೆ ಅಂಶವನ್ನು ಕಂಡ ಮುಬೀನಾ ತನ್ನ ಗೆಳತಿಯರು ಹೇಳಿದ್ದಂತೆ ಅವನನ್ನೇ ವಿವಾಹವಾಗುತ್ತಾಳೆ. ತನ್ನ ಧರ್ಮದ ಆಚರಣೆಗಳಿಂದ ದೂರ ಉಳಿಯುತ್ತಾಳೆ.

ಮುಕುಂದಣ್ಣನನ್ನು ಮದುವೆಯಾಗಿ ಬಂದ ನಂತರ ಮುಬೀನಾಳಿಗೆ ಮುಕುಂದಣ್ಣ ಸ್ವಲ್ಪ ವಿಚಿತ್ರವಾಗಿ ಕಂಡು ಬರುತ್ತಾನೆ. ಮುಬೀನಾ ವಿವಾಹವಾಗಿ ಬಂದ ನಂತರದಲ್ಲಿ ಅನೇಕರು ಇದರ ಬಗ್ಗೆ ಮಾತನಾಡಿದರೂ ಅದರ ಕಡೆಗೆ ಗಮನ ಕೊಡಲಿಲ್ಲ. ಇದೇ ಸಂದರ್ಭಧಲ್ಲಿ ತಾಲ್ಲೂಕಾಫೀಸಿನ ಕ್ಲಾರ್ಕು ಲತೀಫ ಹೇಳಿದ 'ತಲಾಕ್' ವಿಚಾರವು ಕೂಡ ಮದುವೆಯಾಗಲು ಮುಕುಂದಣ್ಣನೇ ಸರಿ ಎಂಬುದನ್ನು ಸೂಚಿಸುತ್ತದೆ. ಈ ಎಲ್ಲಾ ಅಭಿಪ್ರಾಯಗಳ ಹಿನ್ನೆಲೆ ಹೊಂದಿದ ಮುಬೀನಾ ಸಮಾಜದ ಯಾವುದೇ ಕಟ್ಟುಕಟ್ಟಳೆ ಬಗ್ಗೆಯೂ ತಲೆ ಕೆಡಿಸಿಕೊಳ್ಳದೇ ಹೋಗುತ್ತಾಳೆ.

ಮದುವೆಯಾಗಿ ಮುಕುಂದಣ್ಣನ ಮನೆಗೆ ಬಂದ ಇವಳಿಗೆ ಯಾವುದೇ ಹೊಸ ವಾತಾವರಣ ಕಂಡುಬರುವುದಿಲ್ಲ. ಕಾರಣ ಅವಳಿಗೆ ಮೊದಲಿನಿಂದಲೂ ಆಡಿ ಬೆಳೆದಂತಹ ಮನೆಯಾಗಿರುತ್ತದೆ. ಅವಳು ಓದಿದ್ದು ಕೂಡ ಅದೇ ಮನೆಯಲ್ಲಿಯೇ. ಆದರೆ ಅವಳಿಗೆ ತಾನು ಮುಕುಂದಣ್ಣನ ಹೆಂಡತಿ ಎಂಬ ಭಾವನೆಯು ಬರುವುದು ಹಾಸಿಗೆಯನ್ನು ಸಿದ್ಧಪಡಿಸುವಾಗಲೇ. ಅಲ್ಲಿಯವರೆಗೆ ಆಕೆ ಮುಕುಂದಣ್ಣನ ಇತರ ಎಲ್ಲಾ ಕೆಲಸವನ್ನು ಮಾಡುತ್ತಿದ್ದಳು. ತಾನು ಅವನ ಹೆಂಡತಿ ಅವನ ಜೊತೆಗೆ

ಮಲಗಬೇಕು ಎಂಬುದು ಅನಿರೀಕ್ಷಿತವಾಗಿರುತ್ತದೆ. ಈ ಒಂದು ಸಂದರ್ಭದಲ್ಲಿ ಭಾವನೆಗಳ ಸಂಘರ್ಷಕ್ಕೆ ಒಳಗಾಗುತ್ತಾಳೆ. ಮುಬೀನಾ ಚಿಕ್ಕ ವಯಸ್ಸಿನ ಯುವತಿಯಾದ್ದರಿಂದ ಮುಕುಂದಣ್ಣನ ಮರುದಿನದ ಪ್ರಶ್ನೆಗೆ ಉತ್ತರಿಸಲಾಗದೆ ಹೋಗುತ್ತಾಳೆ. ಮುಕುಂದಣ್ಣನು ಕೇಳಿದ ಪ್ರಶ್ನೆಯೆಂದರೆ "ನಿಜ ಹೇಳಬೇಕು ನೀನು. ರಾತ್ರಿಯೇ ಹೇಳಬೇಕೆಂದಿದ್ದೆ. ನಿನ್ನ ಶಾಲೆಯ ಹುಡುಗಿಯರು ನನ್ನನ್ನು ಆನೆಮರಿ ಎಂದು ಹಾಸ್ಯ ಮಾಡುತ್ತಿದ್ದಾಗ ನೀನೂ ಕೂಡಾ ಅವರ ಒಟ್ಟಿಗೆ ಸೇರಿ ನಗುತ್ತಿರಲಿಲ್ಲವಾ?" (ಪು.೧೩೮)

ಮುಕುಂದಣ್ಣ ಮುಬೀನಾಗಳೊಂದಿಗೆ ಸ್ನೇಹಿತನಾಗಿದ್ದ ಸಂದರ್ಭದಲ್ಲಿನ ಮಾತಿಗೂ ವಿವಾಹದ ನಂತರ ಅವನ ಮಾತಿಗೆ ವ್ಯತ್ಯಾಸವನ್ನು ಗುರುತಿಸಿದ ಅವಳಿಗೆ ಏನು ಹೇಳಬೇಕೆಂದು ತಿಳಿಯದೇ ಹೋಗುತ್ತಾಳೆ. ಮುಕುಂದಣ್ಣ ಅವಳಿಗೆ ನಿಜವಾಗಿಯೂ ತನ್ನ ಮೇಲೆ ಪ್ರೀತಿ ಇದೆಯೇ ಎಂಬುದನ್ನು ಪರೀಕ್ಷಿಸುವುದೇ ಈ ಮಾತಿನ ಉದ್ದೇಶವಾಗಿದೆ. ಅದರೊಂದಿಗೆ ಅದು ಬರೀ ಆಕರ್ಷಣೆಯೇ ಎಂಬುದನ್ನೂ ಖಚಿತಪಡಿಸಿಕೊಳ್ಳುವುದು ಕೂಡ. ಮುಕುಂದಣ್ಣನ ಎಲ್ಲ ಪ್ರಶ್ನೆಗಳಿಗೂ ಮುಬೀನಾಳ ಉತ್ತರ ಅಳು. ಈ ಮೇಲಿನ ಸಂದರ್ಭವು ಅವನಲ್ಲಿದ್ದ ಕೀಳರಿಮೆಯ ಭಾವನೆಯನ್ನು ಸೂಚಿಸುತ್ತದೆ. ಆದರೆ ಈ ಮುಕುಂದಣ್ಣನೇ ಅನಂತರ ಅವಳ ಕಾಲು ಹಿಡಿಯಲು ಮುಂದಾದಾಗ ಅವಳಿಗೆ ಅಸಹ್ಯವಾಗುವುದು. ಅವನು ನಿಜವಾಗಿಯೂ ಕುರೂಪಿಯಾಗಿ ಕಂಡಿದ್ದು ತನ್ನ ಆಕಾರದಿಂದಲ್ಲ, ಅವನ ಮಾತುಗಳಿಂದ. ಇದನ್ನು ತನ್ನ ತಾಯಿಯಲ್ಲಿಯೂ ಹೇಳಿಕೊಳ್ಳಲಾಗದೇ ಸಂಕಟ ಅನುಭವಿಸುತ್ತಾಳೆ. ಬಣ್ಣ ಕುಂದಿದ ಮಗಳ ಮುಖವನ್ನು ಕಂಡು ಎಲ್ಲವನ್ನು ಅರಿತವಳಂತೆ ತಾಯಿ, ಮುಕುಂದಣ್ಣನ ವ್ಯಕ್ತಿತ್ವವನ್ನು ತಿಳಿಸುತ್ತಾಳೆ. ಆದರೂ ಸಹ ಅಂತರಂಗದ ಸಮಸ್ಯೆಯನ್ನು ಹೇಳಲಾಗದೆ ಮುಬೀನಾ ತಳಮಳ ಅನುಭವಿಸುತ್ತಾಳೆ.

ಮುಕುಂದಣ್ಣ ಇಂದಿಲ್ಲ ನಾಳೆ ಸರಿಹೋಗಬಹುದು ಎಂದು ನಂಬಿದ ಬೇಬಿಯಕ್ಕಳಿಗೆ ನಿರಾಶೆಯಾಗಿತ್ತು. ಪರಸ್ಪರ ಮಾತನಾಡುವುದೇ ನಿಂತು ಹೋಗಿತ್ತು. ಇಷ್ಟವಾದ ಅಡಿಗೆಯ ವಿಷಯದಲ್ಲಿ ಯಾವುದೇ ತಪ್ಪನ್ನು ಹೇಳುತ್ತಿರಲಿಲ್ಲ. ಮೊದಲಿನಂತೆ ತಾನು ಸ್ವತಂತ್ರಳು ಎಂದು ತಿಳಿದಿದ್ದ ಅವಳಿಗೆ ದೊಡ್ಡದೊಂದು ಆಶ್ಚರ್ಯ ಕಾದಿತ್ತು. ಅಂಗಡಿಗೆ ಹೋಗಲು ರೆಡಿಯಾಗಿದ್ದ ಮುಕುಂದಣ್ಣ ಹೇಳಿದ್ದು "ಒಂದು ವಾರದಿಂದ ನಿನಗೆ ಹೇಳಬೇಕು ಅಂತ ಯೋಚನೆ ಮಾಡುತ್ತಾ ಇದ್ದೇನೆ. ನೀನು ಮಾಳಿಗೆಯ ಕಿಟಿಕಿಯ ಹತ್ತಿರ ಇಡೀ ಊರು ಕಾಣುವಂತೆ ಪ್ರದರ್ಶನಕ್ಕೆ ಕೂತುಕೊಳ್ಳುವುದು ನನಗೆ ಸರಿ ಕಾಣುವುದಿಲ್ಲ. ನೀನು ಸ್ವಲ್ಪ ಮರ್ಯಾದೆಯಿಂದ ಬದುಕುವುದನ್ನು

ಕಲಿಯಬೇಕು. ನಿಮ್ಮ ಜಾತಿಯವರು ನಿಮಗೆಲ್ಲಾ ಕಪ್ಪು ಬಟ್ಟೆ ಸುತ್ತಿ ಮೂಲೆಯಲ್ಲಿ ಬಚ್ಚಿಡುವುದು ಸುಮ್ಮನೇ ಏನೂ ಅಲ್ಲ. ಸಂಸಾರ ಕೊಟ್ಟರೆ ನೀವು ಮನೆಯ ಮಾಡು ಹತ್ತಿ ಬಟ್ಟೆ ಬಿಚ್ಚಿ ಕುಣಿಯಲಿಕ್ಕೂ ಹಿಂದೆ ಮುಂದೆ ನೋಡುವ ಜಾತಿಯಲ್ಲ."(ಪು..೧೩೯) ಈ ಮೇಲಿನ ಮಾತುಗಳು ಮುಕುಂದಣ್ಣನಿಗೆ ಮುಬೀನಾಳನ್ನು ಹತೋಟಿಯಲ್ಲಿ ಇಡಬೇಕು, ತನ್ನಂತೆ ನಡೆಯಬೇಕು ಎಂಬ ಉದ್ದೇಶವನ್ನೂ ಸೂಚಿಸುತ್ತದೆ. ಸುಂದರಿಯಾದ ಮುಬೀನಾ ಎಲ್ಲಿ ಇದರೊಂದಿಗೆ ಕುರೂಪಿಯಾದ ತನ್ನನ್ನು ಕುರಿತು ಹೇಳುವುದರಿಂದ ನನ್ನನ್ನು ಬಿಟ್ಟು ಹೋಗಬಹುದು ಎಂಬ ಶಂಕೆಯಿಂದಲೂ ಇರಬಹುದು. ಅಂತೆಯೇ ಮುಬೀನಾಳಿಗೆ ಅವರ ಬುರ್ಕಾದ ಬಗ್ಗೆ ಹೇಳುತ್ತಾನೆ. ಇಲ್ಲಿ ಅವಳು ಇರಬೇಕಾದ ಸ್ಥಾನವನ್ನು ಸೂಚಿಸುತ್ತಾನೆ. ಮುಸ್ಲಿಂ ಧರ್ಮದ ಕಟ್ಟುಪ್ಪಣೆಗಳು ಕುರಿತು ಕೂಡ ಪ್ರಸ್ತಾಪಿಸಲಾಗಿದೆ. ಅಷ್ಟೇ ಅಲ್ಲ ಸ್ವಾತಂತ್ರ್ಯ ಅರಸಿ ಬಂದ ಅವಳನ್ನು ಬಂಧನಕ್ಕೆ ಒಳಪಡಿಸುತ್ತಿರುವುದು ಕಂಡುಬರುತ್ತದೆ.

ಎಂದಿನಂತೆ ರಾತ್ರಿ ಮನೆಗೆ ಬಂದ ಮುಕುಂದಣ್ಣ ಕಿಟಕಿಯಿಂದ ಕಾಣಿಸುತ್ತಿದ್ದ ಆಕಾಶವನ್ನು ನೀಲಿ ಪರದೆಯಿಂದ ಮುಚ್ಚಲು ಪ್ರಾರಂಭಿಸುತ್ತಾನೆ. ಆಕಾಶದಂತೆ ಹೃದಯವಂತಿಕೆ ಹೊಂದಿದ್ದ ಮುಕುಂದಣ್ಣ ನೀಲಿ ಪರದೆಯಿಂದ ಮುಚ್ಚುವ ಮೂಲಕ ಮುಬೀನಾಳ ಮನಸ್ಸಿಗೆ ಕಡಿವಾಣ ಹಾಕುವಂತಿದೆ. ಜಾತಿಯ ಅಂಶ ಅವಳನ್ನು ಮತ್ತಷ್ಟು ಚಿಂತೆಗೀಡು ಮಾಡುವುದು. ಅವಳ ಮೇಲಿನ ಅತಿಯಾದ ಪ್ರೀತಿಯು ಕೂಡ ಈ ಮಾತಿಗೆ ಕಾರಣವಾಗಿರಬಹುದು.

ಆತನ ಈ ವರ್ತನೆಯಿಂದ ಮುಬೀನಾಳಿಗೆ ಮತ್ತಷ್ಟು ಕುರೂಪವಾಗಿ ಕಂಡ ಮುಕುಂದಣ್ಣನನ್ನು ಕೆಕ್ಕರಿಸಿ ನೋಡಲೂ ಅಸಹ್ಯವಾಗಿ ಕಂಡದ್ದು ಸಹಜವೇ. ಆ ದಿನ ಎಂದಿಗಿಂತ ಬೇಗ ಮನೆಗೆ ಬಂದಿದ್ದ ಮುಕುಂದಣ್ಣ ನಿಸರ್ಗದ ವರದಾನವಾದ ನೀಲಿ ಆಕಾಶವನ್ನು ನೀಲಿ ಪರದೆಯಿಂದ ಮುಚ್ಚಿದಾಗ ಬೇಬಿಯಕ್ಕನಿಗೆ ಮೈತುಂಬ ಮುಳ್ಳು ನೆಟ್ಟಂತಾಗುತ್ತದೆ. ಪ್ರಕೃತಿಯ ಒಂದು ಅಂಶವಾದ ಈ ನೀಲ ಆಕಾಶ ಹಾಗೂ ಇದರ ಮತ್ತೊಂದು ಅಂಶವಾದ ಮುಳ್ಳು ಈ ಎರಡರಿಂದಲೂ ಮುಬೀನಾ ನೋವನ್ನೇ ಕಾಣುತ್ತಾಳೆ. ಪ್ರಕೃತಿಯ ಎರಡು ವಸ್ತುಗಳಲ್ಲಿ ಒಂದರಿಂದ ಸಿಗುವ ಸಂತೋಷ ಹಾಗೂ ಮತ್ತೊಂದರಿಂದ ಸಿಗುವ ದುಃಖವೇ ಸಂಸಾರವಾಗಿದೆ. ಗಂಡು-ಹೆಣ್ಣಿನ ಸಂಬಂಧವು ಈ ರೀತಿಯದೇ ಆಗಿದೆ. ಕೊನೆಗೆ ತನ್ನ ಗೆಳತಿ ಸುಮತಿಗೆ ಎಂಟು ಪುಟಗಳ ಪತ್ರದ ಮುಖಾಂತರ ಬೇಬಿಯಕ್ಕ ಮುಕುಂದಣ್ಣನು ಎಲ್ಲ ಗಂಡಸರಂತೆ ಇದ್ದಿದ್ದರೇ ನಾನು ಹೆಚ್ಚು ಸಂತೋಷಪಡುತ್ತಿದ್ದೆ ಎನ್ನುವ ಹಿನ್ನೆಲೆಯಲ್ಲಿ ತನ್ನ ನಿರ್ಧಾರವನ್ನು ತಿಳಿಸಿದ್ದಳು. ಇವಳು, ಎಲ್ಲರಂತಲ್ಲ ಮುಕುಂದಣ್ಣ ಎಂದ ಹಿಂದಿನ

ಮಾತಿಗೂ ಮತ್ತು ಇಂದಿನ ಮಾತಿಗೂ ನಡುವಣ ವ್ಯತ್ಯಾಸವನ್ನು ಇಲ್ಲಿ ಗುರುತಿಸಬಹುದು. ಸ್ನೇಹಿತನಾಗಿದ್ದ ಮುಕುಂದಣ್ಣನಿಗೂ ನಂತರ ಗಂಡ ಎಂಬ ಸ್ಥಾನ ಪಡೆದ ಮುಕುಂದಣ್ಣನಲ್ಲಿ ಆದ ಬದಲಾವಣೆಯನ್ನೂ ಗುರುತಿಸಬಹುದು.

ಲೇಖಕರು ಬೇಬಿಯಕ್ಕಳ ಜೀವನದ ಕತೆಯನ್ನು ತಮ್ಮ ಪುಸ್ತಕದಲ್ಲಿ ಚಿತ್ರಿಸಿ ಅವಳಿಗೆ ಕೊಡುತ್ತಾರೆ. ಅದನ್ನು ಓದಿ ಗ್ರಹಿಸಿದ ಬೇಬಿಯಕ್ಕ ಅದು ತನ್ನ ಜೀವನದ ಕತೆ ಎಂಬುದನ್ನು ತಿಳಿಯುತ್ತದೆ. ಲೇಖಕರು ಅವರ ಮನೆಗೆ ಭೇಟಿ ಕೊಟ್ಟಾಗ ಮುಕುಂದಣ್ಣನನ್ನು ನೋಡಿ ಭಯಭೀತರಾಗುತ್ತಾರೆ. ಕತೆಯಲ್ಲಿ ಪರಿಚಯ ಮಾಡಿರುವಂತೆಯೇ "ನಿಮ್ಮ ಕತೆಯಲ್ಲಿನ ರಾಕ್ಷಸ ನಾನೇ" ಎನ್ನುತ್ತಾನೆ.(ಪು.೧೪೧) ಆ ಕತೆಯ ಕೊನೆಯ ಕುರಿತು ಹೇಳುತ್ತಾ ಆ ಹುಡುಗಿಯೇ ಆತನನ್ನು ಕೊಲ್ಲಬೇಕಾಗಿತ್ತು ಎಂಬ ಮಾತು ಆಡುತ್ತಿದ್ದಂತೆ ಗಳಗಳನೇ ಅಳುತ್ತಾನೆ. ಇದು ಮುಕುಂದಣ್ಣ ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುತ್ತಿರುವುದನ್ನು ಕಾಣಬಹುದು. ಆ ವೇಳೆಗೆ ಅವರಿಬ್ಬರೂ ಹೊಂದಾಣಿಕೆಯಿಂದ ಜೀವನ ನಡೆಸುತ್ತಿದ್ದರೆಂಬುದು ಕತೆಯಿಂದ ತಿಳಿದುಬರುತ್ತಿದೆ.

ಲೇಖಕರು ಮುಕುಂದಣ್ಣನಿಗೆ ಪ್ರಶ್ನೆ ಕೇಳಲು ಹೋದಾಗ ಬೇಬಿಯಕ್ಕ ಆಡುವ ಮಾತುಗಳು ಇಲ್ಲಿ ಗಮನಿಸಬೇಕು "ಖಂಡಿತಾ ಹೇಳಿ ಇವರು ಎಲ್ಲ ಗಂಡಸರಂತಲ್ಲ. ಹಾಗಿರುತ್ತಿದ್ದರೆ ನಾನು ಈ ಊರಿಗೆ ತಲುಪಿದ ನಾಲ್ಕು ತಿಂಗಳೊಳಗೆ ಅವರ ಮನೆ ಅಂಗಡಿ ಎಲ್ಲಾ ಮಾರಿಬಿಟ್ಟು ನನ್ನ ತಾಯಿಯನ್ನು ಕರೆದುಕೊಂಡು ಇಲ್ಲಿಗೆ ಬರುತ್ತಿರಲಿಲ್ಲ. (ಪು.೧೪೮) ಈ ಮಾತುಗಳು ಬೇಬಿಯಕ್ಕಳ ಮೇಲೆ ಮುಕುಂದಣ್ಣನ ಪ್ರೀತಿಯನ್ನು ಬಿಂಬಿಸುತ್ತದೆ. ಮನೋವಿಜ್ಞಾನದ ಪ್ರಕಾರ ಅತಿಯಾದ ಪ್ರೀತಿಯು ಈರ್ಷ್ಯೆಯ ರೂಪವನ್ನು ಪಡೆಯುತ್ತದೆ. ಹಾಗೇ ತನ್ನ ಅತಿಯಾದ ಪ್ರೀತಿಯಿಂದ ಮುಕುಂದಣ್ಣ ಅವಳೊಂದಿಗೆ ಬಾಳುತ್ತಾನೆ.

ಮತ್ತೆ ಲೇಖಕರು ಕೇಳಿದ ಪ್ರಶ್ನೆ ಬೇಬಿಯಕ್ಕ ಉತ್ತರಿಸಲು ಸಾಧ್ಯವಾಗದೆ ಚಡಪಡಿಸುತ್ತಾಳೆ. ಅದಕ್ಕೆ ಮುಕುಂದಣ್ಣನ ಮಾತು "ಕಳೆದ ಮೂವತ್ತು ವರ್ಷಗಳಲ್ಲಿ ಈ ನಿಮ್ಮ ಬೇಬಿಯಕ್ಕ ಒಮ್ಮೆಯಾದರೂ ನನ್ನೊಡನೆ ಈ ಪ್ರಶ್ನೆ ಕೇಳಲಿಲ್ಲ". (ಪು.೧೪೨) ಯಾವುದನ್ನು ಪ್ರಶ್ನಿಸುವ ಗುಣವಾಗಲಿ ಹಾಗೂ ಯಾವುದನ್ನೂ ಪ್ರತಿಭಟಿಸುವ ವ್ಯಕ್ತಿತ್ವ ಆಕೆಯಲ್ಲಿ ಇರಲಿಲ್ಲ. ಹೀಗಾಗಿ ಆತ ಹೇಳಿದ್ದನ್ನು ಕೇಳಿಕೊಂಡು ಬದುಕುತ್ತಿದ್ದಳು ಎಂಬುದನ್ನು ಸೂಚಿಸುತ್ತದೆ.

ಒಟ್ಟಾರೆ, ಬೇಬಿಯಕ್ಕ ತನ್ನ ಕುರೂಪವಾದ ದೇಹದ ಆಕಾರವನ್ನು ಕಂಡೂ ಮದುವೆಯಾದಳು. ತನ್ನ ಮೇಲಿನ ಅತಿಯಾದ ಪ್ರೀತಿಯು ಕೂಡ ಹಿಂಸೆ ರೂಪವನ್ನು ತಾಳುತ್ತದೆ ಎಂಬುದನ್ನು ಅರಿತ

ಬೇಬಿಯಕ್ಕ ಒಬ್ಬ ದಾದಿಯಾಗಿ, ಹೆಂಡತಿಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾ ಹೋಗುತ್ತಾಳೆ. ಇದು ಗಂಡು-ಹೆಣ್ಣಿನ ಸಂಬಂಧದಲ್ಲಿ ನಿಷ್ಕಾರಣವಾದ ಪ್ರೀತಿ, ದ್ವೇಷಗಳೆರಡೂ ಇರುತ್ತವೆ ಎಂಬ ಅಂಶವನ್ನು ತಿಳಿಸುತ್ತದೆ.

'ಅಖಿರತ್' ಕತೆಯಲ್ಲೂ ಗಂಡು-ಹೆಣ್ಣಿನ ಸಂಬಂಧಗಳನ್ನು ಎರಡು ಜೋಡಿಗಳಲ್ಲಿ ಕಾಣಬಹುದು. ಆ ಎರಡು ಜೋಡಿಗಳೆಂದರೆ 'ಸಂಜೀವ' ಮತ್ತು 'ಗಿರಿಜ' ಹಾಗೂ 'ಅದ್ದು' ಮತ್ತು 'ಸಲ್ಮಾ'. ಮದುವೆಯಾದ ನಂತರ ಬದಲಾದ ಸಂಜೀವನನ್ನು ಕತೆಯಲ್ಲಿ ನೋಡಬಹುದು. ಹಾಗೆಯೇ ತನ್ನ ಮನೆಯಲ್ಲಿ ಬಾಡಿಗೆಯವನಾದ 'ಅದ್ದು' ಮತ್ತು 'ಸಲ್ಮಾ'ಳ ನಡುವೆ ಪರಸ್ಪರ ಅರ್ಥ ಮಾಡುಕೊಳ್ಳುವಲ್ಲಿ ಆದ ತಪ್ಪಿನಿಂದ ಘಟಿಸಿದ ಅನಾಹುತದ ಚಿತ್ರಣವನ್ನು, ಅದನ್ನು ಸರಿಪಡಿಸಲು ಸಂಜೀವನ ಪ್ರಯತ್ನವನ್ನು ಈ ಕತೆಯಲ್ಲಿ ಕಾಣಬಹುದು.

ಸಂಜೀವ ಮುತ್ತುಪ್ಪಾಡಿ ಗುಡ್ಡೆ ಶಾಲೆಯಲ್ಲಿ ಜವಾನನಾಗಿ ಕೆಲಸ ಮಾಡುತ್ತಿದ್ದನು. ಮದುವೆಯಾದ ನಂತರ ಬದಲಾದ ಸಂಜೀವನ ಚಿತ್ರಣವನ್ನು ಕೊಡುತ್ತಾರೆ. ದೊಡ್ಡವರು, ಚಿಕ್ಕವರು ಮರ್ಯಾದೆ ಇಲ್ಲದೆ, ಕೇಳಿದ್ದಕ್ಕೆ ಹೇಳಿದ್ದಕ್ಕೆಲ್ಲಾ ವಿರುದ್ಧ ಮಾತನಾಡುತ್ತಿದ್ದ ಈ ಸಂಜೀವ, ಊರಿನ ಎಲ್ಲಾ ತರಲೆಗಳಿಗೂ ಬೀಜವಾಗಿದ್ದವನು. ಊರಿನ ದೊಡ್ಡ ವ್ಯಕ್ತಿ ಎಂದೇ ಹೆಸರು ಮಾಡಿದ್ದ ಸಿದ್ಧಿ ಸಾಹುಕಾರರಿಗೆ ಇವನನ್ನು ನೋಡಿದರೆ ದ್ವೇಷ. ಕಾರಣ ಅವರ ನಡತೆಯಲ್ಲಿ ಸ್ವಲ್ಪ ನಯ ವಿನಯವಿರಲಿಲ್ಲ. ಮದುವೆ ಒಂದು ಜವಾಬ್ದಾರಿಯನ್ನು ತಂದು ಕೊಟ್ಟು ಪರಿಣಾಮ ಇವನ ವ್ಯಕ್ತಿತ್ವವನ್ನು ಬದಲಾಯಿಸುತ್ತದೆ.

ಗಿರಿಜಾಳನ್ನು ಮದುವೆಯಾದ ಸಂಜೀವ ತನ್ನ ಹಿಂದಿನ ವರ್ತನೆ ವ್ಯಕ್ತಿತ್ವವನ್ನು ಬಿಟ್ಟುಕೊಟ್ಟು ಹೊಸ ಮನುಷ್ಯನಾಗುತ್ತಾನೆ. ಇಲ್ಲಿ ಗಂಡು-ಹೆಣ್ಣಿನ ನಡುವೆ ಇರಬೇಕಾದ ಪ್ರೀತಿಯನ್ನು ಕಾಣಬಹುದು. ತಂದೆಯ ಹಣದಿಂದಲೇ ಜೀವನ ನಡೆಸುತ್ತಿದ್ದ ಸಂಜೀವನಿಗೆ ಕೆಲಸಕ್ಕೆ ಹೋಗಬೇಕು ಎಂಬ ಜವಾಬ್ದಾರಿಯು ಬಂದಿದ್ದು ಮದುವೇ ಆದಾ ನಂತರವೆ. ಈ ಗಂಡ ಹೆಂಡತಿಯ ನಡುವಿನ ಪ್ರೀತಿ, ವಿಶ್ವಾಸ, ಜವಾಬ್ದಾರಿ, ಇಬ್ಬರೂ ಪರಸ್ಪರ ಅರ್ಥ ಮಾಡಿಕೊಳ್ಳುವಿಕೆಯಲ್ಲಿನ ಸಮಾನತೆಯನ್ನು ಕತೆಯಲ್ಲಿ ಕಾಣಬಹುದು. ಆದರೆ ಅವರ ನೆರೆಮನೆಯವರೇ ಆದ 'ಅದ್ದು' ಮತ್ತು 'ಸಲ್ಮಾ' ನಡುವಿನ ಅರ್ಥ ಮಾಡಿಕೊಳ್ಳುವಿಕೆಯಲ್ಲಿ ಆದ ತಪ್ಪಿನಿಂದ, ಅದ್ದು ಸಲ್ಮಾಳಿಗೆ ತಲಾಕ್ ನೀಡಲು ಮುಂದಾಗುವುದನ್ನು ಕಾಣಬಹುದು.

ಗಿರಿಜಾ ಹೇಳಿದ ಮಾತಿಗೆ ಗೌರವ ಕೊಡುವ ಸಂಜೀವ ಸಮಾಧಾನದಿಂದ ಅವರಲ್ಲಿ ತಪ್ಪನ್ನು ಸರಿಪಡಿಸಲು ಪ್ರಯತ್ನಿಸುತ್ತಾನೆ. ಸಲ್ಮಾಳು ಮಕ್ಕಳಾಗದಂತೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದೇ ತಪ್ಪು ಎಂದು ತಿಳಿದಿದ್ದ ಅದ್ದುವಿಗೆ ತಿಳುವಳಿಕೆಯನ್ನು ಹೇಳುವ ಮೂಲಕ ಅವರನ್ನು ಒಂದುಗೂಡಿಸುತ್ತಾರೆ. ಇಲ್ಲಿ ಗಂಡು ಹೆಣ್ಣಿನಲ್ಲಿ ಅಗತ್ಯ ವಾದ ಪರಸ್ಪರ ಅರ್ಥಮಾಡಿಕೊಳ್ಳುವ ಕೊರತೆಯ ಅಂಶದಿಂದ ಆ ಸಂಬಂಧವು ಹದಗೆ'ಡುತ್ತದೆ. ಹೆಣ್ಣಿನ ಭಾವನೆಗೆ ಗೌರವ ಕೊಡಬೇಕು. ಕೇವಲ 'ತಲಾಕ್' ಎಂಬ ಪದದಿಂದ ಗಂಡು-ಹೆಣ್ಣಿನ ನಡುವಿನ ಸಂಬಂಧವನ್ನು ಬಿಡಿಸಲು ಸಾಧ್ಯವಿಲ್ಲ.

'ಇದ್ದತ್' ಈ ಕತೆಯಲ್ಲಿ ಪುತ್ತಬ್ಬ ಮತ್ತು ಮೆಹರುನ್ನೀಸಾಳ ಜೋಡಿಯನ್ನು ಕಾಣಬಹುದು. ಪುತ್ತಬ್ಬ ಸಾಹುಕಾರ ಅವಳ ಎಲ್ಲಾ ಅಗತ್ಯವನ್ನು ಪೂರೈಸುವ ಮೂಲಕ ಅವಳ ಪ್ರೀತಿಯನ್ನು ಗಳಿಸಿದನು. ಪ್ರತಿಯೊಂದು ವಿಚಾರ ಕುರಿತು ಅವಳಿಗೆ ತಿಳಿಸುತ್ತಿದ್ದನು. ಹಾಗೆ ಸ್ವಲ್ಪಮಟ್ಟಿಗೆ ವ್ಯವಹಾರವನ್ನು ಕಲಿಸುತ್ತಾನೆ. ದೊಡ್ಡ ವಯಸ್ಸಿನ ಗಂಡಸು ಮತ್ತು ಚಿಕ್ಕ ವಯಸ್ಸಿನ ಹೆಂಗಸು ಈ ಇಬ್ಬರ ನಡುವೆ ಪರಸ್ಪರ ಹೊಂದಾಣಿಕೆಯನ್ನು ಕಾಣಬಹುದು. ಇಲ್ಲಿ ಮೆಹಾರುನ್ನಿಸಾಳಿಗೆ ಮೊದಲ ರಾತ್ರಿಯಲ್ಲಿ ಎಲ್ಲಾ ವಿಷಯವನ್ನು ಬಿಡಿಸಿ ಹೇಳುತ್ತಾನೆ. ಅಂಗಡಿಯ ಕೈಗೊಂಚಲನ್ನು ನೀಡಿ ಅಂಗಡಿಯಲ್ಲಿನ ಯಾವ ವಸ್ತುವಿನ ಬೆಲೆ ಹೆಚ್ಚು, ಯಾವ ವಸ್ತುವಿನ ಬೆಲೆ ಕಡಿಮೆ ಇವೆಲ್ಲಾವನ್ನೂ ಸಹ ಅವಳೊಂದಿಗೆ ಹೇಳುತ್ತಿದ್ದನು. ಇವರಿಬ್ಬರು ಆದರ್ಶ ದಂಪತಿಗಳಂತೆ ಕಂಡುಬರುತ್ತಾರೆ. ಆದರೂ ಮೆಹರುನ್ನೀಸಾಳಿಗೆ ಇಲ್ಲಿ ನಿದ್ದೆ ಇಲ್ಲ. ಬಡತನದಿಂದ ಬಂದ ಇವಳಿಗೆ ಇಲ್ಲಿ ಎಲ್ಲಾ ದೊರೆತರೂ ಸಹ ಮನಸ್ಸಿನಲ್ಲಿ ವಯೋ ಸಹಜ ಆಸೆ ಕಾಡುತ್ತಿರುತ್ತದೆ. ಅದೇ ಮನೆಯಲ್ಲಿ ಕೆಲಸಕ್ಕೆ ಅವರ ಮನೆಯಲ್ಲಿ ಉಳಿದಿದ್ದ 'ಸಮದ್' ಮೇಲೆ ಪ್ರೀತಿ. ಆದರೂ ಅದು ಸಾಧ್ಯವಿಲ್ಲ ಎಂದು ಕೈಜಮ್ಮ ಎಚ್ಚರಿಕೆ ನೀಡುತ್ತಾಳೆ. "ಸಾಯುವ ಮೊದಲು ತಾನು ಒಂದು ಚಿಕ್ಕ ಹುಡುಗಿಯನ್ನು ಮದುವೆಯಾಗಿ ಅನ್ಯಾಯ ಮಾಡಿ ಬಿಟ್ಟೆ, ನಿನಗಿನ್ನು ಯಾರು ಗತಿ?"(ಪುಟ -೫೬)- ಎಂದು ಇಲ್ಲಿ ಪುತ್ತಬ್ಬ, ತಾನು ಮಾಡಿದ್ದು ತಪ್ಪು ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಸಮದ್‌ನನ್ನು ರಾಜಕುಮಾರನಂತೆ ಭಾವಿಸಿದ ಅವಳಿಗೆ ತಾನು ರಾಜಕುಮಾರಿಯಾಗಲೂ ಸಾಧ್ಯವಾಗಲಿಲ್ಲ. ಹೀಗೆ ಸಮಾಜದಲ್ಲಿ ಗಂಡು-ಹೆಣ್ಣಿನ ಸಂಬಂಧಕ್ಕೆ ಒಂದು ಮೌಲ್ಯವಿದೆ. ಆ ಪ್ರಕಾರವೇ ನಡೆದು ಅದು ಸಾಧ್ಯವಾಗಿಸ'ಬೇಕು.

'ಇಮಾರತ್' ಕತೆಯಲ್ಲಿ ವಿಧವೆಯಾದ ಹೆಣ್ಣನ್ನು ಮತ್ತೆ ಮದುವೆಯಾಗ ಬಯಸುವ ಅಧ್ಯಕ್ಷರಾದ ಇಸ್ಮಾಲಿ ಹಾಜಿಯರವರ ಮಗ ಸುಲೇಮಾನ್‌ನನ್ನು ಕಾಣಬಹುದು. ಮುಸ್ಲಿಯಾರ'ರ

ವಿಧವೆ ಸಲ್ಮಾಳಿಗಾಗಿಯೇ ನಿರ್ಮಿಸಿದ 'ಇಮಾರತ್' ಗೆ ಸೇರಿದ ಮೇಲೆ ಸಾಯುವವರೆಗೂ ಮುಸ್ಲಿಂರು ವಿಧವೆಯಾಗಿಯೇ ಉಳಿಯಬೇಕಾಗುತ್ತದೆ. ಒಂದು ವರ್ಷದಿಂದ ಪ್ರೀತಿ ಮಾಡುತ್ತಿದ್ದ ಸುಲೇಮಾನ್ ತಂದೆಯನ್ನು ಒಪ್ಪಿಸುವಲ್ಲಿ ಜಯಶಾಲಿಯಾಗುತ್ತಾನೆ. ಈ ಕತೆಯಲ್ಲಿನ ಗಂಡು-ಹೆಣ್ಣಿನ ಸಂಬಂಧದ ಚಿತ್ರಣವು ಸ್ವಲ್ಪ ಭಿನ್ನವಾಗಿದೆ. ಕೆಲವೊಂದು ಸಂದರ್ಭ ಸನ್ನಿವೇಶಗಳಿಗೆ ಕಟ್ಟುಬಿದ್ದು ಮದುವೆಯಾಗಿ ವಿಧವೆಯಾದ ಹೆಣ್ಣಿಗೆ ಊರಿನ ಹಿರಿಯರ ಮಗನೇ ಹೊಸದೊಂದು ಬಾಳು ಕೊಡಲು ಮುಂದಾಗುತ್ತಾನೆ. ಇಲ್ಲಿ ಇವರಿಬ್ಬರಲ್ಲಿದ್ದ ಪ್ರೀತಿಯನ್ನು ಕಾಣಬಹುದು.

'ದೇವರುಗಳ ರಾಜ್ಯದಲ್ಲಿ' ಕಥಾ ಸಂಕಲನದ 'ಮಾರಾಟ' ಕತೆಯಲ್ಲಿ ಅಂತರ್ ಮತೀಯ ಗಂಡು ಹೆಣ್ಣಿನ ಸಂಬಂಧವನ್ನು ಚಿತ್ರಿಸಿದ್ದಾರೆ. ಇಲ್ಲಿನ ರಹೀಮಣ್ಣ ಮತ್ತು ಜಲಜಳ ಸ್ನೇಹ ಹಾಗೂ ಪ್ರೀತಿಯ ಬಗೆಯು ವಿಚಿತ್ರವಾಗಿದೆ. ಸೀತಮ್ಮ ಇಲ್ಲಿ ಸೂಳೆ. ಅವಳ ಮಗಳು ಆ ದಾರಿಯಲ್ಲಿ ಮುಂದುವರೆಯುವುದನ್ನು ಸಮಾಜ ಬಯಸುತ್ತಿತ್ತು. ಸಮುದಾಯದ ಜನ ಅದಕ್ಕೆ ಪಣತೊಟ್ಟು ನಿಂತಿದ್ದರು. ಆದರೆ ಸೀತಮ್ಮನ ಮಗಳು ಜಲಜಳಿಗೆ ರಹೀಂನ ಮೇಲಿದ್ದ ವಿಚಿತ್ರ ಭರವಸೆಯಿಂದ ಅವಳು ಈ ಸಮಾಜವನ್ನು ಅಲ್ಲಿಯ ಜನರನ್ನು ಲೆಕ್ಕಿಸುವುದಿಲ್ಲ.

'ದಯವಿಟ್ಟು ಹೇಳುವಿರಾ', ಕತೆಯಲ್ಲಿ ಅಂತರ ಮತೀಯ ಗಂಡು ಹೆಣ್ಣಿನ ಮದುವೆಯ ಸಮಸ್ಯೆಯನ್ನು ಕಾಣಬಹುದು. ಮುಸ್ಲಿಂ ಮತಕ್ಕೆ ಸೇರಿದ ಇಸ್ಮಾಲಿ ಹಿಂದೂ ಧರ್ಮಕ್ಕೆ ಸೇರಿದ ಶಾಲಿನಿ ಇಬ್ಬರೂ ಓದಿದವರು ಮತ್ತು ಉದ್ಯೋಗದಲ್ಲಿರುವವರು. ಸರ್ವಧರ್ಮಗಳ ಕುರಿತು ಸಮ್ಮೇಳನ ನಡೆಸುತ್ತಿದ್ದ ಕಾಲೇಜು ಉಪನ್ಯಾಸಕನಾದ ಇಸ್ಮಾಲಿಗೆ ಅವನ ಗೆಳೆಯರೇ ಕಾಲೇಜಿನ ಶಾಲಿನಿಯನ್ನು ದಾನ ಮಾಡುವ ಕೆಲಸ ಬೇಸರವನ್ನು ತರುತ್ತದೆ. ಎಲ್ಲರೂ ಒಂದೇ ಧರ್ಮ, ಒಂದೇ ಜಾತಿ ಎಂದೆಲ್ಲಾ ಭಾಷಣ ಮಾಡುವವರ ಮನಸ್ಸಿನಲ್ಲಿನ ಹುಳುಕನ್ನು ಕಾಣಬಹುದು. ತಮ್ಮ ಧರ್ಮದವರು ಎಲ್ಲಾ ಧರ್ಮವನ್ನು ಕುರಿತು ಮಾತನಾಡಲು ಮಾತ್ರವೇ ಅರ್ಹರೇ ಹೊರತು ಅದೇ ಧರ್ಮಕ್ಕೆ ಸೇರಲು ಅಲ್ಲ.

ಶಾಲಿನಿಯನ್ನು ಮದುವೆಯಾಗುತ್ತಾನೆ ಎಂಬ ಕಾರಣದಿಂದಲೇ ತಮ್ಮದೇ ಕಾಲೇಜಿನಲ್ಲಿ ಅವನನ್ನು ಪ್ರಿನ್ಸಿಪಾಲ್‌ನಾಗಿ ನೇಮಕ ಮಾಡುತ್ತಾರೆ. ಆಗ ಅವನು ಯಾವುದೇ ವಿರೋಧ'ದ ಮಾತಿಲ್ಲದೆ ಮೌನವಾಗಿಯೇ ಇರುವುದು ಅನಿವಾರ್ಯವಾಗುತ್ತದೆ. ಹಾಗೇ ತನ್ನ ಧರ್ಮದಲ್ಲಿಯೇ ಉಳಿದ ಇಸ್ಮಾಲಿ ಲೇಖಕರಿಗೆ ಎಲ್ಲಾ ವಿಷಯವನ್ನು ತಿಳಿಸುತ್ತಾನೆ. ಮೊದಲಲ್ಲಿ ಇಬ್ಬರ ಮದುವೆಗೆ ವಿರೋದ ವ್ಯಕ್ತಪಡಿಸಿದ ಸುಬ್ಬರಾಯರು ಅನಂತರ ಸುಮ್ಮನಾದುದನ್ನು ಕಾಣಬಹುದು. ಆಗ ತಮ್ಮ

ಧರ್ಮದವರಿಂದ ಸಿಗುವ ಸಹಾನುಭೂತಿ, ಪ್ರೀತಿಯನ್ನು ಅರಿತು ಮುಂದೆ ಏನು ಮಾಡುವುದು ಎಂಬ ಸಮಸ್ಯೆ ಉದ್ಭವವಾಗುತ್ತದೆ. ಇದೆಲ್ಲಾ ಅವರು ಹಿಂದೂ ಧರ್ಮದವರು ತಮ್ಮ ಜಾತಿ ಕೆಡಿಸಲು ಮಾಡುತ್ತಿರುವ ಸಂಚು ಎಂದೇ ಭಾವಿಸುತ್ತಾರೆ. ಶಾಲಿನಿಯನ್ನು ಮದುವೆಯಾಗಬೇಕಾದರೆ ಕೆಲಸ ಬಿಡಬೇಕು. ಈ ಎಲ್ಲಾ ಷರತ್ತುಗಳನ್ನು ದಾಟಿ ಹೋಗಲು ಸ್ನೇಹಿತನಲ್ಲಿ ಸಹಾಯ ಕೇಳುತ್ತಾನೆ.

ಇಲ್ಲಿ ಧಾರ್ಮಿಕ ಕಾರಣದಿಂದ ಬೇರೆಯಾಗಬೇಕಾದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಇಸ್ಮಾಲಿ ಮತ್ತು ಶಾಲಿನಿಯನ್ನು ಚಿತ್ರಿಸಿದ್ದಾರೆ. ಶಾಲಿನಿಯು ಸಲ್ಮಾಳಾಗಿ ಇಸ್ಮಾಲಿಯ ಧರ್ಮಕ್ಕೆ ಮತಾಂತರ ಹೊಂದಿದರೆ ಮಾತ್ರ ಉದ್ಯೋಗ ದೊರೆಯುವ ಭರವಸೆಯಿತ್ತು. ಸಮಾಜದಲ್ಲಿ ಪ್ರೀತಿಸಿ ಮದುವೆಯಾಗ ಬಯಸುವ ಗಂಡು-ಹೆಣ್ಣು ಎದುರಿಸಬೇಕಾದ ಸಮಸ್ಯೆಯೇ ಇದು. ಅದರಲ್ಲಿ ಅಂತರ್ ಮತೀಯ ಹೆಣ್ಣು ಗಂಡಿನ ಸಮಸ್ಯೆಯು ಬಗೆಹರಿಸಲು ಕಷ್ಟ. ಏಕೆಂದರೆ ಅವರಿಗೆ ಮೂಲಭೂತ ಅವಶ್ಯಕತೆಯನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಅವರಿಬ್ಬರು ಸೇರಿ ಜೀವನ ನಡೆಸಲು ಅನು ಮಾಡಿಕೊಡಬೇಕಾಗಿರುವ ಸಮಾಜ ತಟಸ್ಥವಾಗುತ್ತದೆ.

'ಸೈತಾನ್' ಕತೆಯಲ್ಲಿ ಗಂಡ ತನಗೆ ಮಕ್ಕಳಿಲ್ಲ ಎಂಬ ಕಾರಣದಿಂದ ಮತ್ತೊಂದು ಮದುವೆಗೆ ಮುಂದಾದುದನ್ನು ಇಲ್ಲಿ ಕಾಣಬಹುದು. ಗಂಡು ಹೆಣ್ಣಿನಲ್ಲಿ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳದ ತಪ್ಪಿನಿಂದ ಕೊನೆಗೆ ಹೆಣ್ಣೊಬ್ಬಳು ಬಲಿಯಾಗುವುದನ್ನು ನೋಡಬಹುದು. ಆಕೆಯ ಮನಸ್ಥಿತಿಯನ್ನು ಅರಿಯದ ಅವರು ತನ್ನ ಹೆಂಡತಿಗೆ ಒಕ್ಕಣಿ ಹಿಡಿದುಕೊಂಡಿದೆ ಎಂದು ತಪ್ಪು ಭಾವಿಸುತ್ತಾನೆ. ಇದು ಗಂಡು ಹೆಣ್ಣಿನ ನಡುವೆ ಇರಬೇಕಾದ ಹೊಂದಾಣಿಕೆಯ ಸಮಸ್ಯೆಯಾಗಿದ್ದು ಇದರಿಂದ ಅನಾಥಳಾದ, ಮಾನಸಿಕವಾಗಿ ಧೈರ್ಯ ಕುಂದಿದ ಓರ್ವ ಹೆಣ್ಣಿನ ಬಲಿಯ ಚಿತ್ರಣವನ್ನು ಕಾಣಬಹುದು.

'ಅಂಕ' ಸಂಕಲನದ ಕಥೆಯಾದ 'ಮುದುಕ ಹೇಳಿದ ಕಥೆ'ಯಲ್ಲಿ ಕಥೆಯ ತಿರುವಿಗೆ ಕಾರಣವಾಗುವ ಗಂಡು-ಹೆಣ್ಣಿನ ಸಂಬಂಧವನ್ನು ಕಾಣಬಹುದು.

'ರುಖಿಯಾ' ಕತೆಯಲ್ಲಿ ವಿಧವೆಯಾದ ಹೆಣ್ಣೊಬ್ಬಳಿಗೆ ಆಕಸ್ಮಿಕವಾಗಿ ಪರಿಚಯವಾದ ಗಂಡು ಅವಳ ಬಾಳಸಂಗಾತಿಯಾಗುವುದನ್ನು ಕಾಣಬಹುದು. ಊರಿಗೆ ಹೊಸದಾಗಿ ಶಾಲೆಗೆ ಸೇರಿದ ಮಾಸ್ತರರ ಭೇಟಿಯಿಂದ ರುಖಿಯಾಳಲ್ಲಿ ಉಂಟಾಗುವ ವಯೋಸಹಜ ಆಸೆಯನ್ನು ಕಾಣಬಹುದು. ಚಿಕ್ಕ ವಯಸ್ಸಿನಲ್ಲಿ ವಿಧವೆಯಾದ ಇವಳು ಖಾದರ್‌ನನ್ನು ತನ್ನ ಬಾಳ ಸಂಗಾತಿಯಾಗಿ ಸ್ವೀಕರಿಸಲು ಬಯಸುತ್ತಾಳೆ.

ಈ ಕತೆಯಲ್ಲಿ ಬರುವ ಮತ್ತೊಂದು ಪಾತ್ರ ಹಲೀಮ. ಬಡ ಹೆಣ್ಣೊಬ್ಬಳು ಪರ ಗಂಡಸಿನೊಂದಿಗೆ ಮಾತನಾಡಿದರೆ ತಪ್ಪಾಗಿ ನೋಡುವ ಸಮಾಜ, ಅವರ ಜೀವನವನ್ನು ಬದಲಾಯಿಸುತ್ತದೆ. ಅವಳು ನಡೆತೆಗೆಟ್ಟವಳು ಎಂಬ ಪಟ್ಟ ಬೇರೆ. ಅದೇ ಮೇಲ್ವರ್ಗದ ಹೆಣ್ಣೊಬ್ಬಳು ಏನು ಮಾಡಿದರೂ ತಪ್ಪಾಗುವುದಿಲ್ಲ. ಸಮಾಜವು ಗಂಡು ಹೆಣ್ಣಿನ ಸಂಬಂಧವನ್ನು ತಪ್ಪಾಗಿ ಗ್ರಹಿಸಿ ಅದರ ಪ್ರಚಾರದಲ್ಲಿ ತೊಡಗುತ್ತದೆ. ಇಲ್ಲಿ ಮುಗ್ಧ ರುಖಿಯಾಳ ಮೇಲೆ ಆಸೆಯನ್ನು ಇಟ್ಟಿದ್ದ ಅದ್ದು ಕಾಕ ಅವಳ್ ಮೇಲೆ ಅಪಪ್ರಚಾರ ಮಾಡುತ್ತಾನೆ.

ಹೆಣ್ಣೊಬ್ಬಳು ಸಮಾಜದಲ್ಲಿ ಎದುರಿಸಬಹುದಾದ ಸಮಸ್ಯೆಯನ್ನು ಈ ಕತೆಯಲ್ಲ ಕಾಣಬಹುದು. ವಿಧವೆಯಾದ ರುಖಿಯಾಳು ಸಮಾಜಕ್ಕೆ ಹೆದರದೇ ದೃಢವಾಗಿ ನಿಲ್ಲುತ್ತಾಳೆ. ಶಿಕ್ಷಕನಾಗಿ ಊರಿಗೆ ಬಂದ ಖಾದರ್ ವಿದ್ಯೆಯಿಂದ ಸಮಾಜದ ಬದಲಾವಣೆ ಮಾಡಲು ಪ್ರಯತ್ನಿಸುತ್ತಾನೆ. ಆದರೆ ಅದು ಸಾಧ್ಯವಾಗುವುದಿಲ್ಲ ಎಂದು ತಿಳಿದ ನಂತರ ಹತಾಶನಾಗುತ್ತಾನೆ ಈ ಕಥೆಯಲ್ಲಿ ಬದಲಾವಣೆಯನ್ನು ಬಯಸದ ಸಂಪ್ರದಾಯಸ್ಥ ಸಮಾಜವನ್ನು ಕಾಣಬಹುದು.

ಖಾದರ್‌ಗೆ ನಿಜವಾಗಿಯು ಪ್ರೀತಿಯಿದ್ದದ್ದು ರುಖಿಯಾಳ ಮೇಲೆ. ಮಾನಸಿಕವಾಗಿ ಒಬ್ಬರನ್ನೊಬ್ಬರು ಪರಸ್ಪರ ಅರಿತಿದ್ದ ಇವರಿಬ್ಬರೂ ಒಟ್ಟುಗೂಡುತ್ತಾರೆ. ವಿದ್ಯೆಯಿಂದ ಹೆಣ್ಣಿನ ಮನಸ್ಥಿತಿ ಅರಿತು 'ಬಾ ರುಖಿಯಾ, ಹೋಗುವ' ಎನ್ನುವ ಮೂಲಕ ಪರಸ್ಪರ ಒಂದಾಗುತ್ತಾರೆ. ಖಾದರ್ ಮೆಚ್ಚಿದ್ದು ರುಖಿಯಾಳ ರೂಪ, ನಡತೆಯನ್ನು. ಈ ಒಂದು ಸಂದರ್ಭದಲ್ಲಿ ವಿಧವೆಯಾದ ರುಖಿಯಾಳಿಗೆ ಹೊಸಬಾಳನ್ನು ನೀಡಿದ ಖಾದರ್, ಸಮಾಜಕ್ಕೆ ಆದರ್ಶ ಎನಿಸಬಹುದಾದ ಗಂಡು ಹೆಣ್ಣಾಗಿ ಕಂಡು ಬರುತ್ತಾರೆ

ಒಟ್ಟಾರೆ ಈ ಅಧ್ಯಾಯವು ಗಂಡಿನ ಮೇಲೆ ಅವಲಂಬಿತಳಾದ ಹೆಣ್ಣನ್ನು, ಹೆಣ್ಣಿನ ಮೇಲೆ ಅವಲಂಬಿತನಾದ ಗಂಡನ್ನು ಕಾಣಬಹುದು. ವಿಧವೆಯಾದ ಹೆಣ್ಣೊಬ್ಬಳಿಗೆ ಮರುಮದುವೆ ಮಾಡುವ ಮೂಲಕ ಗಂಡಿನ ಆಸರೆಯನ್ನು ಅಂತರ್ ಮತೀಯ ವಿವಾಹ ಸಾಧ್ಯತೆಯನ್ನು ಮೂಲಕ್ ಗಂಡು-ಹೆಣ್ಣಿನ ಸಂಬಂಧದ ಮಾನಸಿಕ ತುಡಿತದ ಚಿತ್ರಣವನ್ನು ನೀಡಿದ್ದಾರೆ.

ಕೊನೆ ಟಿಪ್ಪಣಿ:-

೧ ಆಕಾಶಕ್ಕೆ ನೀಲಿ ಪರದೆ ಕಥಾಸಂಕಲನ : ಬೊಳುವಾರು ಮಹಮದ್ ಕುಂಞ : ಕಾಮಧೇನು ಪ್ರಕಾಶನ:೧೯೯೯. ಆಕಾಶಕ್ಕೆ ನೀಲಿ ಪರದೆ ಕಥೆಯ ಪುಟ –೧೩೮

೨.ಅದೇ ಪಠ್ಯ –೧೩೯

೩. ಅದೇ ಪಠ್ಯ–೧೪೧

೪. ಅದೇ ಪಠ್ಯ–೧೪೮

೫. ಇದ್ದತ್ ಕಥೆಯ ಪುಟ–೫೬

ಅಧ್ಯಾಯ – ೪

ದೇವರು–ಧರ್ಮ–ಮೌಢ್ಯತೆಯ ಚಿತ್ರಣ

ಈ ಅಧ್ಯಾಯದಲ್ಲಿ ಇಸ್ಲಾಂ ಧರ್ಮ–ದೇವರು–ಮೌಢ್ಯತೆಯ ಬಗ್ಗೆ ತಿಳಿಯುವುದಕ್ಕೂ ಮುನ್ನ ಆ ಧರ್ಮ ಸ್ಥೂಲ ಪರಿಚಯ ಅಗತ್ಯವಾಗಿದೆ. ಮೊದಲಿಗೆ ಇಸ್ಲಾಂ ಧರ್ಮ, ದೇವರು, ಆಚರಣೆ ಬಗ್ಗೆ ತಿಳಿಯೋಣ.

ಮುಸ್ಲಿಂ ಜನ 'ಅಲ್ಲಾ' (ಅಥವಾ ಅರಬ್) ಎಂಬ ಹೆಸರಿನ ಒಬ್ಬನೇ ದೇವರನ್ನು ಆರಾಧಿಸುತ್ತಾರೆ. ಇವರು ನಿಷ್ಠುರವಾಗಿ ಏಕೇಶ್ವರ ವಾದಿಗಳು. ಅಲ್ಲಾ ಎಂದರೆ ಪರಿಪೂರ್ಣವಾದ ಸ್ವಯಂಭು. ಇದರರ್ಥ ಒಬ್ಬನಲ್ಲದೆ ಮತ್ತೊಬ್ಬನಿಲ್ಲ ಎಂಬುದು ಇಸ್ಲಾಂ ಧರ್ಮದ ಮೂಲಸೂತ್ರ.

ಮೊಹಮ್ಮದೀಯ ಧರ್ಮ ಅಥವಾ ಇಸ್ಲಾಂ ಧರ್ಮ (ಮುಸಲ್ಮಾನ ಧರ್ಮ)ವು ಇಂದಿನ ಜಗತ್ತಿನ ಅತಿ ಪ್ರಮುಖ ಧಾರ್ಮಿಕ ನಂಬಿಕೆಯ ವ್ಯವಸ್ಥೆಗಳಲ್ಲಿ ಒಂದು. ಕ್ರೈಸ್ತ ಧರ್ಮವು ಹುಟ್ಟಿದ ಆರು ಶತಮಾನಗಳ ನಂತರದ ಈ ಧರ್ಮವು ತನ್ನ ಕೆಲವು ವಿಶೇಷ ಅಂಶಗಳಿಂದಾಗಿ ಜಗತ್ತಿನ ವಿವಿಧೆಡೆ ಹರಡಿತು. ಯಹೂದ್ಯ ಧರ್ಮದ 'ಏಕೇಶ್ವರ'ವಾದದಿಂದಲೇ ಸ್ಫೂರ್ತಿ ಪಡೆದ ಕ್ರೈಸ್ತಧರ್ಮವು ಕ್ರಮೇಣ ಯಹೂದ್ಯರ 'ಮೂರ್ತಿಪೂಜೆ'ಯ ನಿರಾಕರಣೆಯನ್ನು ಸರಿಯಾಗಿ ಪಾಲಿಸಲಿಲ್ಲ. ಏಳನೆಯ ಶತಮಾನದಲ್ಲಿ ಹುಟ್ಟಿದ 'ಇಸ್ಲಾಂ' ಧರ್ಮವು 'ಏಕೇಶ್ವರ'ವಾದದ ಅತ್ಯಂತ ನಿಷ್ಠಾಪೂರ್ಣ ಪಾಲನೆಗೆ ಬದ್ಧವಾಗಿತ್ತು. ದೇವರು (ಅಲ್ಲಾ) ತನ್ನನ್ನು ಪೈಗಂಬರನ (ದೇವದೂತ) ಮೂಲಕ ಹೊರ ಜಗತ್ತಿಗೆ ಪರಿಚಯಿಸಿದ್ದಾನೆ. 'ಇಸ್ಲಾಂ' ಶಬ್ದವು ದೇವರಿಗೆ ಪೂರ್ಣ ಶರಣಾಗುವುದರಿಂದ ಸಿಗುವ ಶಾಂತಿ ಎಂಬ ಅರ್ಥವನ್ನು ಕೊಡುತ್ತದೆ ಎಂದು ಮಹಮ್ಮದೀಯರು ವಿವರಿಸುತ್ತಾರೆ. 'ಮುಸಲ್ಮಾನ್' ಜನಾಂಗದವರು ತಮ್ಮ ಧರ್ಮವು ದೇವ ಸೃಷ್ಟಿಯ ಜೊತೆಗೇ ಆಗಿದೆಯೆಂದು ನಂಬಿದ್ದಾರೆ. (ಕನ್ನಡ ವಿಶ್ವಕೋಶ –೪ , ಜ್ಞಾನ ಗಂಗೋತ್ರಿ)

'ಆಕಾಶಕ್ಕೆ ನೀಲಿ ಪರದೆ' ಕಥಾಸಂಕಲನದ 'ಅಖಿರತ್' (ಪುನರುತ್ಥಾನದ ದಿನ) ಕಥೆಯಲ್ಲಿ ಬರುವಂಥಹ ಸಂಜೀವ ಮತ್ತವನ ಹೆಂಡತಿ ಗಿರಿಜ; ಸಂಜೀವನ ಹಿತ್ತಲಲ್ಲಿ ಬಾಡಿಗೆ ಮನೆಯಲ್ಲಿದ್ದ ಕಲ್ಲು ಹೊಳೆಯ ಅತ್ತರ್ ವ್ಯಾಪಾರಿ ಅದ್ದು ಮತ್ತವನ ಪತ್ನಿ ಸಲ್ಮಾ ಹಾಗೂ ಗುಡ್ಡಶಾಲೆಯ ರಸ್ತೆಯಲ್ಲಿ ಜೀನಸು ಭಂಡಸಾಲೆ ನಡೆಸುತ್ತಿದ್ದ ಸೀದಿ ಸಾಹುಕಾರರು ಈ ಐದು ಮನುಷ್ಯರ ಚಿತ್ರಣದ

ಮೂಲಕ ಪಾಪ–ಪುಣ್ಯ, ಸರಿ–ತಪ್ಪು, ದೇವರು, ಧಾರ್ಮಿಕ ನಿಯಮಗಳು, ನಂಬಿಕೆ, ಮನುಷ್ಯನ ಸಮಸ್ಯೆಗಳಿಗೆ ಪರಿಹಾರ ಕೊಡಲಾಗದ ಧಾರ್ಮಿಕ ಅಂಶಗಳು ಮುಂತಾದವುಗಳನ್ನು ಕಥೆಯಲ್ಲಿ ಕಾಣಬಹುದು. ಧರ್ಮವನ್ನು ಸಾರಾಸಗಟಾಗಿ ತಿರಸ್ಕರಿಸದೆಯೇ ಧಾರ್ಮಿಕ ನೆಲೆಯಲ್ಲಿದ್ದುಕೊಂಡೇ ಧಾರ್ಮಿಕ ಮೂಲಭೂತವಾದವನ್ನು ತಿರಸ್ಕರಿಸುವ ಅಂಶವನ್ನು ಕಾಣಬಹುದು.

ಮೊದಲಿಗೆ ಮನುಷ್ಯರ, ಮಲಾಯಿಕರುಗಳ ಗುಂಪುಗಳ ಮೂಲಕ ಕಥೆಯು ಬೆಳೆಯುತ್ತದೆ. ಎಳೆಯ ಮಕ್ಕಳು, ಬೆಳೆದ ಬಾಲಕರು, ಕನ್ಯೆಯರು, ಮದುವಣಿಗರು, ವಿಧವೆಯರು, ವಯಸ್ಸಾದವರು ಅವರವರ ವಯಸ್ಸಿಗೆ ಅನುಗುಣವಾಗಿ ಪಾಪ–ಪುಣ್ಯಗಳ ಕಡತಗಳ ಹೊರೆ ಹೆಚ್ಚು–ಕಡಿಮೆಯಾಗಿದೆ. ಹಾಗೆಯೇ ಸ್ವರ್ಗ–ನರಕಗಳ ಕಲ್ಪನೆಯನ್ನು ಕೊಡುತ್ತಾ ಭೂಮಿಯ ಮೇಲೆ ತಪ್ಪು ಮಾಡುವವರ ಸಂಖ್ಯೆ ಹೆಚ್ಚಿರುವುದನ್ನು ತಿಳಿಸುತ್ತಿದ್ದಾರೆ. ಪಾಪಿಗಳನ್ನೆಲ್ಲ ನರಕಕ್ಕೆ ತಳ್ಳಿದ ಮೇಲೆ ಪ್ರಶ್ನಿಸಲಾಗುತ್ತದೆ– 'ತುಂಬಿದೆಯಾ ನೀನು?" ಆಗ ನರಕ ಗಹಗಹಿಸಿ ನಗುತ್ತಾ ಹೇಳುತ್ತದೆ. "ಇನ್ನೂ ಇದೆಯಾ?" (ಪು.೧೧)

ಸ್ವರ್ಗ–ನರಕ ಹಾಗೂ ಪಾಪ–ಪುಣ್ಯಗಳ ಮೂಲಕ ಮನುಷ್ಯ ಪರಿಹಾರ ಕಂಡುಕೊಳ್ಳುವಲ್ಲಿ ಸೋಲುವುದನ್ನು ತಿಳಿಸಿದ್ದಾರೆ. ಸಂಜೀವ ಮುತ್ತುಪ್ಪಾಡಿ ಗುಡ್ಡ ಶಾಲೆಯ ಜವಾನನಾಗಿ ಕೆಲಸ ಮಾಡುತ್ತಿದ್ದ. ಅವರ ಹಿತ್ತಲಲ್ಲಿಯ ಮನೆಗೆ ಬಾಡಿಗೆಗೆ ಬಂದಂತಹ ಅದ್ದು ತನ್ನ ಹೆಂಡತಿ ಸಲ್ಮಾಳನ್ನು ಹಾಗೂ ಒಂದು ವರ್ಷ ಪ್ರಾಯದ ಗಂಡು ಮಗುವನ್ನು ಕರೆದುಕೊಂಡು ತನ್ನ ಸಂಸಾರವನ್ನು ನಡೆಸುತ್ತಿರುತ್ತಾನೆ.

ಸಂಜೀವನ ಕಣ್ಣಿಗೆ ಬಿದ್ದವನಲ್ಲ. ಆಗೊಮ್ಮೆ, ಈಗೊಮ್ಮೆ ಬರುತ್ತಿದ್ದವನು. ನಂತರ ಇದ್ದಕ್ಕಿದ್ದ ಹಾಗೆ ಹೋಗುತ್ತಿದ್ದನು. ಹಾಗೆಯೇ ಸಂಜೀವನ ಬಗ್ಗೆಯೂ ಹೇಳುವುದಾದರೆ ಮೊದಲಿಗೆ ನಡವಳಿಕೆ ಸಂಜೀವನ ಸರಿಯಿಲ್ಲದೆ ಮದುವೆಯ ನಂತರ ಒಳ್ಳೆಯತನ ಕಾಣಬಹುದು. ಇವೆರಡು ಸಂಸಾರಗಳ ನಡುವೆ ಸೀದಿ ದುಷ್ಟನಿಗೆ ಧರ್ಮ ಮುಖಾಂತರವಲ್ಲದೇ ಮಾನವೀಯ ಮೌಲ್ಯಗಳ ಮೂಲಕ ಮಾಡಿದ ತಪ್ಪಿಗೆ ಶಿಕ್ಷೆ ಒದಗುವುದನ್ನು ಕಾಣಬಹುದು. ಪ್ರೀತಿ, ವಿಶ್ವಾಸದಿಂದ ಜೀವನದಲ್ಲಿ ಬದಲಾವಣೆ ಸಾಧ್ಯ ಎಂಬುದನ್ನು ಸಹಾ ಕತೆಯ ಮೂಲಕ ತಿಳಿಯಬಹುದು.

ಹೆಂಡತಿಯನ್ನು ತೊರೆದು ಹೋದ ಅದ್ದುವಿನ ವಿಷಯವನ್ನು ತಿಳಿದ ಸಂಜೀವ ಮತ್ತು ಗಿರಿಜಾ ಅದನ್ನು ಸೀದಿ ಸಾಹುಕಾರರಿಗೆ ತಿಳಿಸಿದಾಗ ನಿರ್ಲಕ್ಷ್ಯ ತೋರುತ್ತಾನೆ. ಅದ್ದುವಿನ ಎರಡು ಮಕ್ಕಳು ಮತ್ತು ಹೆಂಡತಿ ಕಂಗಾಲಾಗುತ್ತಾರೆ. ವ್ಯಕ್ತಿಯ ಬದಲಾದ ವರ್ತನೆಯ ಕಡೆಗೆ ಗಮನಹರಿಸದೆ ಮತ್ತೆ

ಮತ್ತೆ ಅದೇ ವಿಷಯವನ್ನು ಹಿಡಿದು ಹೀಯಾಳಿಸುತ್ತ ಸೀದಿ ಸಾಹುಕಾರ ಸಾಮಾಜಿಕ ಸಮಸ್ಯೆಯೊಂದನ್ನು ಎತ್ತಿಕೊಂಡು ಸಂಜೀವನನ್ನು ಕಡೆಗಣಿಸುತ್ತಾನೆ.

ಕಲ್ಲುಹೊಳೆಯಲ್ಲಿದ್ದ ಅದ್ದುವನ್ನು ಹುಡುಕಿ ಹೋದ ಸಂಜೀವ ಅವನಿಗೆ ಸರಿಯಾಗಿ ಬುದ್ಧಿ ಕಲಿಸಿ ಸಲ್ಮಾಳನ್ನು ತ್ಯಜಿಸಿದ ಕಾರಣವನ್ನು ಕೇಳಿದಾಗ ಸಿಗುವ ಉತ್ತರ ಆಶ್ಚರ್ಯಕರವಾದ ರೀತಿಯಲ್ಲಿದೆ. ಮಸೀದಿಯ ಮೌಲ್ವಿಯವರು ನಡೆದ ಸಂಗತಿಗಳನ್ನು ಪರಿಶೀಲಿಸಿ ಕೊಡುವ ತೀರ್ಮಾನವನ್ನು ಕೇಳಿದಾಗ ಧರ್ಮದಲ್ಲಿದ್ದು ತಿರಸ್ಕರಿಸಲು ಸಾಧ್ಯವಾಗದೇ, ಅದನ್ನು ಒಪ್ಪಿಕೊಳ್ಳಲೂ ಸಾಧ್ಯವಾಗದೇ ಇರುವ ಸ್ಥಿತಿಯಲ್ಲಿ ಬದುಕಬೇಕಾದ ಅನಿವಾರ್ಯತೆ ಉಂಟಾದ ಮನಸ್ಥಿತಿಯನ್ನು ತಿಳಿಸಿದ್ದಾರೆ.

ಧರ್ಮ ಗ್ರಂಥದಲ್ಲಿ ಹೇಳಿರುವಂತೆ 'ತಲಾಕ್' ಕೊಟ್ಟ ಬಳಿಕ ಜೊತೆಗೂಡುವುದು ಧರ್ಮ ನಿಷಿದ್ಧ. ಗಂಡನಾದವನು ಹೆಂಡತಿಗೆ ತಲಾಖ್ ನೀಡಿದರೆ ಆಮೇಲೆ ಅವಳು ಮತ್ತೊಬ್ಬ ಪತಿಯನ್ನು ವರಿಸಿ, ಆ ಬಳಿಕ ಎರಡನೆಯ ಪತಿಯಿಂದ ತಲಾಕ್ ಪಡೆಯುವವರಿಗೆ ಮೊದಲನೆ ಪತಿಯನ್ನು ವಿವಾಹವಾಗಬಾರದು. ಧಾರ್ಮಿಕ ವ್ಯವಸ್ಥೆಯಲ್ಲಿಯೇ ಈ ಸಮಸ್ಯೆಗಳಿವೆ. ಧರ್ಮವು ಒಂದು ಸಮಸ್ಯೆಗೆ ಪರಿಹಾರವನ್ನು ನೀಡುವ ಬದಲು ಅದನ್ನು ಇನ್ನೂ ಜಟಿಲಗೊಳಿಸುವ ಅಂಶವಾಗಿದೆ ಎಂಬುದನ್ನು ತೋರಿದ್ದಾರೆ. ಮನುಷ್ಯ ತಾನು ಮಾಡುವ ತಪ್ಪುಗಳಿಗೆ ಧರ್ಮದ ಮೂಲಕ ಸಮರ್ಥನೆಯನ್ನು ನೀಡುತ್ತಾನೆ. "ದೇವರಲ್ಲಿ ನಂಬಿಕೆ ಇಡುವ ಯಾವನೇ ಗಂಡಸು ಮಕ್ಕಳಾಗದಂತೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಪತ್ನಿಗೆ ತಲಾಖ್ ಕೊಡದಿರಲಾರ ಎಂದು ಹೇಳಿ ಹಟ ಹಿಡಿದಿದ್ದನು. ಕುಟುಂಬ ಯೋಜನೆಯೆಂದು ಭೂಮಿಯ ಜನರು ಕರೆಯುವ ಈ ಶಸ್ತ್ರಚಿಕಿತ್ಸೆಯು ಧರ್ಮಬಾಹಿರವೆಂದು ಅದ್ದು ಪ್ರಾಮಾಣಿಕವಾಗಿ ನಂಬಿದ್ದನು." (ಪು.೧೯) ಧಾರ್ಮಿಕನಾದ ಅದ್ದು ಕೊಡುವ ಉತ್ತರ ಸಕಾರಣವಾಗಿ ಕಂಡುಬರುತ್ತದೆ. ಅವನು ಧರ್ಮವನ್ನು ಧಿಕ್ಕರಿಸಿ ನಡೆಯದೇ ಅದಕ್ಕನುಗುಣವಾಗಿ ನಡೆಯುತ್ತಾನೆ.

ಪ್ರತಿಯೊಂದು ಧರ್ಮವು ಭ್ರೂಣ ಹತ್ಯೆಯನ್ನು ಕುರಿತು ಹೇಳುತ್ತಾ ಅದು ತಪ್ಪು ಎಂದು ತಿಳಿಸುತ್ತದೆಯೇ ಹೊರತು ಮಕ್ಕಳಾಗದಂತೆ ಮಾಡಿಕೊಳ್ಳುವ ಶಸ್ತ್ರಚಿಕಿತ್ಸೆ ಕಾನೂನುಬಾಹಿರವೆಂದು ಧರ್ಮ ತಿಳಿಸುವುದಿಲ್ಲ. ಮನುಷ್ಯ ಧರ್ಮವನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಮುಖ್ಯ. ಧರ್ಮ, ದೇವರನ್ನು ನಂಬುವುದು ಅಥವಾ ನಂಬದೇ ಇರುವುದು ಅವರ ವೈಯುಕ್ತಿಕ ವಿಷಯ. ಆದರೆ ಕೆಲವು ಅಂಶಗಳನ್ನು ಮಾತ್ರ ಸಾರ್ವತ್ರಿಕವಾಗಿ ನೋಡಿದರೆ ಒಳ್ಳೆಯದು.

ಈ ಕತೆಯಲ್ಲಿ ಅದ್ದುವಿನ ಹೆಂಡತಿ ಮಕ್ಕಳಾಗದಂತೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡದ್ದು ಧರ್ಮಕ್ಕೆ ವಿರುದ್ಧವಾದದು ಎಂದು ಅದ್ದು ಹೇಳುತ್ತಾನೆ. ದೇವರು ಧರ್ಮವನ್ನು ಅತಿಯಾಗಿ ನಂಬಿರುವ ಇವನು ಬದುಕಿನಲ್ಲಿ ಉತ್ಸಾಹವನ್ನೇ ಕಳೆದುಕೊಂಡವನಂತೆ ವರ್ತಿಸತೊಡಗುತ್ತಾನೆ. ತಾನು ಧರ್ಮ ವಿರೋಧವಾದದ್ದೇನನ್ನೋ ಮಾಡಿದ್ದೇನೆ ಎಂಬ ಪಾಪಪ್ರಜ್ಞೆ ಅವನನ್ನು ಚಿತ್ರ ಹಿಂಸೆಗೆ ಈಡು ಮಾಡುತ್ತದೆ. ಹೀಗಾಗಿ 'ಅದ್ದು' ತನ್ನ ಹೆಂಡತಿಗೆ ತಲಾಕ್ ನೀಡಲು, ಅವನು ನಿಜವಾಗಿ ನಂಬಿದ ಧಾರ್ಮಿಕ ನಿಯಮಗಳೇ ಕಾರಣವಾಗುತ್ತವೆ. ಧರ್ಮದ ನೆಲೆಯಲ್ಲಿ ತಾನು ಮಾಡಿದ್ದು ಸರಿ ಎಂದು ತಿಳಿದಿದ್ದ ಅದ್ದು ಅನಂತರ ಮಾನವೀಯ ನೆಲೆಗಟ್ಟಿನಲ್ಲಿ ಯೋಚಿಸಿ ಮನುಷ್ಯನಿಗೆ ಧರ್ಮಕ್ಕಿಂತ ಮಾನವೀಯತೆಯೇ ಮುಖ್ಯ ಎಂಬುದನ್ನು ಮನಗಾಣುತ್ತಾನೆ.

ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಇತರರ ಪ್ರಭಾವ ಹೆಚ್ಚಾಗಿರುತ್ತದೆ. ಅದ್ದು ವಿಷಯದಲ್ಲಿಯೂ ಆಗಿದ್ದು ಇದೇ. ಸೀದಿ ಸಾಹುಕಾರ ಧರ್ಮವನ್ನು ಒಪ್ಪಿಕೊಳ್ಳುತ್ತಾನೆ. ಸೀದಿ ಮಾತುಗಳಲ್ಲಿ ಅದನ್ನು ವಿವರಿಸುವುದಾದರೆ, ಧರ್ಮದ್ರೋಹ ಮಾಡಿದವನನ್ನು ಮಸೀದಿಯೊಳಗೆ ಬರಲು ಅನುಮತಿಸಿದರೆ ಮಸೀದಿಯೇ ಅಪವಿತ್ರವಾಗುತ್ತದೆ. ಹೀಗೆ ವಾದ ಮಾಡುತ್ತಾ ಅವನು ಅಲ್ಲಿ ಸೇರಿದ್ದ ಎಲ್ಲರ ಸಮ್ಮುಖದಲ್ಲೇ ಅದ್ದುವಿನ ಅಂಗಿಯನ್ನು ಜಗ್ಗುತ್ತ ಮಸೀದಿಯಿಂದ ಹೊರಗೆ ತಳ್ಳಿಬಿಟ್ಟಿದ್ದನು. ಸೀದಿ ಸಾಹುಕಾರನ ಮಾತುಗಳೆಲ್ಲವೂ ಧರ್ಮಗ್ರಂಥದ ಆದೇಶಗಳಿಗೆ ಬದ್ಧವಾಗಿಯೇ ಇದ್ದುದರಿಂದ ಸಾಹುಕಾರನ ನಿಲುವುಗಳನ್ನು ಯಾರೂ ವಿರೋಧಿಸಲಿಲ್ಲ. ಆದರೆ ಕೊನೆಗೆ ಸೀದಿ ಸಾಹುಕಾರನಿಗೆ ದೊರೆತದ್ದು ನರಕದ ಶಿಕ್ಷೆ. ಹೀಗೆ ಧರ್ಮದ ಒಪ್ಪು ತಪ್ಪುಗಳಲ್ಲಿ ಮಾನವೀಯ ಮೌಲ್ಯಗಳಿಗೆ ಬೆಲೆ ಬೇಕು ಎಂಬುದನ್ನು ಇಲ್ಲಿ ತಿಳಿಸಿದ್ದಾರೆ.

ಮಲಾಯಿಕರು ಹೇಳುವಂತಹ ಕೆಲವು ಸಾಲುಗಳು ಹೀಗಿವೆ. "ಮುಖ್ಯವಾಗಿ ತಮ್ಮ ಪತ್ನಿಯನ್ನು ತ್ಯಜಿಸಿದನೆಂದು ಶಪಥ ಮಾಡುವವರಿಗೆ ನಾಲ್ಕು ತಿಂಗಳ ಅವಧಿಯುಂಟು. ತಲಾಕ್ ಧರ್ಮಬದ್ಧವಾಗಬೇಕು. ಪ್ರತಿಯೊಂದು ತಲಾಕ್ ಘೋಷಣೆಯ ನಡುವೆಯೂ ಸ್ತ್ರೀಯ ಆರ್ತವ ಕಾಲವಾಗಿರುವ ಮೂವತ್ತು ದಿನಗಳ ಅಂತರವಿರಬೇಕು. ಆ ಅವಧಿಯೊಳಗೆ ಅವರು ಮರಳಿದರೆ ಪ್ರಭು ಕ್ಷಮಿಸುವನು. ತಲಾಕ್ ಪಡೆದ ಸ್ತ್ರೀ ಮೂರು ಆರ್ತವ ಕಾಲದವರೆಗೂ ತಡೆದುಕೊಳ್ಳಬೇಕು. ಈ ಕಾಲಾವಧಿಯಲ್ಲಿ ಅವರ ಪತಿ ಸಂಬಂಧವನ್ನು ಸುಗಮಗೊಳಿಸಲು ಬಯಸಿದರೆ, ಪತಿಯನ್ನು ಸ್ವೀಕರಿಸಲು ಹಕ್ಕುಳ್ಳವರಾಗುತ್ತಾರೆ."(ಪುಟ-೨೪)

ಮಾನವೀಯತೆಯನ್ನು ಎತ್ತಿ ತೋರುವಲ್ಲಿ ಬೊಳುವಾರುರವರು ಸಾಂಸ್ಥಿಕ ಧರ್ಮವನ್ನು ಘಾಸಿಗೊಳಿಸದೆಯೇ ವ್ಯಕ್ತಿಗಳ ಸಮಸ್ಯೆಗಳಿಗೆ ಅದೇ ನೆಲೆಯಲ್ಲಿ ಬೇರೆ ಸಾಧ್ಯತೆಗಳನ್ನು ಕಾಣಿಸುತ್ತಾರೆ. ದೇವದೂತರು ಎನಿಸಿಕೊಳ್ಳುವ ಮಲಾಯಿಕರು ತಪ್ಪು-ಸರಿ, ನ್ಯಾಯ-ಅನ್ಯಾಯ ಪರೀಕ್ಷಿಸಿ, ವಿವೇಚಿಸಿ ಸರಿಯಾದ ಮಾರ್ಗವನ್ನು ಸೂಚಿಸದೇ ಸಂಜೀವ-ಗಿರಿಜರನ್ನು ಪುನಃ ಪರೀಕ್ಷೆಗೆ ಒಳಪಡಿಸಿದ ಅವರು ತಾವು ಮಾಡಿದ್ದು ಸರಿ ಎಂಬ ತೀರ್ಮಾನಕ್ಕೆ ಬರುತ್ತಾರೆ. ಮನುಷ್ಯನು ಧರ್ಮ-ಅಧರ್ಮವನ್ನು ತಿಳಿಯಬೇಕು. ಹೀಗಾಗಿ ಮೌಲ್ವಿಗಳಾಗಲೀ, ಮಸೀದಿಗಳಾಗಲೀ ಅದ್ದುವಿನ ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ಸೂಚಿಸುವುದಿಲ್ಲ. ಕೊನೆಗೆ ಪರಿಹಾರವನ್ನು ನೀಡಿದವರು ಸಂಜೀವ ಮತ್ತು ಗಿರಿಜಾ.

ಬೊಳುವಾರುರವರ ಈ ಕಥೆ ತಿಳಿಸುವಂತೆ 'ಮನುಷ್ಯನಿಗೆ ವಿಚಾರ ಶಕ್ತಿಯನ್ನು ದಯಪಾಲಿಸಿದವನೇ, ನಿನ್ನ ದಿವ್ಯ ವಾಣಿಯನ್ನು ವಿವೇಕಪೂರ್ಣವಾಗಿ ಅರ್ಥೈಸುವ, ಲೋಕ ಕಲ್ಯಾಣಕ್ಕಾಗಿ ಧರ್ಮಗ್ರಂಥವನ್ನು ಬಳಸುವಾತನಿಗೆ ನಿನ್ನ ಸ್ವರ್ಗ ಮೀಸಲಿರಲಿ'. (ಅಖಿರತ್ ಪುಟ-೨೪) ವಿಚಾರವಂತನಾದ ಮನುಷ್ಯ ವಿವೇಕವುಳ್ಳವನಾಗಿ ಧರ್ಮಗ್ರಂಥವನ್ನು ಬಳಸುವ ಸೂತ್ರವನ್ನು ಹೇಳಿದ್ದಾರೆ. ಇಲ್ಲಿ ಧರ್ಮವನ್ನು ತಳ್ಳಿ ಹಾಕದೆ ಧಾರ್ಮಿಕ ನೆಲೆಗಟ್ಟಿನಲ್ಲಿದ್ದುಕೊಂಡು ಮಾನವೀಯ ದೃಷ್ಟಿಯ ಪರಿಹಾರವನ್ನು ಕಂಡುಕೊಳ್ಳುವುದು ವಿಶೇಷವಾದ ಪರಿಯಾಗಿದೆ.

'ಜನ್ನತ್' ಎಂದರೆ ಸ್ವರ್ಗ. ಬೊಳುವಾರು ಅವರು ಭೂಮಿಯ ಮೇಲೆ ಸೃಷ್ಟಿಸಿರುವ ಸ್ವರ್ಗದ ಚಿತ್ರಣ ನೀಡಿದ್ದಾರೆ. ಸುಲೇಮಾನ್ ಹಾಜಿ, ಮೂಸಾ ಮುಸ್ಲಿಯಾರರನ್ನು ಪ್ರಧಾನವಾಗಿ ಕಾಣಬಹುದು. ಸುಲೇಮಾನ್ ಹಾಜಿಯವರನ್ನು ಇಂದಿನ ಅಧ್ಯಕ್ಷರೊಂದಿಗೆ ಹೋಲಿಕೆ ಮಾಡುವ ಪ್ರಯತ್ನ ಮಾಡಿದ್ದಾರೆ. ಇಲ್ಲಿ ಬರುವ ಆದ್ರಾಮನ ವೈಶಿಷ್ಟ್ಯವನ್ನು ಕಾಣಬಹುದು.

ಸುಲೇಮಾನ್ ಹಾಜಿಯವರ ಜನ್ನತ್ ಮಹಲ್‌ನ ಚಿತ್ರಣ ಕೊಡುತ್ತಾರೆ. ಇದು ಅವರ ಐಷಾರಾಮಿ ಜೀವನ ತೋರುತ್ತದೆ. ಮೂಸಾ ಮುಸ್ಲಿಯಾ ಅವರು ಬಹಳ ಹಿಂದಿನಿಂದಲೂ ಮಸೀದಿಯ ಆಶ್ರಯದಲ್ಲಿದ್ದರು. ಹಿಂದೆ ಅಧ್ಯಕ್ಷರಾಗಿದ್ದಂತಹ ಕೋಯಾರವರ ಗುಣಗಳನ್ನು ವರ್ಣಿಸುತ್ತಾ, ಅವರಿಗೂ ಇವರಿಗೂ ಇರುವ ವ್ಯತ್ಯಾಸ ತಿಳಿಸುವುದಕ್ಕಾಗಿ ಅನೇಕ ಉದಾಹರಣೆಗಳನ್ನು ಕೊಡುತ್ತಾರೆ. ಮೂಸಾ ಮುಸ್ಲಿಯಾರಿಗೆ ಆಶ್ರಯ ನೀಡಿದ್ದವರು ಇಮಾಂ ರಹಮಾನ್ ಕೋಯಾರವರು. ಇವರು ಧರ್ಮ ಸೂಕ್ಷ್ಮಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅವರ ಪದ್ಧತಿಯ ಪ್ರಕಾರ ಬೇರೆಯವರ ಮನೆಯಿಂದ ಊಟ ಬರುತ್ತಿದ್ದು, ಅದರಲ್ಲಿ ಮೂಸಾರವರಿಗೂ ಪಾಲು. ಹಾಗೆಯೇ ಕೋಯಾರವರಿಗೆ ಇದ್ದಂತಹ ಗೌರವ, ಮರ್ಯಾದೆಗಳ ಬಗ್ಗೆಯೂ ಮುಸ್ಲಿಯಾರವರು

ತಿಳಿಸುತ್ತಾರೆ. ಜನ್ನತ್‌ಮಹಲ್‌ಗೆ ಆಗ ಕೆಂಪು ಕೋಟೆ ಇರಲಿಲ್ಲ. ಆಗ ಜಮಾತ್ ಅಧ್ಯಕ್ಷರಾಗಿದ್ದ ಅಬ್ದುಲ್ ಸಾಹುಕಾರರ ಬಗ್ಗೆ ತಿಳಿಸುತ್ತಾರೆ. ಮೂಸಾರವರು ಅವರ ಗುಣ ವಿಶ್ಲೇಷಣೆ ಮಾಡುತ್ತಾರೆ. ಈ ಮೇಲಿನ ವಿವರಣೆಗಳು ಅಂದಿನ ಹಾಗೂ ಇಂದಿನ ಮನುಷ್ಯರಲ್ಲಿ ಆದ ಬದಲಾವಣೆಯನ್ನು ಗುರುತಿಸುತ್ತದೆ.

ಮೂಸಾರವರು ಹಾಜಿಯವರನ್ನು ನೋಡಲು ಜನ್ನತ ಮಹಲ್‌ಗೆ ಬರುತ್ತಾರೆ. ಆಗ ಜನ್ನತ್ ಮಹಲ್ ಬಣ್ಣ ತೊಟ್ಟ ಗೋರಿಯಂತೆ ಕಾಣುತ್ತಿತ್ತು. ಇಲ್ಲಿ ಮನುಷ್ಯನಿಗೆ ಊಟವಿಲ್ಲ, ನಾಯಿಗಳಿಗೆ ಊಟ ಹಾಕುತ್ತಾ, ಅವುಗಳೊಂದಿಗೆ ಆಡುತ್ತಾ ಸಂತೋಷ ಪಡುತ್ತಿರುವ ಹಾಜಿಯವರನ್ನು ಅವರು ಕಾಣುತ್ತಾರೆ. ಆಗ ಹಾಜಿರವರು ಮೂಸಾರವರಿಗೆ ಊಟ ಮಾಡಿ ಹೋಗಿ ಎಂದು ಹೇಳಿ ಒಳಗೆ ಹೋಗುತ್ತಾರೆ. ಮೂಸಾರವರನ್ನು ಕಂಡೊಡನೆ ಮಾತನಾಡುವಷ್ಟು ಸಮಯವು ಇಲ್ಲದೆ ಅವರ ಮೇಲೆ ಗೌರವವು ಇಲ್ಲದೇ ಹಾಜಿಯವರು ಯಾವಾಗಲೂ ವ್ಯವಹಾರದಲ್ಲಿ ತಲ್ಲೀನರಾಗಿರುತ್ತಾರೆ. ಬದಲಾದ ಪರಿಸ್ಥಿತಿಯಲ್ಲಿ ಕಾಮತ್‌ರವರ ಸ್ನೇಹ ಹಾಜಿಯವರಿಗೆ ಬೇಕಾಗಿದೆ. ಆದರೆ ಅವರಿಗೆ ಬಡವರನ್ನು ಕಂಡು ಅವರ ಯೋಗಕ್ಷೇಮ ಕೇಳುವಷ್ಟು ಸೌಜನ್ಯ ಇಲ್ಲವಾಗಿದೆ. ಈ ಅಂಶಗಳು ಮನುಷ್ಯನಿಗೆ ಅಧಿಕಾರದೊಂದಿಗೆ ಹಣ ದೊರೆತಾಗ ಹೇಗೆ ಪರಿಸ್ಥಿತಿಯನ್ನು ತನ್ನ ಅವಶ್ಯಕತೆಗೆ ತಕ್ಕಂತೆ ಸರಿಹೊಂದಿಸಿಕೊಳ್ಳುತ್ತಾನೆ ಎಂಬುದನ್ನು ತಿಳಿಸುತ್ತದೆ. ಅಲ್ಲಿ ಮನುಷ್ಯ ಮುಖ್ಯವಾಗುವುದಿಲ್ಲ. ಹಣ, ಅಂತಸ್ತು, ಮನುಷ್ಯರು ಬೇಕೆನಿಸಿದರೂ ಅವರಿಗೆ ಬೇಕಾದ ಮನುಷ್ಯರು ಮಾತ್ರ ಮುಖ್ಯರಾಗುತ್ತಾರೆ.

ಮಗನನ್ನು ದುಬಾಯಿಗೆ ಕಳುಹಿಸಿದ ಅದ್ರಾಮ ಹೊಸ ಮಸೀದಿ ಕಟ್ಟಲು ಸಾವಿರ ರೂಪಾಯಿ ಕೊಡುತ್ತಾನೆ. ಅವನ ಉತ್ಸಾಹವನ್ನು ಅವರಿಗೆ ಅವಮಾನವೆಂದು ತಿಳಿದ ಹಾಜಿಯವರು ಐದು ಸಾವಿರದ ಐದು ಕೊಡುತ್ತೇನೆ ಎನ್ನುತ್ತಾರೆ. ಮುಂದೆ ಮುಸ್ಲಿಮರಿಗೆ ಒದಗಬಹುದಾದ ಪರಿಸ್ಥಿತಿ ಹೇಳುತ್ತಾನೆ. ಈಗಾಗಲೇ ಹಾಜಿಯವರು ಅವರ ಹೊಟ್ಟೆಗೆ ಕಲ್ಲು ಹೊಡೆದಿರುತ್ತಾರೆ. ಅದಕ್ಕಾಗಿ ಮುಸ್ಲಿಯಾರರು ಹಾಜಿಯವರನ್ನು ಕಾಣಹೋದಾಗ ಮಾತನಾಡಲು ತಯಾರಿರಲಿಲ್ಲ.

ಹಿಂದೆ ಅಬ್ದುಲ್ ಸಾಹುಕಾರರಿಂದ ಇಮಾಂ ಆಗಿ ನೇಮಕಗೊಂಡಿದ್ದ ಮುಸ್ಲಿಯಾರರು ಈಗ ಅದೇ ಸ್ಥಾನದಲ್ಲಿ ಮುಂದವರಿಯಲೂ ಸಾಧ್ಯವಾಗುವುದಿಲ್ಲ. ಕಾರಣವೇನೆಂದರೆ ಹಾಜಿಯವರ ಅಕ್ಕನ ಮಗ ಜಲೀಲ್. ಆತನು ಅದ್ರಾಮ ಹೇಳುವಂತೆ ದಜ್ಜಲ ಕತೆಯ ರಾಕ್ಷಸನಂತೆ ಕಂಡನು. ಈ ಜಲೀಲ್‌ನಿಂದ ಅವಮಾನಿತರಾದ ಮೂಸಾರವರಿಗೆ ಹಾಗೆ ಕಂಡದ್ದು ಸಹಜವೇ.

ಭೂಮಿಯ ಮೇಲಿನ ಸ್ವರ್ಗದಲ್ಲಿ ಮನುಷ್ಯರು ಹಾಗೂ ಅಲ್ಲಿ ರಾಕ್ಷಸ ಬಗ್ಗೆ ಚಿತ್ರಣ ಕಾಣಬಹುದು. ಮೂಸಾಲಿಯರರು ಕಂಡ ಸ್ವರ್ಗ ಇದೇ ಆಗಿದೆ. ನುಸುಳುತ್ತಿದ್ದವರು ಹೊರಬರುವುದಕ್ಕೆ ಪ್ರಾರಂಭಿಸುತ್ತಾರೆ.

"ಐಹಿಕ ಜೀವನದ ಉಪಮೆ ಇಷ್ಟು ; ಆಕಾಶದಿಂದ ನಾವು ನೀರನ್ನು ಸುರಿಸಿದೆವು. ಮನುಷ್ಯರೂ, ಜಾನುವಾರುಗಳೂ ತಿನ್ನುವ ಹಸಿರು ರಾಶಿ ಭೂಮಿಯ ಮೇಲೆಲ್ಲಾ ಸಾಕಷ್ಟು ಬೆಳೆದವು. ಹಾಗೆ ಭೂಮಿ ತನ್ನ ಶ್ಯಾಮಲತೆಯಿಂದ ಅಲಂಕೃತವಾಗಿ ಶೋಭಿಸುತ್ತಿರುವಾಗ, ತಾವು ಅವುಗಳ ಮೇಲೆ ಅಧಿಕಾರವುಳ್ಳವರೆಂದು ಅವುಗಳ ಒಡೆಯರು ಮೋಹಿಸಲಾರಂಭಿಸಿದಾಗ; ರಾತ್ರಿ ಅಥವಾ ಹಗಲು ಹೊತ್ತಿನಲ್ಲಿ ನಮ್ಮ ಅಪ್ಪಣೆ ಹೊರಡುತ್ತದೆ ಮತ್ತು ನಾವು ಅದರೊಂದು ಹುಲ್ಲು ಕಡ್ಡಿಯನ್ನಾಗಿ ಮಾಡಿಬಿಟ್ಟೆವು; ನಿನ್ನೆ ಅಲ್ಲಿ ಏನು ಇದ್ದಿರಲಿಲ್ಲವೆಂಬಂತೆ..."(ಪು.೪೩) ಈ ಮೇಲಿನ ವಾಕ್ಯದ ಸಾಲುಗಳಿಂದ ವ್ಯಕ್ತವಾಗುವುದೆಂದರೆ ಭೂಮಿಯ ಸೃಷ್ಟಿಯಿಂದ ಮನುಷ್ಯ ಮತ್ತು ಜಾನುವಾರು ಆಶ್ರಯ ಪಡೆದುವು. ಈ ರೀತಿ ಆಶ್ರಯ ಪಡೆದ ಮನುಷ್ಯ ಎಲ್ಲದರ ಮೇಲೆ ತಾನೊಬ್ಬ ಅಧಿಕಾರಿಯಂತೆ, ಅವುಗಳ ಒಡೆಯನಂತೆ ಮೋಹಿಸತೊಡಗಿದ್ದಾಗ ಹಗಲು ಅಥವಾ ರಾತ್ರಿಯ ಹೊತ್ತಿನಲ್ಲಿ ಅಪ್ಪಣೆಯನ್ನು ಮಾಡುತ್ತಾನೆ. ಕೊನೆಗೆ ಅದನ್ನು ಹುಲ್ಲುಕಡ್ಡಿ ಮಾಡುತ್ತಾನೆ. ಭೂಮಿ ಮೇಲೆ ಮನುಷ್ಯ ಹುಟ್ಟಿದ ನಂತರ ಪ್ರಾಣಿಗಳನ್ನು ಕಡೆಗಣಿಸಿ ತನ್ನ ಲೋಕ ಅಥವಾ ಸಾಮ್ರಾಜ್ಯ ಸ್ಥಾಪಿಸುತ್ತಾನೆ. ಎಲ್ಲಾ ತನ್ನಿಚ್ಛೆಯಂತೆ ನಡೆಸುತ್ತಾ ಭೂಮಿಯನ್ನ ನಾಶ ಮಾಡುತ್ತಿದ್ದಾನೆಂದು ಹೇಳಬಹುದು.

ಮುಸ್ಲಿಯಾರರು ತಮ್ಮ ಪುತ್ರನಿಗೆ ಕೂಗಿ ಹೇಳಿದರು. "ನನ್ನ ಪ್ರಿಯ ಮಗನೆ ನಮ್ಮ ಜೊತೆಯಲ್ಲಿ ಆ ಹಡಗನ್ನು ಹತ್ತು. ಸತ್ಯ ನಿಷೇಧಗಳ ಜೊತೆ ನೀನಾಗದಿರು..."(ಪುಟ ೪೪) ಇಲ್ಲಿ ಮುಸ್ಲಿಯಾರರು, ಯಾರೋ ಮಗನಿಗೆ ಸತ್ಯ-ಸುಳ್ಳು ಸ್ವರ್ಗ-ನರಕ ಬಗ್ಗೆ ತಿಳಿಸುತ್ತಾ ಎಂದಿಗೂ ಸತ್ಯ ಬಿಡದಂತೆ ಇನ್ನೊಬ್ಬರಂತೆ ನೀನಾಗದಿರುವಂತೆ ಬುದ್ಧಿ ಹೇಳಿದರು. ನಿದ್ದೆಯಲ್ಲಿಯೇ, ವಿಶ್ವಾಸಿಗಳೇ ಅಧರ್ಮ ವಿರುದ್ಧ ನಿಮ್ಮ ರಕ್ಷಣೆಯ ಆಯುಧಗಳನ್ನು ಸಜ್ಜುಗೊಳಿಸಿರಿ ಎಂದು ಕೂಗಿ ಹೇಳುತ್ತಾರೆ. ಆಗ ಎಚ್ಚರಗೊಂಡ ಅವರು, ನಾಯಿ ತಮ್ಮನ್ನು ಕಂಡು ಬೊಗಳುತ್ತಿರುವುದನ್ನು ಗಮನಿಸಿ ಹೆಬ್ಬಾಗಿಲ ಬಳಿ ಗೋಡೆಗಾನಿಸಿ ನಿಲ್ಲಿಸಿದ ಬಡಿಗೆಯನ್ನು ತೆಗೆದುಕೊಂಡು ಅದರ ವಿರುದ್ಧ ಸಮರಕ್ಕೆ ಹೋಗುತ್ತಾರೆ. ಅದರ ಸದ್ದು ಅಡಗಿ ಹೋಗುತ್ತದೆ. ಯಾರೇ ವ್ಯಕ್ತಿಯಾಗಲಿ ಹೆದರುವಂತಹವರಾಗಿದ್ದರೆ, ಎಲ್ಲರೂ

ಅವರನ್ನು ಹೆದರಿಸುತ್ತಾರೆ. ಹಿಂತಿರುಗಿ ಬಿದ್ದರೆ ಬಾಲ ಮುದುರಿಕೊಳ್ಳುತ್ತಾರೆ. ಎಚ್ಚರಗೊಂಡ ಮನುಷ್ಯ ಹೇಗೆ ಆಯುಧವಿಲ್ಲದೆ ಶಕ್ತಿಯುತನಾಗುತ್ತಾನೆ. ಯಾರನ್ನಾದರೂ ಹೆದರಿಸಬಲ್ಲ ಸಾಮರ್ಥ್ಯ ಹೊಂದುತ್ತಾನೆ ಎಂಬುದು ವ್ಯಕ್ತವಾಗುತ್ತದೆ. ಕೊನೆಗೆ ಮುಸ್ಲಿಯಾರರ ಅಡಕೆ ಉಗುಳು ಆ ಜನ್ನತ್ ಮಹಲ್‌ನತ್ತ ಕೆಂಪು ಮೋಡದಂತೆ ಚಿಮ್ಮಿದವು. ಸ್ವರ್ಗದ ಕಮಾನುಗಳಿಗೆ ಆ ಹನಿಗಳನ್ನು ತಡೆಯುವ ಶಕ್ತಿ ಇರಲಿಲ್ಲ. ಅಧರ್ಮ ವಿರುದ್ಧ ಹೋರಾಡುವ ಮನುಷ್ಯನ ಆಕ್ರೋಶವನ್ನು ಇದರಲ್ಲಿ ವ್ಯಕ್ತವಾಗಿದೆ.

ಒಟ್ಟಾರೆ, ಮುಸ್ಲಿಯಾರರು ಎಲ್ಲ ತ್ಯಜಿಸಿದವರಂತೆ ಯಾವುದಕ್ಕೆ ಹೆದರದೆ ದಿಟ್ಟ ಹೆಜ್ಜೆಯೊಡನೆ ಆತ್ಮವಿಶ್ವಾಸದಿಂದ ಮುಂದುವರೆಯುತ್ತಾರೆ. ಕೊನೆಗೆ ಅವರು ಕಂಡದ್ದು ಜನ್ನತ್ ಮಹಲ್ ಆಗಿಯೇ ಹೊರತು ಸ್ವರ್ಗವಾಗಿ ಅಲ್ಲ. ಅದೇ ಕೆಂಪು ಬಟ್ಟೆ ಹೊದಿಸಿದ್ದ ಗೋರಿಯಂತೆ! ಧರ್ಮವನ್ನು ಬಲದಿಂದ ತನ್ನ ಕೈಯಲ್ಲಿ ಹಿಡಿದು ಮೆರೆಯುವುದರ ವಿರುದ್ಧ, ಅವರ ದಬ್ಬಾಳಿಕೆ ವಿರುದ್ಧ ಹಸಿದವರು ಯಾವುದನ್ನು ಪರಿಗಣಿಸದೇ ಹೇಗೆ ಆ ಧರ್ಮಕ್ಕೆ ವಿಮುಖರಾಗುತ್ತಾರೆ ಎಂಬುದನ್ನು ಕಾಣಬಹುದು.

"ಇದ್ದತ್ ಎಂದರೆ ಮದುವೆಯಾಗದ ಮಹಿಳೆಯು ವಿಧವೆಯಾದರೆ ನಲ್ವತ್ತು (ನಾಲ್ಕು ಹತ್ತು) ದಿನಗಳು ಮತ್ತು ಗರ್ಭಿಣಿಯಾದರೆ ಮಗುವಿನ ಜನನದವರೆಗಿನ ಅವಧಿಯಾಗಿದೆ. ಇದ್ದತ್ ಅವಧಿಯಲ್ಲಿ ಪುರುಷನು ತಾನು ತೆಗೆದುಕೊಂಡಂತಹ ತೀರ್ಮಾನ ಸರಿಯೋ, ತಪ್ಪೋ ಎಂದು ವಿವೇಚಿಸಿ ತಪ್ಪಿದ್ದರೆ ತಿದ್ದಿಕೊಳ್ಳಲು ಕೊಟ್ಟಿರುವ ಕಾಲಾವಕಾಶವಾಗಿದೆ." (ಭಾರತೀಯ ಸಮಾಜ ಅಧ್ಯಯನ– ಎಚ್ಚರೆಸ್ ಮತ್ತು ಎಚ್ಚಾರ್ಕೆ)

'ಇದ್ದತ್' ಒಂದು ಧಾರ್ಮಿಕ ಆಚರಣೆಯ ಕಥೆ. ಮೆಹರುನ್ನೀಸಾಳ ಭಾವ, ತುಮುಲಗಳನ್ನು ಸ್ಪಷ್ಟವಾಗಿ ಗುರುತಿಸಿಯೂ, ಅವಳು ಧರ್ಮ ಮೂಲದಿಂದಲೇ ಅವುಗಳ‌ನ್ನು ನಿಯಂತ್ರಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. 'ಇದ್ದತ್' ಮುಗಿಯುವ ಕಾಲ ಸಮೀಪಿಸಿದ ಮೆಹರುನ್ನೀಸಾ ತನ್ನ ಬಗ್ಗೆ ಮಾತ್ರವೇ ಅಲ್ಲದೆ ಸಮದ್ ಈಗ ಹೇಗಿರಬಹುದೆಂಬ ಬಗ್ಗೆಯೂ ಚಿಂತಿಸುತ್ತಾಳೆ. ಚಿಕ್ಕ ವಯಸ್ಸಿನಲ್ಲಿ ವಿಧವೆಯಾದ ಹೆಣ್ಣೊಬ್ಬಳು ಯೋಚಿಸುವ ಪರಿ ಇದಾಗಿದೆ. ಬಡತನದಿಂದ ಪಾರಾಗಲು ಬೇರಾವ ಆಯ್ಕೆಯೂ ಸಾಧ್ಯವಿಲ್ಲದ ಮೆಹರುನ್ನೀಸಾ ಕೊನೆಯಲ್ಲಿ ವಯಸಾದ ಅಪ್ಪನನ್ನು ಕಳೆದುಕೊಂಡು ಪುತ್ತಬ್ಬ ಸಾಹುಕಾರನ ಪ್ರೀತಿಯ ಮಡದಿಯಾದಳು. ಅವಳಿಗಿಂತ ಇಪ್ಪತ್ತೈದು ವರ್ಷ ದೊಡ್ಡವನಾದವನನ್ನು ಮದುವೆಯಾಗುತ್ತಾಳೆ. ಅವನು ಎರಡನೆಯ ಮಡದಿಯಾದ ಅವಳನ್ನು ಯಾವುದಕ್ಕೂ ಕೊರತೆ ಇಲ್ಲದಂತೆ ನೋಡಿಕೊಳ್ಳುತ್ತಾನೆ. ಈ ನೆನಪುಗಳ ನಡುವೆ ಸಮದ್‌ನನ್ನು

ಮತ್ತೆ ನೆನೆದು ತೌಬಾತೌಬಾ ಎನ್ನುವ ಮೆಹರುನ್ನೀಸಾಳ ವರ್ತನೆ ಅವಳಿಗೆ ಅವನ ಮೇಲಿದ್ದ ಭಾವನೆ ತಿಳಿಸುತ್ತದೆ.

ಪುತ್ತುಬ್ಬನು ಸಹ ಜೀವನದಲ್ಲಿ ಕಷ್ಟದಿಂದ ಮೇಲೆ ಬಂದವನು. ಆದರೆ ತನ್ನ ಐಶ್ವರ್ಯ ಸವಿಯಲು ಹೆಚ್ಚು ಕಾಲ ಬದುಕಲಿಲ್ಲ. ಪುತ್ತುಬ್ಬ ತಾನು ಬದುಕಿದ್ದಾಗ ಮೆಹರುನ್ನೀಸಾಳಿಗೆ ಹೇಳುವ ಈ ಮಾತು ಅವನು ಎಂತಹ ವ್ಯಕ್ತಿಯಾಗಿದ್ದನೆಂಬುದು ತಿಳಿಸುತ್ತದೆ. "ನಿನಗೆ ಬಹಳ ಅನ್ಯಾಯ ಮಾಡಿಬಿಟ್ಟೆ ನಾನು. ನಿನಗಿನ್ನು ಯಾರು ಗತಿ?"(ಪುಟ ೫೬) ಸಾಯುವ ಮುನ್ನ ಹೇಳಿದ ಮಾತು ಅವನಿಗೂ ಮನಸ್ಸಿನಲ್ಲಿ ನೋವಿತ್ತು ಎಂಬ ಸಂಗತಿಯನ್ನು ತಿಳಿಸುತ್ತದೆ. ಕೈಜಮ್ಮನ ಆರೈಕೆಯಿಂದ ಮತ್ತೆ ಜೀವ ಪಡೆದುಕೊಂಡಿದ್ದ ಅವಳು ಅವರು ಹೇಳಿದ್ದಂತೆ ನಡೆದುಕೊಳ್ಳುತ್ತಿದ್ದಳು. ಅವರ ಅನುಭವದ ಮಾತನ್ನು ಕೇಳುತ್ತಿದ್ದಳು. ಹಾಗೆಯೇ ಪುತ್ತುಬ್ಬ ಸತ್ತಾಗ ಹೇಳಿದ ಸಾಂತ್ವನದ ಮಾತು ನಿಜವಾಗಿ ಮರೆಯುವದಂತದ್ದಲ್ಲ. 'ನೀನು ಇಲ್ಲಿಂದ ಹೊರಗಡೆ ಬರಬೇಡ ಮೋಳೆ, ದುಃಖಿಸಿ ಮುಕ್ಕಾಸಿನ ಪ್ರಯೋಜನವಿಲ್ಲ. ಬಂದುದನ್ನು ಬಂದ ಹಾಗೆಯೇ ಎದುರಿಸಬೇಕು. ಈಗ ಆದದ್ದಾದರೂ ಏನು? ಮಾತನಾಡಿಕೊಂಡಿರಲು ಒಂದು ಜನ ಕಮ್ಮಿಯಾದ ಹಾಗಾಯಿತು, ಅಷ್ಟೇ ಅಲ್ವ'. 'ನೋಡು ಮೋಳೆ, ನಾನು ಕೂಡ ನಿನ್ನ ಹಾಗಿನ ಪ್ರಾಯವನ್ನೇ ದಾಟಿ ಬಂದವಳು. ಈ ಪುತ್ತುಬ್ಬ ಇದ್ದಾನಲ್ಲ; ಅವನು ಮಗುವಿನಂತಹ ಮನಸ್ಸಿನವನು. ಬಂದು ಇರುವೆಯನ್ನು ಕೊಲ್ಲುವುದೂ ಅವನಿಂದ ಸಾಧ್ಯವಿಲ್ಲ. ಅವನು ಏನು ಎಂಬುದು ನಿನಗೂ ಗೊತ್ತಿಲ್ಲದ್ದು ಅಲ್ಲ. ಅವನನ್ನು ಹಾಲಲ್ಲಿ ಹಾಕುವುದೂ ನೀರಲ್ಲಿ ಹಾಕುವುದೂ ನಿನಗೇ ಬಿಟ್ಟಿದ್ದು.' (ಪು.೫೬-೫೭)

ಈ ಮೇಲಿನ ಮಾತುಗಳು ಪುತ್ತಬ್ಬ ಮತ್ತು ಕೈಜಮ್ಮರ ಸ್ವಭಾವ ಚಿತ್ರಣ ನೀಡುತ್ತದೆ. ಅಕ್ಕ ತಮ್ಮ ಇಬ್ಬರು ಎಂತಹ ಗುಣದವರು ಎಂಬುದನ್ನು ತಿಳಿಸುತ್ತದೆ. ಅವರ ಆ ಒಳ್ಳೆಯತನದಿಂದಲೇ ಸಮದ್ ಅವರ ಮನೆಯಲ್ಲಿ ಮಗನಂತೆ ಬೆಳೆದಿದ್ದ. ಅವನಿಗೆ ಎಲ್ಲಾ ರೀತಿಯ ಅಧಿಕಾರದ ಸ್ವಾತಂತ್ರ್ಯ ಇತ್ತೆಂಬುದು ಕಂಡುಬರುತ್ತದೆ. ಈ ಮಾತನ್ನು ಆಡುವಾಗ ಉಮ್ಮಳಿಸಿ ಬಂದ ದುಃಖ ನಿಜವಾಗಿ ಮೆಹರುನ್ನೀಸಾಳ'ಲ್ಲಿ ನನ್ನ ಅಪರಾಧವೇನು ಎಂಬ ಗೊಂದಲವೇರ್ಪಡಿಸಿತ್ತು.

ಮೆಹರುನ್ನೀಸಾ ತನ್ನ ಇದ್ದತ್ ಅವಧಿಯಲ್ಲಿ ಸಮದ್‌ನನ್ನು ನೋಡಿದ ಸಮಯದಲ್ಲಿ ತಾನು ಮಾಡಿದ್ದು ತಪ್ಪು ಗೊತ್ತಿತ್ತು. ಅಂಗಡಿಯ ಬೀಗದ ಗೊಂಚಲನ್ನು ಯಾರ ಕೈಯಲ್ಲಿಡಬೇಕು ಎಂಬ ಕೈಜಮ್ಮ ಪ್ರಶ್ನೆಗೆ ಪ್ರತಿಯಾಗಿ ತನ್ನೊಳಗೆ ಸಾವಿರಾರು ಪ್ರಶ್ನೆಯನ್ನು ಕೇಳಿಕೊಳ್ಳುತ್ತಾಳೆ. ಆದರೆ ಆ ಪ್ರಶ್ನೆಗೂ ಉತ್ತರವನ್ನು ಕೊಡಲು ಸಾಧ್ಯವಾಗುವುದಿಲ್ಲ. ಅವಳಿಗೆ ಸಮಾದ್‌ನ ಮದುವೆಯ ವಿಚಾರವು

ತಿಳಿದಾಗ, ಅದಕ್ಕೆ ಮೆಹರುನ್ನೀಸಾಳ ಅನುಮತಿಯನ್ನು ಕೇಳಿದಾಗ ಅವಳಿಗೆ ಪ್ರಜ್ಞೆಯೇ ತಪ್ಪಿದಂತಾಗುತ್ತದೆ. ಅಲ್ಲದೆ ಹುಡುಗಿಯ ಆಯ್ಕೆ ಇವಳಿಗೆ ಬಿಟ್ಟಿದ್ದು ಎಂಬುದು ಮತ್ತೊಂದು ಸ್ಥಿತಿ.

ಒಟ್ಟಾರೆ, ಇದು ಧಾರ್ಮಿಕ ಆಚರಣೆ ಕಥೆಯಾಗಿದ್ದು, ಮೆಹರುನ್ನೀಸಾಳ ಸ್ವಭಾವ ತುಮುಲಗಳನ್ನು ಸ್ಪಷ್ಟವಾಗಿ ಗುರುತಿಸಿಯೂ, ಅವಳಿಗೆ ಯಾವತ್ತು ತಾಳ್ಮೆಯನ್ನು ಸಾಧ್ಯವಾಗಿಸಿರುವ ಶಕ್ತಿ ಧರ್ಮ ಮೂಲದಿಂದಲೇ ಒದಗಿ ಬರುವಂಥದ್ದು ಎಂಬುದನ್ನು ಹೇಳುವುದು ಈ ಕಥೆಯ ಮುಖ್ಯ ನೆಲೆ. ಆದರೆ ವಿವಾಹಬಾಹಿರವಾದ, ವಿವಾಹೇತರ ಸಂಬಂಧಗಳನ್ನು ಪ್ರತಿಭಟನೆಯ ನೆಲೆಗಳಲ್ಲಿ ಗ್ರಹಿಸುವ ಸಾಮಾನ್ಯ ದೃಷ್ಟಿಕೋನಕ್ಕಿಂತ ಇದು ಭಿನ್ನವಾಗಿದೆ. ವಿವಾಹ ಎಂಬ ಸಂಸ್ಥೆಯನ್ನು ಮೂಲಭೂತವಾಗಿ ಪ್ರಶ್ನಿಸುವ ಧಾಟಿ ಇದ್ದತ್ ಕತೆಯಲ್ಲಿಲ್ಲ. ಬದಲಾಗಿ ಕಥೆಯು ಒತ್ತು ನೀಡುವುದು ಈ ಸಂಸ್ಥೆಗಳನ್ನು ಉಳಿಸಿಕೊಳ್ಳುವ, ಸರಿಪಡಿಸಿಕೊಳ್ಳುವ ಕಡೆಗಿದೆ. ಇಲ್ಲಿ ಸೂಚಿತವಾಗಿರುವ ಒಳದಾರಿಗಳು ಕೂಡ ಧಾರ್ಮಿಕ ಚೌಕಟ್ಟಿನೊಳಗೆಯೇ ಇವೆ. ಅಂದರೆ, ಧರ್ಮದ ನಿಯಂತ್ರಕ ಸ್ವರೂಪದ ಜೊತೆ ಜೊತೆಗೇ ಅದರ ಜೀವ ಪೋಷಕ ಆಯಾಮವೂ ಧ್ವನಿತವಾಗುತ್ತದೆ. ಈ ಕಥೆಯಲ್ಲಿ ಮೆಹರುನ್ನೀಸಾ ಕೇವಲ ಪಾಪದವಳು. ಅವಳಿಗೆ ಬದುಕನ್ನು ಎದುರಿಸುವ ಶಕ್ತಿ, ವ್ಯವಹಾರ ಕೌಶಲ ಈ ಎಲ್ಲವೂ ಅವಳ ಗಂಡನಿಂದಲೇ ದೊರೆತದ್ದು. ಅವಳ ಮೊದಲ ಮದುವೆ ಅನಿವಾರ್ಯವಾಗಿರಲಿಲ್ಲ. ಎರಡನೆಯ ಮದುವೆಯ ಹಂಬಲವು ಮಾನವೀಯ ನೆಲೆಯಲ್ಲಿ ಶೋಧನೆಗೆ ಒಳಗಾಗುತ್ತದೆ. ಅವಳು ಚಿಕ್ಕ ಪ್ರಾಯದವಳು. ಸಮದ್‌ನನ್ನು ಕಂಡಾಗ ಉಂಟಾದ ಆಸೆಯು ಸಹಜ.

'ದೇವರುಗಳ ರಾಜ್ಯದಲ್ಲಿ' ಅದೇ ಹೆಸರಿನ ಕಥೆಯ ಆರಂಭದಲ್ಲಿ ದೇವರು ಸೃಷ್ಟಿಸಿದ ಭೂಮಿಯ ಚಿತ್ರಣ ಕೊಡುತ್ತ ಆ ರಾಜ್ಯದಲ್ಲಿ ಸಂತೋಷಪಟ್ಟ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನೂ ಸೃಷ್ಟಿಸಿ ಅವನಿಗೆ ಸಿರಿವಂತಿಕೆ ಮತ್ತು ಬಡತನಗಳನ್ನೂ, ಸುಖ ಮತ್ತು ದುಃಖಗಳನ್ನೂ, ಆರೋಗ್ಯ ಮತ್ತು ರೋಗಗಳನ್ನು ಒಂದೊಂದಾಗಿ ಅನುಗ್ರಹಿಸಿದನು. ದೇವರು ಇಲ್ಲಿ ದೇವಾಲಯ, ಇಗರ್ಜಿ, ಮಸೀದಿಗಳನ್ನು ಸೃಷ್ಟಿ ಮಾಡಿ ಅವು ತನ್ನ ಅಣತಿಯಂತೆ ನಡೆಯುತ್ತಿರಲಿ ಎಂಬ ಆಶಯವನ್ನು ಹೊಂದಿದ್ದನು.

ಇದು ದೇವರು ಸೃಷ್ಟಿಸಿದ ರಾಜ್ಯದ ಸ್ವರೂಪ. ಈ ರಾಜ್ಯದಲ್ಲಿ ಸತ್ಯವಂತರೂ, ಪುಣ್ಯವಂತರೂ ಹೇಗೆ ದೇವರ ಸೇವೆಯನ್ನು ಮಾಡುತ್ತಾ ಸುಖದಿಂದಿದ್ದಾರೆ ಎಂಬುದನ್ನು ತಿಳಿಸುತ್ತಾರೆ. ಅಲ್ಲಿ ಪುಣ್ಯವಂತನ ಕಾರ್ಖಾನೆಯಲ್ಲಿ ಜೋಸೆಫ್ ಡಿ ಕಾಸ್ಟ ಎಂಬುವನು ಕೂಲಿಗೆ ಬರುತ್ತಿರುವಾಗ, ಒಮ್ಮೆ

ದೇವರು ಹೇಳಿದಂತೆ, "ಮರದ ದೊಡ್ಡ ದಿಮ್ಮಿಯೊಂದು ಬೀಳಲಿ" ಎಂದು. ಅದು ಬಿದ್ದುದರ ಪರಿಣಾಮವಾಗಿ ಅವನು ಸರಕಾರಿ ಆಸ್ಪತ್ರೆಯಲ್ಲಿ ಮಲಗುತ್ತಾನೆ. ದೇವರ ದಯೆಯಿಂದ ಏನೂ ಆಗದೆ ಮನೆಗೆ ಮರಳುತ್ತಾನೆ. ಆದರೆ ಬಲಗಾಲನ್ನು ಮೊಣಕಾಲಿನವರೆಗೆ ಕತ್ತರಿಸಿದ್ದಾರೆ. "ದೇವರ ಮಹಿಮೆ" ಎಂದು ಹೇಳುವ ಲೇಖಕರ ಈ ಮಾತು ವ್ಯಂಗ್ಯದ್ದಾಗಿದೆ. ಆ ದೇವರ ದಯೆಯಿಂದ ಬೇರೆ ಊರಿನಲ್ಲಿ ಭಿಕ್ಷೆ ಬೇಡಿಕೊಂಡು ಬದುಕಲು ದಾರಿ ತೋರುತ್ತದೆ. ಸಿರಿವಂತರನು, ಹೃದಯದಲ್ಲಿ ಕರುಣೆ ಇರುವವರನ್ನು ದೇವರು ಉಂಟು ಮಾಡಿದ್ದನು. ಸಾವಿರಾರು ಸಂಘ ಸಂಸ್ಥೆಗಳೂ, ಅನಾಥಾಲಯಗಳು ಭಿಕ್ಷುರನ್ನು ಸಲಹುತ್ತಿದ್ದವು. ಮುಂದೆ ಭಿಕ್ಷೆ ಬೇಡಲು ನಾಚಿಕೆ ಪಡದ ಅವನು ದೇವರ ಹೆಸರಿನಲ್ಲಿ ಕುಂಟನಿಗೆ ಹತ್ತು ಪೈಸೆ ದಾನ ಮಾಡಿರೆಂದು ಅಧಿಕಾರದಿಂದಲೇ ಬೇಡತೊಡಗುತ್ತಾನೆ. ಎಂದಿನಂತೆ ಜೀವನ ನಡೆಯುತ್ತಾ ಹೋಗುತ್ತದೆ. ಇಗರ್ಜಿಯ ಕಾವಲುಗಾರ 'ಜಾನ್' ಕಾಲ ಕಳೆಯುತ್ತಿದ್ದಂತೆ ಅವನು ವೃತ್ತಿಯಲ್ಲಿ ಪಳಗುತ್ತಾನೆ. ಅವನೆ ಹೊಂದುವಂತಹ ಲಾಭದಾಯಕವಾದ ನಿಯಮವನ್ನು ಮಾಡಿಕೊಂಡ. ಜಾನ್ ರಹಮತ್‌ನಾಗಿ ಮತಾಂತರ ಹೊಂದಿದ ನಂತರ ನಿಜವಾದ ಧರ್ಮದ ಸ್ವರೂಪವನ್ನು ತಿಳಿದುಕೊಳ್ಳುತ್ತಾನೆ.

'ಅಂಕ' ಕಥಾ ಸಂಕಲನದ ಅದೆ ಹೆಸರಿನ ಕತೆಯಲ್ಲಿ ಮತಾಂತರದ ವಿಷಯವನ್ನು ಒಳಗೊಂಡಿದೆ. ಮತಾಂತರವು ಸಾಮಾಜಿಕ ಕ್ರೌರ್ಯವಾಗಿದೆ. ಬಡತನವೂ ಮತಾತಂತರಕ್ಕೆ ಒಂದು ಕಾರಣವಾಗಿದೆ. ಎರಡು ಸಮುದಾಯದ ಅಥವಾ ಎರಡೂ ಸಮಾಜಗಳ ನಾಯಕರು ಮತಾಂತರಗೊಂಡ ಹುಡುಗ ಅನಾರೋಗ್ಯದಿಂದ ನರಳುತ್ತಿರುವಾಗ ಸತ್ತ ನಂತರದ ಅವನ ಶವಸಂಸ್ಕಾರದ' ಹಕ್ಕು ಯಾರಿಗೆ? ಅದಕ್ಕೆ ಬೇಕಾದ ಸಾಕ್ಷ್ಯ, ಆಧಾರಗಳ ಬಗೆಗಿನ ವಿಚಾರದಲ್ಲಿ ತಲ್ಲೀನರಾಗುತ್ತಾರೆ. ಮತಾಂತರದ ಅಂಶವನ್ನು ಒಳಗೊಂಡ ಪ್ರಮುಖ ಕತೆಯಾಗಿ ಇದನ್ನು ಹೆಣೆಯಲಾಗಿದೆ.

ಕೇವಲ ಮುನ್ನೂರು ಬೆಡ್ಡುಗಳ ಸರಕಾರಿ ಆಸ್ಪತ್ರೆಯಲ್ಲಿ ತನ್ನ ಮಗನನ್ನು ಹುಡುಕುವ ಉಮ್ಮಾಬಿಯನ್ನು ಮೊದಲಿಗೆ ಕಾಣಬಹುದು. ಹಾಲು ತಂದ ಹೆಂಗಸಿನಿಂದ ವಿಷಯ ತಿಳಿದ ನಡುವಯಸ್ಸು ದಾಟಿದ ಉಮ್ಮಾಬಿ ಏಕಾಏಕಿ ಕೆಂಪು ಬಸ್ಸನ್ನು ಹತ್ತಿ ಹೊರಡುತ್ತಾಳೆ. ಆಸ್ಪತ್ರೆಯನ್ನು ತಲುಪಿದ ಅವಳು ಮಗನ ಹೆಸರು ಏನೆಂದು ಕೇಳಿದಾಗ 'ರೆಹಮಾನ್' ಎಂದು ಹೇಳುತ್ತಾಳೆ. ಅವಳು ಸ್ಪೆಷಲ್ ವಾರ್ಡ್‌ನಲ್ಲಿದ್ದ ತನ್ನ ಮಗ ಹೆಸರನ್ನು ಬದಲಾಯಿಸಿಕೊಂಡ ವಿಷಯವನ್ನು ಅರಿಯದಷ್ಟು ಮುಗ್ಧೆ.

ನಂತರ ಬರುವ ಸರಳಾಯರೂ ಧಾರ್ಮಿಕ ಮನುಷ್ಯರಾಗಿದ್ದು ಯಾವಾಗಲೂ ತಮ್ಮದೇ ವ್ಯವಹಾರಗಳಲ್ಲಿ ಮುಳುಗಿರುತ್ತಿದ್ದರು. ಮತ್ತೊಬ್ಬರು ಗುಂಡಣ್ಣ ಶೆಟ್ಟರು. ಇವರು ಸದಾ ಅಂಗಡಿ ವ್ಯಾಪಾರ ಲಾಭ-ನಷ್ಟ ಲೆಕ್ಕದಲ್ಲಿ ಮಗ್ನರಾಗಿರುತ್ತಿದ್ದರು. ಇವರ ಗುಂಪಿನ ವ್ಯಕ್ತಿ ಶೆಣೈ ಮಂಗಳೂರಿನಿಂದ ಪೋನು ಮಾಡುವುದರ ಮೂಲಕ ಆಸ್ಪತ್ರೆಗೆ ಸೇರಿದ ಹುಡುಗನ ತಾಯಿ ಬಂದಿರುವುದು ತಿಳಿಯುತ್ತಲೇ ಚಡಪಡಿಕೆ ಆರಂಭವಾಗುತ್ತದೆ.

ಈ ಸರಳಾಯರು ಪ್ರಕಟಿಸಿದ 'ನಾವೆಲ್ಲ ಒಂದೆ' ಎಂಬ ಪುಸ್ತಕವನ್ನು ಧರ್ಮಾರ್ಥ ಮುದ್ರಿಸಿ ಕೊಟ್ಟಿರುತ್ತಾರೆ. ಇಲ್ಲಿ 'ನಾವೆಲ್ಲ ಒಂದೆ' ಎಂದರೆ ಏನು ಎಂಬ ಅರ್ಥ ತಿಳಿಯದವರು ತಮ್ಮ ಪ್ರಚಾರಕ್ಕಾಗಿ ಮಾಡುವ ತಂತ್ರಗಳು. ಇವೆಲ್ಲವೂ ಜೈಹಿಂದ್ ಪ್ರಶಸ್ತಿಗೆ ಬೇಡಿಕೆ ಬರಲಿ ಎನ್ನುವುದು ಅದರ ಉದ್ದೇಶ. ಶೆಟ್ಟರಿಗೆ ನಡೆದ ವಿಚಾರವನ್ನು ತಿಳಿಸುತ್ತಾ ಸರಳಾಯರು "ರೆಹಮಾನ್" ರಮೇಶ ಆದದ್ದನ್ನು ಹೇಳುತ್ತಾ, ಸ್ವಾಮೀಜಿಯವರಿಗೆ ಹುಡುಗನನ್ನು ತಮ್ಮ ಧರ್ಮಕ್ಕೆ ಕರೆದುಕೊಂಡ ವಿಚಾರವನ್ನು ತಿಳಿಸುತ್ತಾರೆ. ಹುಡುಗ ಸತ್ತ ನಂತರ ಬೇಕಾಗಬಹುದಾದ ಆಧಾರಗಳ ಹುಡುಕಾಟದಲ್ಲಿ ಮಗ್ನರಾಗುತ್ತಾರೆ. ಕಾಮತ್‌ರವರು ಇದರಲ್ಲಿ ಸೇರಿರುತ್ತಾರೆ. ಹುಡುಗನ ಪರಿಸ್ಥಿತಿಯ ಬಗ್ಗೆ ಚಿಂತಿಸದೇ ಧರ್ಮಾಂತರವಾದ ಹುಡುಗನ ಸಾವಿನ ನಂತರದ ಸ್ಥಿತಿಯ ಕಡೆಗೆ ಅವರ ಗಮನ. ಇದು ಒಂದು ಸಮಾಜದಲ್ಲಿರುವ ಮತಾಂತರ ಮಾಡಿದ ಗಣ್ಯರ ಚಿತ್ರಣ.

ರೆಹಮಾನ್(ರಮೇಶ)ನ ಅಣ್ಣನಿಗೆ ಹೆದರಿ ಮತ್ತೊಂದು ಸಮುದಾಯದ ಜನರು ಅವನನ್ನು ಪ್ರಶ್ನಿಸುವ ಧೈರ್ಯ ಮಾಡಲಿಲ್ಲ. ಇಲ್ಲಿ ಹೊಲೆಯರ ಮತಾಂತರದ ಅಂಶವನ್ನು ಕಾಣಬಹುದು. ಈ ಸಂದರ್ಭದಲ್ಲಿ ಬಡವರು ಮತಾಂತರ ಹೊಂದಲು ಕಾರಣ ಮತ್ತು ಅದರಿಂದಾಗುವ ಲಾಭದ ಬಗ್ಗೆ ಊಹಿಸಬಹುದು.

ಇಲ್ಲಿ ತಾಯಿ ತನ್ನಿಬ್ಬರು ಮಕ್ಕಳ ವಿಚಾರ ತಿಳಿದಿದ್ದು ಆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಊರಿನ ಪ್ರಮುಖರು ಒಂದು ಮಾಡಿದ ವ್ಯರ್ಥ ಪ್ರಯತ್ನ ಕಾಣಬಹುದು. ಅವರು ಯಾವ ಮಾತನ್ನು ಕೇಳದೇ ಒಪ್ಪದೇ, ತನ್ನಂತೆ ನಡೆಯುವ ಉಮ್ಮಾಬಿಯನ್ನು ಕಾಣಬಹುದು. ಜಾತಿಗೆಟ್ಟು ಮನೆಗೆ ಬಂದ ಮಗನನ್ನು ತಿರಸ್ಕಾರದಿಂದ ನೋಡುತ್ತಾಳೆ. ನೆಲದ ಮೇಲೆ ಜಾತಿಗೆಟ್ಟ ಮಗನ ಚಿತ್ರ ಸೌಮ್ಯವಾಗಿ ನಗುತ್ತಿತ್ತು ಎಂಬುದು ತಾಯಿ ಅವನ ಮತಾಂತರವನ್ನು ಒಪ್ಪದೇ ಇರುವುದನ್ನು ಸೂಚಿಸುತ್ತದೆ. ಯಾವುದೇ ಧರ್ಮವಾಗಲಿ ತಮ್ಮ ಧಾರ್ಮಿಕ ಆಚರಣೆಗಳು ಶ್ರೇಷ್ಠವಾಗಿ ಕಾಣುವ ಅಂತರವನ್ನು ಇಲ್ಲಿ ಕಂಡುಬರುತ್ತದೆ.

ಮರಿಯಮ್ಮನ ಸೋದರಳಿಯ ಕಂಟ್ರಾಕ್ಟರ್ ಆದ ಸಾಹುಕಾರ ಬೆಂಗಳೂರಿನಿಂದ ಹಿಂದಿರುಗಿದ ನಂತರ ಗುಂಡಣ್ಣಶೆಟ್ಟರಿಂದ ವಿಷಯ ತಿಳಿದು ಕಮಿಟಿ ಮೀಟಿಂಗ್ ಸೇರಿರುತ್ತದೆ. ಮತಾಂತರದ ಕಾರಣ ತಾಯಿಯು ಮಗನನ್ನು ಕಾಣಲು ಇವರಿಂದ ಅನುಮತಿ ಪಡೆಯಬೇಕು. ಬದುಕಿದ್ದಾಗ ಜಾತಿಯ ಕುರಿತು ಚರ್ಚಿಸುವ ಇವರು, ಸತ್ತ ನಂತರ ಆ ಹುಡುಗನು ಯಾವ ಧರ್ಮದ ಪ್ರಕಾರ ಅಂತಿಮ ಸಂಸ್ಕಾರ ಮಾಡುವುದರ ಕುರಿತು ವಾದಿಸುವ ಮುಖಾಂತರ ತಮ್ಮ ಹಕ್ಕನ್ನು ಚಲಾಯಿಸುತ್ತುವ ಅಂಶವನ್ನು ಕಾಣಬಹುದು. ಮನುಷ್ಯನ ಯೋಗಕ್ಷೇಮದ ಬಗ್ಗೆ ವಿಚಾರಿಸಿಕೊಳ್ಳದ ಈ ಜನತೆ ಬರಿ ಜಾತಿಯ ಕಾರಣ ಬದುಕಿರುವ ಹುಡುಗ ತಮಗೆ ಬೇಕು ಎಂದು ಹಕ್ಕು ಚಲಾಯಿಸುವುದನ್ನು ಕಾಣಬಹುದು. ಮತಾಂತರ ವಿಷಯದಿಂದ ಊರಿನಲ್ಲಿ ಅಲ್ಲಿಯವರೆಗೂ ಯಾರಿಗೂ ಪರಿಚಯವಿಲ್ಲದ, ಬೇಡವಾದ ಇವರು ನಾವು ಮುಂದು ತಾವು ಮುಂದು ಎಂದು ಬದುಕಿರುವವರ ಶವ ಸಂಸ್ಕಾರಕ್ಕೆ ಹೋರಾಡುವುದನ್ನು ಇಲ್ಲಿ ಹೇಳಿದ್ದಾರೆ. ಆಸ್ಪತ್ರೆಗೆ ಮಗನನ್ನು ಕಾಣಲು "ಆ ಮುದುಕಿ ಹೋದದ್ದು ನಮಗೆ ಆಯ್ತು. ಆವತ್ತು ಆ ಸುವರ್‌ನ ಅಣ್ಣನಿಂದಾಗಿ ನಾವೆಲ್ಲ ಬಾಲಮಡಚಿ ಕೂತಿಲ್ವಾ ಈಗ ನೋಡುವಾ, ಅವರು ಹ್ಯಾಗೆ ಹುಡುಗನ ಹೆಣ ಮುಟ್ತಾರೆ" ಅಂತ. (ಪು.೧೧೨)

ತಾಯಿಯನ್ನು ಮುಂದಿಟ್ಟು ಹೆಣವನ್ನು ಪಡೆಯಲು ಹೊಂಚು ಹಾಕುವ ಸಮುದಾಯದ ಚಿತ್ರಣ ನೀಡಿದ್ದಾರೆ. ಬದುಕಿರುವ ವ್ಯಕ್ತಿಯನ್ನು ಮುಂದೆ ಸಾಯಬಹುದು ಎಂದು ಊಹಿಸಿ, ಕಲ್ಪನೆಯಲ್ಲಿ ಕೊಂದು ಬಿಡುತ್ತಾರೆ. ಇಲ್ಲಿ ಆ ಹುಡುಗ ಬೇಕಿಲ್ಲವಾದರೂ ಜಾತಿ ಧರ್ಮದ ಕಾರಣ ಆ ಹೆಣದ ಮೇಲೆ ತಮ್ಮ ಧರ್ಮ ಸ್ಥಾಪನೆಗೆ ಅವಕಾಶ ಕಾಯುತ್ತಾರೆ. ವ್ಯಕ್ತಿ ಮುಖ್ಯವಲ್ಲ. ದೇವರು, ಧರ್ಮ ಮುಖ್ಯ. ಇಲ್ಲಿ ಬರುವ ಹಸನಬ್ಬ, ಖಾದರ್, ಆದಂ ಸಾಹುಕಾರ್ ನಡುವೆ ಉಮ್ಮಾಬಿಯು ತನ್ನ ಮಗನ ಮತಾಂತರ ವಿಷಯ ತಿಳಿಸಲು ನಿರಾಕರಿಸಿದುದರ ಬಗ್ಗೆ ಚರ್ಚೆ ನಡೆಯುತ್ತದೆ. ಸುಲೈಮಾನ್ ಹಾಜಿಯವರು ಉಮ್ಮಾಬಿ ಮಾತನಾಡಿಸಲು ಹೋದಾಗ ನನ್ನ ಮಗ ಸತ್ತು ಹೋದ, ಅವನ ನೆನಪು ಮಾಡುತ್ತಾ ನನ್ನನ್ನು ಕೊಲ್ಲಬೇಡಿ" (ಪು.೧೧೩) ಎಂದು ಉತ್ತರಿಸಿ ಕಳುಹಿಸುತ್ತಾಳೆ.

ಉಮ್ಮಾಬಿಯ ಹಿರಿಯಮಗ ಮತ್ತು ಅವಳ ನಡುವೆ ನಡೆದ ವಾದವಿವಾದ ಕೆಳಗಿನ ಈ ಸಂದರ್ಭವು ಮುಖ್ಯವಾದುದು.

"ಈಗ ತೃಪ್ತಿಯಾಯಿತಲ್ಲ ನಿನ್ಗೆ? ನೀನು ಊರಿಂದ ದೂರದಲ್ಲಿದ್ದಿ ಹಾಗಾಗಿ ನಿನ್ಗೆ ದೇವರು ಧರ್ಮ ಯಾವ್ದೂ ಬೇಡ ಆದರೆ ನನ್ಗೆ? ನಾನು ನಾಳೆ ಸತ್ರೆ ಎರಡು ಮೊಳ ಗುಂಡಿಯಾದ್ರೂ ಬೇಡವಾ?'' (೧೧೩)

ಮತಾಂತರದಿಂದ ತನ್ನ ಹಿಂದಿನ ಧರ್ಮದಿಂದ ತಿರಸ್ಕರಿಸಲ್ಪಟ್ಟ ತಾಯಿಯು ಅನುಭವಿಸಬೇಕಾದ ಕಷ್ಟಗಳನ್ನು ಕುರಿತು ಕತೆಗಾರರು ಹೇಳುತ್ತಾರೆ. ಕಾಲ ಬದಲಾದಂತೆ ವ್ಯಕ್ತಿಯು ಬದಲಾಗಿ ಆ ಸನ್ನಿವೇಶ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತಾರೆ. ಸಮಾಜದಿಂದ ತಿರಸ್ಕರಿಸಲ್ಪಟ್ಟ ವ್ಯಕ್ತಿಯು ತನಗೂ ಒಳ್ಳೆಯ ಸ್ಥಾನಮಾನ ವಿದ್ಯೆ ಬೇಕೆಂದು ಬಡತನದಿಂದ ಹೊರಬಂದು ಎಲ್ಲಾರಂತೆ ಬದುಕಬೇಕು ಎಂಬ ಆಶಯದಿಂದ ಮತಾಂತರ ಹೊಂದಲು ಮುಂದಾಗುತ್ತಾರೆ. ಯಾವುದೇ ಲಾಭವಿಲ್ಲದ ಧರ್ಮದಿಂದ ಆಗುವ ಉಪಯೋಗವಾದರೂ ಏನು? ಆದೇ ಅಣ್ಣನಿಂದ ಬೇರೆ ಧರ್ಮಕ್ಕೆ ಸೇರಲು ಪ್ರಭಾವಿತನಾದ ತಾಯಿಯು ತಮ್ಮನ ವಿಷಯದಿಂದ ಬೇಸರಗೊಳ್ಳುತ್ತಾಳೆ (ಪು.೧೧೪)

"ಕೆಲ್ಸ ಕೊಡ್ತೆವೆ ಬಾ ಅಂತ ಕರೆದ್ರು, ಇವನು ಹೋದ; ಯಾರ ತಪ್ಪು?"(ಪುಟ ೧೧೪) ಎಂದು ಧರ್ಮದಲ್ಲಿ ಆಸಕ್ತಿ ಇಲ್ಲದ ವ್ಯಕ್ತಿ ಅದರಿಂದ ಬರುವ ಲಾಭದ ಕಡೆ ಹೋಗುತ್ತಾನೆ. ದೇವರು, ಧರ್ಮ ಯಾವುದು ಮುಖ್ಯವಲ್ಲ, ಅದಕ್ಕೂ ಮಿಂಚಿದ ಮಾನವೀಯತೆ ಮುಖ್ಯ. ಇದು ಮನುಷ್ಯನ ಕಷ್ಟದ ಪರಿಸ್ಥಿತಿಯಲ್ಲಿ ಸಹಾಯಕ್ಕೆ ಬಾರದ ಧರ್ಮ, ಸಮುದಾಯದ ಮುಖ್ಯ ವ್ಯಕ್ತಿಗಳು, ಅಣ್ಣ ತಮ್ಮಂದಿರು, ತಮ್ಮ ಧರ್ಮದಿಂದ ದೂರವಾದ ಮಕ್ಕಳನ್ನು ಕುರಿತು ತೀರಿಸಲು ಉಮ್ಮಾಬಿ ತಾನು ಬಿಡಲಾಗದ ಧರ್ಮದವರಿಗೆ ಮಾನವೀಯತೆ ಕುರಿತು ಹೇಳುವ ವಿಷಯವಾಗಿದೆ. ತಮ್ಮದೇ ಧರ್ಮದವರಿಗೆ ಉದ್ಯೋಗದ ಅವಶ್ಯಕತೆಯನ್ನು ತೀರಿಸಲಾಗದೇ ಧರ್ಮ ಪಾಲನೆಯನ್ನು ಹೇಳಿದರೆ ಪ್ರಯೋಜನವಿಲ್ಲ ಎಂಬುದನ್ನು ಕಾಣಬಹುದು. ಇಲ್ಲಿ ಮಾನವ ಧರ್ಮವೇ ಮುಖ್ಯವಾದುದು.

ಕೊನೆಯಲ್ಲಿ ಸಾಯುವ ಮುನ್ನವಾದರೂ ತಮ್ಮ ಧರ್ಮ ಸೇರಿದಂತೆ ಮೌಲ್ವಿಯರ ಮುಂದೆ ಹೇಳಿದಂತೆ ಸಾಕ್ಷಿ ಸೃಷ್ಟಿಸಲು ಮುಂದಾಗುತ್ತಾರೆ. ಆದರೆ ಕೊನೆಗೆ ಈ ವಾಕ್ಯ ಮುಖ್ಯವಾದುದು : "ಎಂಥದ್ದೋ ಒಂದು. ಒಟ್ಟಿನಲ್ಲಿ ಹುಡುಗ ಅತ್ಲಗಲ್ಲದೆ ಇತ್ಲಗಂತೂ ಇಲ್ಲ ಎಂಬುದು ಗ್ಯಾರಂಟಿ. ನನಗೆ ಗುಂಡಣ್ಣ ಶೆಟ್ರ ಮಾತಿನಲ್ಲಿ ವಿಶ್ವಾಸ ಉಂಟು. ಹಾಗಂತ ನಾವು ಯಾರಾದ್ರೂ ಈಗ್ಲೇ ಆಸ್ಪತ್ರೆಗೆ ಹೋದೆವೂಂತ ಅವರ ಜನಕ್ಕೆ ಗೊತ್ತಾಗಿಬಿಟ್ರೆ ಮುಗಿಯಿತು. ಲಂಡನ್‌ನಿಂದ ಡಾಕ್ಟ್ರನ್ನು

ತಂದು ಹ್ಯಾಗಾದ್ರು ಬಚಾವ್ ಮಾಡಿ, ಒಟ್ಟಿನಲ್ಲಿ ಹುಡುಗನ ಹೆಣ ನಮಗೆ ದಕ್ಕದ ಹಾಗೆ ಮಾಡಿಬಿಟ್ಟಾರು." (ಪು.೧೧೬)

ಧರ್ಮದಲ್ಲಿರುವ ಸಾರಾಂಶವನ್ನು ತಿಳಿಸಬೇಕಾದವರು ಧರ್ಮ ಪಾಲನೆಯ ಹೆಸರಿನಲ್ಲಿ ಹೀನ ಕೃತ್ಯದಲ್ಲಿ ಮುಳುಗಿರುವುದನ್ನು ಲೇಖಕರು ಪ್ರಸ್ತಾಪಿಸಿದ್ದಾರೆ. ಬದುಕಿರುವ ವ್ಯಕ್ತಿ ಸಂತೋಷದಿಂದ ಜೀವನ ನಡೆಸುವುದು ಮುಖ್ಯ. ಆದರೆ ಸತ್ತ ನಂತರ ಹೆಣಕ್ಕಾಗಿ ಹೆಣಗಾಡುವ ಜನರು ಈ ಕತೆಯಲ್ಲಿ ಕಂಡುಬರುತ್ತಾರೆ. ಮತಾಂತರವಾದ ವ್ಯಕ್ತಿಗೆ ಆ ಧರ್ಮದಲ್ಲಿಯೂ ಸಮಧಾನಕರವಾಗಿ ಬದುಕಲು ಬಿಡಲಾರರು ಎಂಬುದು ಈ ಕತೆಯಿಂದ ತಿಳಿದು ಬರುತ್ತದೆ.

ಮೌಲ್ವಿಯವರು, " ಆ ಹುಡುಗನಿಗೆ ಹೆಚ್ಚು ಆಯುಸ್ಸು ಕೊಡುವಂತೆ ನಾವೆಲ್ಲ ಅಲ್ಲಾಹುವನ್ನು ಯಾಕೆ ಪ್ರಾರ್ಥಿಸಬಾರದು? (ಪು.೧೧೩)

ಇದು ಧರ್ಮಪಾಲಕರು ನಿಜವಾಗಿ ಮಾಡಬೇಕಾದ ಕೆಲಸ. ವ್ಯಕ್ತಿ ಯಾವುದೇ ಧರ್ಮದವನಾದರೂ ಅವನಿಗೆ ಒಳಿತನ್ನು ನಾವು ಬಯಸಬೇಕು. ಮೌಲ್ವಿಯವರ ನಗು ಇಲ್ಲಿ ಧರ್ಮಪಾಲಕರನ್ನು ವ್ಯಂಗ್ಯ ಮಾಡಿದಂತಿದೆ. ಕೊನೆಗೂ ಮಗನನ್ನು ಉತ್ತಮ ಆರೋಗ್ಯವಂತನನ್ನಾಗಿ ಮಾಡಿದ ತಾಯಿಯು ಮಾನವ ಧರ್ಮ ಪಾಲಿಸಿವವಳಾಗಿ ಕಂಡು ಬರುತ್ತಾಳೆ. ಯಾವುದೇ ಪ್ರತಿಫಲ ಅಪೇಕ್ಷಿಸದೇ ಮಾಡುವ ಕರ್ತವ್ಯವೇ ನಿಜವಾದ ಧರ್ಮ. ಅದು ಅವನ ತಾಯಿ ಮಾಡಿದ್ದು.

ಒಟ್ಟಾರೆ ಮತಾಂತರಗೊಂಡ ಯುವಕನೊಬ್ಬ ಅಸೌಖ್ಯದಿಂದ ಆಸ್ಪತ್ರೆಯಲ್ಲಿ ಸಾವು ಬದುಕಿನ ಹೋರಾಟದಲ್ಲಿ ಮುಳುಗಿದ್ದರೆ, ಆತನ ಮತಾಂತರಕ್ಕೆ ಇಂಬು ಕೊಟ್ಟವರು ಮತ್ತು ಈ ಮತಾಂತರದಿಂದ ಕೋಪಗೊಂಡವರು ಇಬ್ಬರೂ ಆತನ ಹೆಣದ ಮೇಲೆ ಹಕ್ಕು ಸಾಬೀತುಪಡಿಸಿ, ಹೆಣಕ್ಕೆ ತಮ್ಮ ಧರ್ಮದ ಹೆಸರು ಅಂಟಿಸಿ ವಿಜಯದ ಧ್ವಜ ಹಾರಿಸುವ ಹುನ್ನಾರದಲ್ಲಿ ನಿರತರರಾಗಿದ್ದಾರೆ. ಆತನನ್ನು ಹೆತ್ತ ತಾಯಿ ಮಾತ್ರ ಆತನ ಬದುಕಿಗಾಗಿ ಹಂಬಲಿಸುತ್ತಾಳೆ. ಕಥೆಯ ಕೊನೆಯಲ್ಲಿ ಗೆಲ್ಲುವುದು ಮನುಷ್ಯ ಪ್ರೀತಿಯೇ ಹೊರತು, ಹೆಣ ಧರ್ಮದ ಹೆಸರಲ್ಲಿ ಪರಸ್ಪರ ಕೆಸರು ಎರಚುವವರಲ್ಲ.

ಬೊಳುವಾರುರವರ "ಒಂದು ತುಂಡು ಗೋಡೆ" ಕಥಾ ಸಂಕಲನದಲ್ಲಿ ಬರುವ ಕಥೆಗಳಲ್ಲಿ ಎರಡು ಸಮುದಾಯಗಳ ಮದ್ಯ ತಪ್ಪು ಕಲ್ಪನೆಗಳ ನಡುವೆ ವಿಜೃಂಭಿಸುವ ಮನುಷ್ಯ ಪ್ರೀತಿಯನ್ನು ಕಾಣಬಹುದು.

'ಒಂದು ತಂಡು ಗೋಡೆ' ಕತೆಯಲ್ಲಿ ಬರುವ 'ರೊಟ್ಟಿ ಪಾತಮ್ಮ' ಮತ್ತು 'ಚಂದ್ರಣ್ಣ' ಮುಖ್ಯ ಪಾತ್ರವನ್ನಾಗಿ ಚಿತ್ರಿಸಿದ್ದಾರೆ. ಓದಿದ ಚಂದ್ರಣ್ಣ ಮಸೀದಿ ಕಟ್ಟಡ ಒಡೆಯುವ ಕ್ರಿಯೆಯಲ್ಲಿ ಇವನು ಭಾಗವಹಿಸಿದ್ದನ್ನು ಹಾಗೂ ರೊಟ್ಟಿ ಪಾತಮ್ಮ ಅರಿವಿಲ್ಲದೆ ಅವನು ಅಲ್ಲಿಂದ ತಂದಿದ್ದ ಗೋಡೆಯ ತುಂಡೊಂದನ್ನು ಕೇಳುವುದನ್ನು ನೈಜವಾಗಿ ಕತೆಯಲ್ಲಿ ಚಿತ್ರಿಸಿದ್ದಾರೆ. ಅವಳಿಗೆ ಅದು ತಮ್ಮ ಧರ್ಮ ಮಸೀದಿಯ ಗೋಡೆಯನ್ನು ಧ್ವಂಸಗೊಳಿಸಿ ತಂದದ್ದನ್ನು ಎಂಬುದು ಗೊತ್ತಿರಲಿಲ್ಲ.

ರೊಟ್ಟಿ ಪಾತಮ್ಮನಿಗೆ ಕನಸಿನಲ್ಲಿ ದೇವರಾಜ್ ಅರಸರು ವಾರ್ನಿಂಗ್ ಕೊಟ್ಟಿದ್ದರಿಂದ ದಿಗ್ಗನೆ ಎದ್ದು ಕೂಗುತ್ತಾಳೆ.' ವಿಧವೆಯಾದ ಇವಳು ಕಾಸಿಂ ಬ್ಯಾರಿಯಿಂದ ಅಕ್ಕಿ ರೊಟ್ಟಿ ಸುಡುವ ಫ್ಯಾಕ್ಟರಿಯನ್ನು ತಿಂಗಳಿಗೆ ಹದಿನೈದು ರೂಪಾಯಿಗೆ ಬಾಡಿಗೆಗೆ ಪಡೆದಿರುತ್ತಾಳೆ. ಕಾಸಿಂ ಬ್ಯಾರಿಯ ತಂಗಿ ಮಗನನ್ನು ಬಾಲ ಕಾರ್ಮಿಕನಾಗಿ ಸೇರಿಸಿಕೊಂಡು ವಾರಕ್ಕೆ ಏಳು ರೂಪಾಯಿಗಳ ಸಂಬಳವನ್ನು ನೀಡುತ್ತಾಳೆ. ಇಲ್ಲಿ ರೊಟ್ಟಿ ಪಾತಮ್ಮ ಆರ್ಥಿಕವಾಗಿ ಸ್ವಾತಂತ್ರ್ಯ ಹೊಂದಿ, ಸಣ್ಣ ಪ್ಯಾಕ್ಟರಿ ನಡೆಸುತ್ತಿರುವದರಲ್ಲಿ ಅವಳ ಆಸಕ್ತಿ ಮತ್ತು ಉತ್ಸಾಹಗಳನ್ನು ಕಾಣಬಹುದು.

ಸ್ವಂತ ಮನೆಯ ಕನಸು ಕಂಡಿದ್ದ ಪಾತುಮ್ಮ ವ್ಯವಹಾರಕ್ಕೆ ಬೇಕಾದ ತಂತ್ರವನ್ನು ಜಾರಿಗೆ ತರುತ್ತಾಳೆ. ಮನೆ ಕಟ್ಟಲು ಬೇಕಾದ ಪೂರ್ವಭಾವಿ ಸಿದ್ಧತೆಯ ಮೊದಲ ಹಂತದ ಉಳಿತಾಯವನ್ನು ಪ್ರಾರಂಭಿಸುತ್ತಾಳೆ. ಉಳಿತಾಯ ಮಾಡುತ್ತಾ ಮಾಡುತ್ತಾ ಕೂಡಿಟ್ಟ ಹಣ ಮುನ್ನೂರ ಐವತ್ತು ರೂಪಾಯಿಗಳಾದವು. ಹಣ ಹೆಚ್ಚಾದಂತೆ ಅವಳಿಗೆ ತನ್ನ ಅಕ್ಕ ಪಕ್ಕದವರ ಮೇಲೆ ಅನುಮಾನ. ಅದಕ್ಕಾಗಿ ಅವಳು ಆ ಹಣದಿಂದ ಚಿನ್ನ ಖರೀದಿಸಲು ಆಚಾರರ ಬಳಿ ಹೋಗಿ, ಚರ್ಚಿಸಿ ಅವರು ಹೇಳಿದಂತೆ ಚಿನ್ನದ ಖರೀದಿಯನ್ನು ಕೈಬಿಡುತ್ತಾಳೆ. ಎಲ್ಲರನ್ನು ಒಂದೇ ರೀತಿ ಕಾಣುವುದು ಅವರ ಸಮಾನತೆಯ ದೃಷ್ಟಿಯನ್ನು ತಿಳಿಸುತ್ತದೆ. ರೊಟ್ಟಿ ಪಾತುಮ್ಮ ಹೇಳುವ ಈ ಮಾತು ಆಚಾರ್ರ ಮೇಲೆ ಗೌರವ ವಿಶ್ವಾಸವನ್ನು ಇಟ್ಟಿರುವುದು ತೋರುತ್ತದೆ.

"ತನಗೆ ತನ್ನ ಜಾತಿ ಬಾಂಧವರಿಗಿಂತಲೂ ಆಚಾರ್ರ ಕಟ್ಟೆಯ ತಿಜೋರಿಯ ಬಗ್ಗೆಯ ಹೆಚ್ಚು ವಿಶ್ವಾಸ" (ಪು.೮) ನಂತರ ರೊಟ್ಟಿ ಪಾತುಮ್ಮ ವಾರದಲ್ಲಿನ ಉಳಿತಾಯವನ್ನು ಅಂಗಡಿಯಲ್ಲಿ ಯಾರು ಇರುತ್ತಾರೆ ಅವರಿಗೆ ನೀಡಿ ಖಾಸಗಿ ಖಾತೆ ಪುಸ್ತಕದಲ್ಲಿ ದಾಖಲಿಸಿ ಬಿಡುವುದು ಸಾಮಾನ್ಯವಾಯಿತು. ಪಾತುಮ್ಮ ಆಚಾರ್ರಿಗೆ ಆಯುಷ್ಯ ಗಟ್ಟಿಯಾಗಿರುವಂತೆ ದೇವರಲ್ಲಿ ಕೇಳುವುದನ್ನು ನೋಡಿದರೆ ಆ ಧರ್ಮ ಈ ಧರ್ಮ ಎಂಬುದರ ಕಿತ್ತಾಟ ಬಿಟ್ಟು ಮನುಷ್ಯ ಒಳ್ಳೆಯತನಕ್ಕೆ ಹಾಗೂ ದೇವರು ಎಂಬ ಅಮೂರ್ತ ಶಕ್ತಿಯ ಮೇಲೆ ಇರುವ ನಂಬಿಕೆಯನ್ನು ತಿಳಿಸುತ್ತದೆ.

ಚಂದ್ರಣ್ಣ ಮತ್ತು ಕೇಶವರು ಶ್ರೀನಿವಾಸ ಆಚಾರ್‍ರ ಮಕ್ಕಳು. ತಂದೆ ಇಲ್ಲದ ಸಂದರ್ಭದಲ್ಲಿ ಇಬ್ಬರೂ ರೊಟ್ಟಿಯನ್ನೇ ಪಡೆಯುತ್ತಿದ್ದ ಕಾರಣ ಅವರಿಬ್ಬರ ಪರಿಚಯ ಪಾತುಮ್ಮನಿಗೆ ಇತ್ತು. ಈ ಚಂದ್ರಣ್ಣ ಹಠದಿಂದ ಕರಸೇವೆಗೆಂದು ಅಯೋಧ್ಯೆಗೆ ಹೋಗಲಿಲ್ಲ. ರಾಮದಾಸ ಕಿಣಿಯವರ ತಂಡದಿಂದ ಒಬ್ಬನ ಗೈರು ಹಾಜರಿಯಿಂದ ಹೋಗುವ ಅನಿವಾರ್ಯತೆ ಬಂದುದರಿಂದ ಹೋರಡಲು ಸಿದ್ಧನಾಗುತ್ತಾನೆ. ಹೀಗಾಗಿ ಅಯೋಧ್ಯೆಗೆ ಹೋಗುವುದು ಅನಿವಾರ್ಯವಾಯಿತು. ಬಿಸಿ ರಕ್ತದ ಚಂದ್ರಣ್ಣನವರು ಜಾತಿ, ಧರ್ಮದ ಹೆಸರಿನಲ್ಲಿ ಕಟ್ಟಡ ಧ್ವಂಸ ಕೃತ್ಯದಲ್ಲಿ ಭಾಗಿಯಾಗಿರುವುದನ್ನು ಕಾಣಬಹುದು.

ಚಂದ್ರಣ್ಣನನ್ನು ಹುರಿದುಂಬಿಸಿದ ಕಿಣಿಯವರು ಅವನನ್ನು ಬೀಳ್ಕೊಡುತ್ತಾರೆ. ಅಲ್ಲಿ ಅವನು ಪಟ್ಟ ಕಷ್ಟ ಹೇಳತೀರದು. ಮೊದಲು ಕಾಶೀಗೆ ಅನಂತರ ಫೈಜಾವಬಾದಿಗೆ ಕೊನೆಗೆ ದೆಹಲಿಗೆ ತಲುಪುತ್ತಾನೆ. ಅಲ್ಲಿ ಪೂನಾದ ಸದಸ್ಯರಲ್ಲೊಬ್ಬನು ಅರ್ಧಕಿಲೋದಷ್ಟು ತೂಗಬಲ್ಲ ಮಣ್ಣಿನ ಹೆಂಟೆಯೊಂದನ್ನು ನೀಡುತ್ತಾನೆ. ಆ ಸಂದರ್ಭ ಅವನು ಹೇಳಿದ ಮಾತು ಈ ಕೆಳಗಿನಂತಿದೆ.

"ನೀವು ಬೇಸರ ಪಡಬಾರದು, ಯಾರ್‍ಯಾರಿಂದ ಯಾವ್ಯಾವ ಕೆಲಸಗಳನ್ನು ನಿರೀಕ್ಷಿಸಲಾಗಿತ್ತೋ ಅವರೆಲ್ಲರೂ ಅವರವರ ಕೆಲಸಗಳನ್ನು ಸಂಪೂರ್ಣವಾಗಿ ನೆರವೇರಿಸಿದ್ದಾರೆ. ನಿಮ್ಮಿಂದ ನಿರೀಕ್ಷಿಸಲಾಗಿದ್ದ ಕೆಲಸವನ್ನು ನೀವು ಕೂಡಾ ಯಶಸ್ವಿಯಾಗಿ ಪೂರೈಸಿದ್ದೀರಿ. ಈ ಕಲ್ಲಿನ ತುಂಡು ನಿಮಗೆ ಇದು ನಮ್ಮ ವಿಜಯದ ಸಂಕೇತವೆಂದು ತಿಳಿಯಿರಿ" (೧೧೯) ಈ ಮಾತಿನಿಂದ ರೋಮಾಂಚನಗೊಂಡ ಅವನು ಮಾಡಿದ ತಪ್ಪಿಗೆ ಪಶ್ಚಾತ್ತಾಪವಾಗಿ ಅನಂತರ ತಾನು ಮಾಡಿದ್ದು ತಪ್ಪು ಎಂಬುದರ ಅರಿವಾಗುತ್ತದೆ. ಒಂದು ಧಾರ್ಮಿಕ ಸಂಸ್ಥೆಯನ್ನು ಅಥವಾ ಮಸೀದಿಯನ್ನು ಒಡೆಯುವುದು ಕೋಮು ವೈಷಮ್ಯದ ಸಂಕೇತವಾಗಿದೆ. ಮನುಷ್ಯ ಮನುಷ್ಯರ ನಡುವೆ ಸ್ನೇಹ ಬಾಂಧವ್ಯ ಬೆಳೆಯುವುದರ ಬದಲಾಗಿ ಧರ್ಮದ ಹೆಸರಿನಲ್ಲಿ ಅದರ ನಾಶವನ್ನು ಕಾಣಬಹುದು. ಮನುಷ್ಯ ಹುಟ್ಟಿನಿಂದಲೇ ಬಾರದೇ ಅನಂತರ ಪರಿಸರದಿಂದ ಬರುವ ಜಾತಿ ಮನಷ್ಯನನ್ನು ಎಲ್ಲರಿಂದಲೂ ದೂರ ಮಾಡುತ್ತದೆ. ಜಾತಿಯಿಂದಲೆ ಇಷ್ಟೆಲ್ಲ ದ್ವೇಷವನ್ನು ಬೆಳೆಯಲು ಕಾರಣವಾಗಿದೆ.

ಇದು ಚಂದ್ರಣ್ಣ ಯಾವುದೇ ವಿಷಯ ತಿಳಿಯದೇ ಕೇವಲ ಪರಿಸ್ಥಿತಿಯ ಒತ್ತಡಕ್ಕೆ ಮಾಡಿದ ಕೃತ್ಯವಾಗಿದೆ. ಅಲ್ಲಿಂದ ತಂದ ಒಂದು ತುಂಡು ಕಲ್ಲಿನಿಂದ ಚಂದ್ರಣ್ಣನ ಮನಸ್ಥಿತಿಯಲ್ಲಿ ಆದ ಬದಲಾವಣೆಯನ್ನು ಕಾಣಬಹುದು. ಊರಿನಿಂದ ಸನ್ಮಾನವು ಆಯಿತು. ರಾಮಚಂದ್ರ ಕಿಣಿಯವರ

ಧೈರ್ಯ ಪ್ರದರ್ಶನವು ಆಯಿತು. ಮತ್ತೆ ತನ್ನ ವ್ಯವಹಾರದಲ್ಲಿ ತೊಡಗಿದ ಚಂದ್ರಣ್ಣ ಅವರು ಹೇಳಿದಂತೆ ಆಗಾಗೆ ಪತ್ರಿಕೆ ನೋಡುವುದನ್ನು ತಪ್ಪಿಸಲಿಲ್ಲ. ಎಂದಿನಂತೆ ಹಣ ನೀಡಲು ಬರುತ್ತಿದ್ದ ಪಾತುಮ್ಮನನ್ನು ಕಂಡು ಇವಳಿಗೂ ತಾನು ಕರಸೇವೆಗೆ ಹೋದ ವಿಚಾರ ಗೊತ್ತಿರಲಿಲ್ಲ ಎಂಬ ಅನುಮಾನ ಮೂಡುತ್ತದೆ. ಚಂದ್ರಣ್ಣನಿಗೆ ಆ ಒಂದು ಯೋಚನೆಯಿಂದ ರೊಟ್ಟಿ ಪಾತುಮ್ಮಳನ್ನು ಮುಖಾಮುಖಿ ಎದುರಿಸಲು ಸಾಧ್ಯವಾಗಲಿಲ್ಲ. ತಾನು ಮಾಡಿದ್ದು ತಪ್ಪು ಎಂಬ ಭವನೆ ಆತನಲ್ಲಿ ಮನೆ ಮಾಡುತ್ತದೆ. ಆದರೆ ರೊಟ್ಟಿ ಪಾತುಮ್ಮ ಆ ಯಾವುದೇ ವಿಚಾರ ತಿಳಿದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಸಮಾಧಾನ ಪಟ್ಟುಕೊಳ್ಳುತ್ತಾನೆ. ಈ ವಿಚಾರವಾಗಿ ಚಂದ್ರಣ್ಣನ ಅತ್ತಿಗೆಯು ದೇವರ ಮನೆಯಲ್ಲಿದ್ದ ಈ ಕಲ್ಲು ಕಂಡು ಆಡಿದ ಮಾತುಗಳು ಅನ್ಯ ಧರ್ಮದ ಮೇಲಿದ್ದ ಭಾವನೆಯನ್ನು ತಿಳಿಸುತ್ತದೆ.

ಚಂದ್ರಣ್ಣನು, ಅಣ್ಣ ಕೇಶವಚಾರ್ಯನ ಗೆಳೆಯ ಮಾತನಾಡದೇ ಹೋದುದ್ದಕ್ಕೆ ಈ ಕಾರಣವನ್ನೋ ಊಹಿಸುತ್ತಾನೆ. ರೊಟ್ಟಿ ಪಾತುಮ್ಮ ಒಂದು ಮನೆಕಟ್ಟಲು ಹಣ ಕೇಳೀದ್ದಕ್ಕೂ ಇದೇ ಕಾರಣವಿರಬಹುದು ಎಂದು ಊಹಿಸಿ ಇದರಿಂದ ಅಣ್ಣ ಕೇಶವನಿಂದ ಬೈಯಿಸಿಕೊಳ್ಳುತ್ತಾಳೆ. ಚಂದ್ರಣ್ಣನ ಮನಸ್ಸಿನಲ್ಲಿ ಮೂಡಿದ ತಪ್ಪು ಅನುಮಾನದ ಭೂತವಾಗಿ ಬೆಳೆದು ನಿಂತಿರುತ್ತದೆ. ಆದ್ದರಿಂದಾಗಿ ಯಾವುದೇ ಕೆಲಸವನ್ನು ಮಾಡುವಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾ ಹೋಗುತ್ತಾನೆ.

ಕೊನೆಗೆ, ಒಂದು ಅಂತಿಮ ತೀರ್ಮಾನಕ್ಕೆ ಬಂದ ಚಂದ್ರಣ್ಣ ಏನೋ ತಿಳಿದವನಂತೆ ಸೈಕಲ್ ಏರಿ ಹೋರಾಡುತ್ತಾನೆ. ರಾಮದಾಸ ಕಿಣಿಯನ್ನು ಹುಡುಕುತ್ತಾ ಹೋದ, ಅವನಿಗೆ ಅವನು ಸಿಗದೇ ಹೋದಾಗ, ಅವರು ಮನೆಗೆ ಹೋದ ಸಂಗತಿ ತಿಳಿದು ಹೊರಟಾಗ ಗುಡ್ಡೆ ಶಾಲೆಯ ತಿರುವುನಲ್ಲಿದ್ದ ಸರಕಾರಿ ಶಾಲೆಯನ್ನು ನೋಡಿದ ತಕ್ಷಣ ಬಾಲ್ಯದ ನೆನಪು ಮರುಕಳಿಸುತ್ತದೆ. ಅವನು ಬಾಲ್ಯ ನೆನಪಿಗೆ ಬರುವ ಮೂಲಕ ಅವನಲ್ಲಿ ಬೇರೆ ಭಾವನೆ ಬರುತ್ತದೆ. ಮುಸ್ಲಿಮನಾದ ಅವನ ಸ್ನೇಹಿತ ಚಂದ್ರಣ್ಣನನ್ನು ಹಂಗಿಸಿದಂತೆ ಭಾಸವಾಗುತ್ತದೆ. ತನ್ನ ಎಲ್ಲಾ ಹಣ ತೆಗೆದುಕೊಂಡು ಹೋದ ಪಾತುಮ್ಮ ಚಂದ್ರಣ್ಣನ ಬಳಿ ಇದ್ದಂತಹ ಕಲ್ಲನ್ನು ಕೊಡುವಂತೆ ಹೇಳಿರುವುದಾಗಿ ಅವನ ಅಣ್ಣ ತಿಳಿಸಿದ. ಚಂದ್ರಣ್ಣ ಬಾವಿಗೆ ಎಸೆದ ಕಲ್ಲು ನೆನಪಿಗೆ ಬರುತ್ತದೆ. ಆ ಬಾವಿಯಲ್ಲಿಯೇ ಆದ್ರಾಮ ಆತ್ಮಹತ್ಯೆ ಮಾಡಿಕೊಂಡಿದ್ದು. ಅವನ ಧರ್ಮದವನ ಮಸೀದಿಯನ್ನು ಕೆಡವಿದ ಒಂದು ಆ ಕಲ್ಲನ್ನು ಬಾವಿಗೆ ಎಸೆದದ್ದು, ಅದನ್ನು ಮತ್ತೆ ಪಾತುಮ್ಮ ಕೇಳಿದ್ದು ಆ ಕುರಿತು ಅನುಮಾನ ಚಂದ್ರಣ್ಣನಲ್ಲಿ ಉಳಿಯುತ್ತದೆ.

ಇಲ್ಲಿ ಚಂದ್ರಣ್ಣ ಧಾರ್ಮಿಕ ಮೇಲಿನ ದ್ವೇಷದಿಂದಾಗಲಿ, ಅಸೂಯೆದಿಂದಾಗಲಿ ಈ ಕೆಲಸಕ್ಕೆ ಕೈ ಹಾಕಲಿಲ್ಲ. ಇವನು ಇದ್ಯಾವುದರ ಅರ್ಥವನ್ನು ತಿಳಿಯದವನು. ತಾನು ಮಾಡಿದ ಈ ಕೆಲಸ ಸರಿಯೋ ತಪ್ಪೋ ಎಂಬ ಗೊಂದಲ ಚಂದ್ರಣ್ಣನಿಗಿದೆ. ಈ ಯಾವ ವಿಷಯವನ್ನು ಅರಿಯದೇ ಮನೆ ಕಟ್ಟುವಿಕೆಗೆ ಕಲ್ಲನ್ನು ಕೇಳುವುದು ಅವರ ನಡುವೆ ಯಾವುದೇ ದ್ವೇಷ, ವೈಷಮ್ಯ ಇಲ್ಲದೆ ಇರುವುದು ಸೂಚಿಸುತ್ತದೆ. ಅತ್ತೆಯು ಅಯೋಧ್ಯೆಯಲ್ಲಿ ಒಡೆದಿದ್ದು ಮಸೀದಿಯನ್ನು ಅಥವಾ ದೇವಸ್ಥಾನವನ್ನೇ ಎಂಬ ಎರಡು ಪ್ರಶ್ನೆಗಳು ಸಂಶಯವನ್ನು ಇರುವ ಹಾಗೆಯೇ ಉಳಿಸಿರುವಂತೆ ಕಂಡುಬರುತ್ತದೆ. ಆದರೆ ಇಲ್ಲಿ ಎರಡು ಸಮುದಾಯದ ನಡುವೆ ವೈಷಮ್ಯ, ದ್ವೇಷ, ಜಗಳ ಯಾವುದು ಇಲ್ಲದೇ ಧರ್ಮಗಳ ಚಿತ್ರಣವನ್ನು ನೀಡುತ್ತಾರೆ.

'ಕೇಸರಿ, ಬಿಳಿ, ಹಸಿರು, ಮೂರು ಬಣ್ಣ ನಡುವೆ ಚಕ್ರವು' ಕತೆಯಲ್ಲಿ ಖಾದರ್ ಕತೆಯ ನಾಯಕನಂತೆಯೇ ಕಂಡು ಬರುತ್ತಾನೆ. ಕೇಸರಿಯು ತ್ಯಾಗದ, ಬಿಳಿಯು ಶಾಂತಿಯ, ಹಸುರು ಸಮೃದ್ಧಿಯ ಸಂಕೇತವಾಗಿದೆ. ಆ ನಡುವೆ ಬರುವ ಚಕ್ರವು ೨೪ ಗಂಟೆ ಸಂಕೇತವಾಗಿದ್ದೂ, ಅದರಂತೆ ದುಡಿಯಬೇಕು ಎಂಬುದರ ಸೂಚಕವಾಗಿದೆ. ಈ ಮೂರು ಬಣ್ಣವನ್ನು ಸಂಕೇತವಾಗಿ ಈ ಕತೆಯಲ್ಲಿ ಕತೆಗಾರರು ಬಳಸಿಕೊಂಡಿದ್ದಾರೆ. ನಾವೆಲ್ಲರೂ ಒಂದೇ ಎಂಬ ಐಕ್ಯತೆಯ ಭಾವನೆಯನ್ನು ಎಲ್ಲಾ ಧರ್ಮದವರಲ್ಲಿಯೂ ಉಂಟು ಮಾಡುವಂತೆ ಈ ಕತೆಯೂ ಮೂಡಿ ಬಂದಿದೆ. ಅದರಂತೆ ಎಲ್ಲಾ ಪಾತ್ರಗಳು ತಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸಿವೆ ಎಂದೇ ಹೇಳಬಹುದು.

ಖಾದರನೊಂದಿಗೆ ಪ್ರಾರಂಭವಾಗುವ ಈ ಕತೆಯಲ್ಲಿ, ಕಡಿಮೆ ಬೆಲೆಯ ಲುಂಗಿಯನ್ನು ಖರೀದಿಸಿ ಧರಿಸುವ ಇವನು ಮೀನು ವ್ಯಾಪಾರಿಯಾಗಿದ್ದನು. ಬೇರೆಯವರು ಕಡಿಮೆ ಬೆಲೆಯ ಬಟ್ಟೆಯನ್ನು ಖರೀದಿಸಿದರೆ ಅದನ್ನು ವಿಚಾರಿಸಿ ಅದಕ್ಕಿಂತಲೂ ಕಡಿಮೆ ಬೆಲೆಯ ವಸ್ತುವನ್ನು ಖರೀದಿಸುವುದು ಇವನ ಕೆಲಸ. ಆ ಊರಿನ ಬಟ್ಟೆ ವ್ಯಾಪಾರಿಗಳಾದ 'ಗಣೇಶ ಕ್ಲಾತ್ ಎಂಪೋರಿಯಂ'ನ ಶಂಕರಭಟ್ಟರು ಹಾಗೂ ರಹಮತ್ ಕ್ಲಾತ್ ಸ್ಟೋರ್‌ನಲ್ಲಿ ಸಲೇಮಾನ್ ಸಾಹುಕಾರರು ಹಬ್ಬದ ಸಮಯದಲ್ಲಿನ ವ್ಯಾಪಾರದಲ್ಲಿ ರಿಯಾಯಿತಿ ದರದ ಮಾರಾಟಕ್ಕಾಗಿ ಜಗಳ ಮನಸ್ತಾಪ ಯಾವಾಗಲೂ ಇರುತ್ತಿತ್ತು. ಆದರೆ ಇದನ್ನು ಉಳಿದಂತೆ ಅವರು ಉತ್ತಮ ಸ್ನೇಹಿತರು.

ಖಾದರ್ 'ರಹಮತ್ ಕ್ಲಾತ್ ಸ್ಟೋರ್'ನಲ್ಲಿ ಖರೀದಿಸಿದಂತಹ ಕೇಸರಿ ಲುಂಗಿಯನ್ನು ಉಟ್ಟು ಜುಮ್ಮಾ ನಮಾಜಿಗೆ ಹೋದಾಗ ಅಲ್ಲಿ ಸೇರಿದವರಿಗೆಲ್ಲಾ ಇರುಸುಮುರುಸು ಆಗುತ್ತದೆ ಎಂಬುದನ್ನು ಅರಿಯದೇ ಹೋಗುತ್ತಾನೆ. ಕಾರಣ ಅದು ರಾಮಸೇನೆಯವರ ವಸ್ತ್ರ ಕೇಸರಿಬಣ್ಣ ಆಗಿದ್ದು, ಇದು

ಯಾವುದನ್ನು ತಿಳಿಯದ ಅವನು ಎಂದಿನಂತೆ ನಮಾಜಿಗೆ ಹೋಗುತ್ತಾನೆ. ಆದರೆ ಯಾರು ಅದನ್ನು ಪ್ರಶ್ನಿಸುವ ಧೈರ್ಯ ಮಾಡುವುದಿಲ್ಲ. ಮಸೀದಿಯ ಪಕ್ಕದ 'ಮದರಸ'ದಲ್ಲಿ ಸಭೆ ಕೂಡುತ್ತಾರೆ. ಇಲ್ಲಿ ರಾಮ ಸೇನೆಯಿಂದ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದುದನ್ನು ಇಲ್ಲಿ ಸೂಕ್ಷ್ಮವಾಗಿ ಕತೆಗಾರರು ಹೇಳಿದ್ದಾರೆ. ಇಲ್ಲಿ ಪ್ರಸ್ತಾಪವಾಗಿರುವ ಕೇಸರಿ ಬಣ್ಣಕ್ಕೆ ಪ್ರಾಮುಖ್ಯತೆ ನೀಡಿದ್ದಾರೆಯೇ ಹೊರತು ಮಾನ ಮುಚ್ಚಲು ಧರಿಸಿದ ಬಟ್ಟೆಗಲ್ಲ ಎನ್ನುವುದನ್ನು ತಿಳಿ ಹೇಳಿದ್ದಾರೆ.

ವರುಷವೊಂದರ ಹಿಂದೆ ನಡೆದ ಘಟನೆಯಿಂದಾಗಿ ಈ ಬಣ್ಣ ಹಿಂದು ಧರ್ಮದವರಾದ ರಾಮಸೇನೆಯವರನ್ನು ಸೂಚಿಸುವ ಸಂಕೇತವಾಗಿದೆ. ಊರಿನ ಸುಬ್ಬಣ್ಣ ಮತ್ತು ತ್ಯಾಂಪಣ್ಣನವರ ಮಕ್ಕಳ ಮದುವೆಯಿಂದ ಈ ಬಣ್ಣ ಇನ್ನೂ ಹೆಚ್ಚು ಮಹತ್ವ ಪಡೆಯಿತು. ಇವರಿಬ್ಬರ ನಡುವಿನ ಪೈಪೋಟಿಯಿಂದಾಗಿ ಸುಬ್ಬಣ್ಣ ಶೆಟ್ಟರು ತಮ್ಮ ಮಗಳ ಮದುವೆಯನ್ನು ಮನೆ ಮುಂದೆ ಮಾಡುತ್ತಾರೆ. ಮಂಗಳೂರಿನಿಂದ ಬಂದ ಅಡುಗೆಯವರು ಧರಿಸಿದ ಸಮವಸ್ತ್ರ ಎಲ್ಲರ ಗಮನ ಸೆಳೆದಿದ್ದು ಇಲ್ಲಿ ವಿಶೇಷವಾಗಿತ್ತು. ಇದರಿಂದ ಅವರಲ್ಲಿದ್ದ ಶಿಸ್ತುಬದ್ಧ ಹೊಂದಾಣಿಕೆ ಎಲ್ಲರನ್ನು ಆಕರ್ಷಿಸಿತ್ತು.

ಇದರಿಂದಾಗಿ ಶ್ರೀಗುರು ರಾಘವೇಂದ್ರ ಭಜನಾ ಮಂಡಳಿಯ ಸ್ಥಾಪಕ ಕಾರ್ಯದರ್ಶಿಯಾಗಿದ್ದಂತಹ ಟಿ.ಆರ್. ರಾಯರ ಮದುವೆಯಲ್ಲಿ ಊಟದವರು ಧರಿಸಿದ್ದಂತ ಕೇಸರಿ ಬಣ್ಣದ ಅಡ್ಡ ಮುಂಡು, ಬಿಳಿಬಣ್ಣದ ಅರೆತೋಳಿನ ಸಮವಸ್ತ್ರ ಅಂಗಿ, ಕೇಸರಿ ರುಮಾಲುಗಳನ್ನು ಶಾಲಿನಂತೆ ಕೊರಳ ಸುತ್ತ ಹಾಕಿಕೊಂಡಿರುವ ಇವರ ಸಮವಸ್ತ್ರವೇ ಆಗುವಂತೆ ನಿರ್ಧರಿಸಿ ಮಂಗಳೂರಿನಿಂದ ರುಮಾಲುಗಳನ್ನು ತರಿಸಿ ಮೊದಲು ಬಂದವರಿಗೆ ಉಚಿತವಾಗಿ ವಿತರಣೆ ಮಾಡುತ್ತಾರೆ.

ಈ ಮದುವೆಯ ಘಟನೆಯ ನಂತರ ಖಾದರ್ ಕೇಸರಿ ಲುಂಗಿಯನ್ನು ಉಟ್ಟು ಹೋದದ್ದು ಆ ಒಂದು ಸಮುದಾಯದವರಿಗೆ ತಪ್ಪಾಗಿ ಕಂಡಿದ್ದು ಸಹಜ. ನಂತರ ಆ ಒಂದು ಊರಿನ ಪರಿಸ್ಥಿತಿಯೇ ಬದಲಾದದ್ದನ್ನು ನಾವು ಇಲ್ಲಿ ಗುರುತಿಸಬಹುದು. ಐಕ್ಯತೆಯ, ಸಮೃದ್ಧಿಯ, ಶಾಂತಿಯ ಹಾಗೂ ತ್ಯಾಗದ ಸಂಕೇತವಾಗಿದ್ದಂತಹ ಈ ಎಲ್ಲಾ ಬಣ್ಣಗಳು ಧರ್ಮದ ಸಂಕೇತವಾಗಿದ್ದು ಒಂದು ವಿಪರ್ಯಾಸವಾಗಿ ಕಾಣುತ್ತದೆ. ಬಣ್ಣವನ್ನು ಜಾತಿ, ಧರ್ಮ ಸೂಚಕವಾಗಿ ಬಳಸುವುದನ್ನು ಇಲ್ಲಿ ತಪ್ಪು ಎಂದು ಹೇಳಬಹುದು. ಯಾವುದೇ ಬಣ್ಣ ಸಮುದಾಯದ ಸೂಚಕವಾಗಬಾರದು.

'ರಹಮತ್ ಕ್ಲಾತ್ ಸ್ಟೋರ್'ನ ಮಾಲೀಕರೋ ಹಾಗೆ ಜಮಾತ್ ಅಧ್ಯಕ್ಷರು ಆಗಿರುವ ಸುಲೇಮಾನ್‌ರವರು ತಮ್ಮ ವ್ಯಾಪಾರ ತಂತ್ರದೊಂದಿಗೆ ಎಲ್ಲಾ ಬಣ್ಣ ಮಾರಾಟ ಯೋಗ್ಯವಾದುದು

ಎನ್ನುತ್ತಾರೆ. ಆನಂತರ ಕಡಿಮೆ ಬೆಲೆ ಸಿಕ್ಕ ಹಸಿರು ಲುಂಗಿ ಎಲ್ಲಾ ಮನೆಯ ಮುಂದೆ ಬಿದ್ದುದನ್ನು ಕಾಣಬಹುದು. ಇಲ್ಲಿ ಜಗಳವಿಲ್ಲ, ಯುದ್ಧವಿಲ್ಲ, ಬರಿ ಮೌನ ವಿರೋಧ. ಅವರವರ ಮನೆಯ ಲೈಟುಪೋಲುಗಳಲ್ಲಿ ಹಾರಾಡುತ್ತಿರುವ ಅವರವರ ಧರ್ಮದ ಸಾಂಕೇತಿಕ ಬಣ್ಣವನ್ನು ಕಾಣಬಹುದು. "ಗಣೇಶ್ ಕ್ಲಾತ್ ಎಂಪೋರಿಯಮ್"ನ ಜವುಳಿಗಾಗಿ ಕರಪತ್ರವನ್ನು ಹೊರಡಿಸಿದ್ದು ಇಲ್ಲಿ ವಿಶೇಷ.

ವ್ಯಾಪರ ಭರಾಟೆಯಿಂದ ಕಂಗಾಲಾದಾ ಸುಲೆಮಾನ್ ಸಾಹುಕಾರರು ವ್ಯಾಪಾರ ತಂತ್ರವನ್ನು ಪ್ರಯೋಗ ಮಾಡುತ್ತಾರೆ. ಜಮಾತಿನ ಪ್ರತಿಯೊಬ್ಬ ಹಿರಿಯ ಸದಸ್ಯನಿಂದ ಮುನ್ನೂರು ರೂಪಾಯಿ ಪಡೆದು ಈ ಸಭೆಯ ಫಲವಾಗಿ ಮುಂದಿನ ಜುಮ್ಮಾ ನಮಾಜಿಗೆ ಬಂದವರಿಗೆಲ್ಲ ಒಂದೊಂದು ಜೊತೆ ಹಸಿರು ಲುಂಗಿ ಹಾಗು ರುಮಾಲು ಉಚಿತವಾಗಿ ನೀಡುತ್ತಾರೆ. ವ್ಯಾಪಾರ ತಂತ್ರದೊಂದಿಗೆ ಧರ್ಮವನ್ನು ತಳುಕು ಹಾಕಿರುವುದನ್ನು ಕಾಣಬಹುದು. ಕೇಸರಿ ಬಣ್ಣದ ಲುಂಗಿಯನ್ನು ಪರಿಪಾಠ ಮಾಡಿಕೊಂಡಿದ ಖಾದರ್, ನಂತರ ಉಚಿತವಾಗಿ ಸಿಕ್ಕ ಹಸಿರು ಬಣ್ಣದ ಲುಂಗಿಯನ್ನು ಅಭ್ಯಾಸ ಮಾಡಿಕೊಳ್ಳುತ್ತಾನೆ. ಆದರೆ ಅದೇ ಊರಿನ ಮುದುಕ ಅದಂ ಖಾನರು ನನಗೆ ಆಸಕ್ತಿ ಇಲ್ಲವೆಂದು ಅದನ್ನು ನಿರಾಕರಿಸುತ್ತಾರೆ. ಇದರಿಂದ ಊರಿನಲ್ಲಿ ಮನುಷ್ಯ ಮಾತನಾಡದೇ ಧರ್ಮ ಸೂಚಕವಾದ ಬಣ್ಣವೇ ಮಾತನಾಡುವಂತಾಯಿತು. ಆದರೆ ಆ ಹಿರಿಯರು ಹೇಳಿದ ಮಾತಿನ ಅರ್ಥ ಅಲ್ಲಿ ಇರುವ ಯಾರಿಗೂ ಅರ್ಥವಾಗದೆ ತಮ್ಮ ಕೆಲಸವನ್ನು ಮುಂದುವರೆಸುತ್ತಾರೆ. ಈ ಎಲ್ಲಾ ಸಂದರ್ಭ ಸನ್ನಿವೇಶದಿಂದ ಏನು ಅರಿಯದ ಮಕ್ಕಳ ಮೇಲೆ ಇದರ ಪರಿಣಾಮವಾಗಬಹುದು.

ಮುಂದೆ ಖಾದರ್ ತನ್ನ ಮೂರೆಲೆ ಬಳಗದೊಂದಿಗೆ ಸೇರಿ ಇಸ್ಪೀಟು ಆಡುತ್ತಿದ್ದನು. ಬಣ್ಣ ಜಗಳದಿಂದಾಗಿ ಊರಿಗೆ ಬಂದ ಪೋಲಿಸ್‌ರಿಗೆ ಹೆದರಿ ಈ ಬಳಗವು ದೂರದಿಂದಲೇ ಎಲ್ಲವನ್ನೂ ವೀಕ್ಷಿಸುತ್ತಾರೆ. ಅವರು ಹೊರಟ ನಂತರ ಖಾದರ್ ಸಭೆಯಲ್ಲಿ ಪಂಡಿತರು ಹೇಳಿದ ಎಲ್ಲಾ ಮಾತನ್ನು ಸ್ನೇಹಿತನ ಮುಂದೆ ಇಡುವುದರ ಮೂಲಕ ಸಹಾಯ ಕೇಳಿ ಅವರಿಂದ ಬೆಂಬಲ ಸಿಕ್ಕ ನಂತರ ಮುಂದುವರೆಯುತ್ತಾನೆ. ಹೀಗೆ ಸಜ್ಜಾದ ಯುವ ಪಡೆಯು ಧರ್ಮದ ಹೆಸರಿನಲ್ಲಿ, ಊರಿನಲ್ಲಿ ಉಂಟಾಗಿರುವ ಆಶಾಂತಿ ನಿವಾರಿಸಲು ಮುಂದಾಗುತ್ತಾರೆ. ಪಂಡಿತ ಪರಮೇಶ್ವರರ ಶಾಸ್ತ್ರಿಗಳ ಬಗೆಗೆ ಇದ್ದ ಅಭಿಪ್ರಾಯವನ್ನು ಪ್ರಸ್ತಾಪಿಸುತ್ತಾರೆ. ಊರಿನ ಯಾವುದೇ ಶುಭ ಕಾರ್ಯಕ್ಕೂ ಅವರು ಬೇಕು ಅಂತಹ ಭವ್ಯ ವ್ಯಕ್ತಿತ್ವ ಅವರದ್ದು. ಪಂಡಿತರು ಹೇಳಿದ್ದಂತೆ ಬಿಳಿ ಬಾವುಟವನ್ನು ಹಾರಿಸುವುದಕ್ಕೆ ಒಪ್ಪದ ಆದ್ರಾಮ ಮಸೀದಿಗೆ ಹೋಗುವಾಗ ಕೇಸರಿ ಲುಂಗಿಯನ್ನು ಉಡುವಂತೆ ಹೇಳಿದ್ದು

ಅನುಮಾನಕ್ಕೆ ಕಾರಣವಾಗಿ, ಸೈಕಲ್ ಷಾಪಿನ ಆದಂ ಖಾನ್‌ರನ್ನು ಕೇಳಲು ನಿರ್ಧರಿಸುತ್ತಾರೆ. ಖಾನರ ಮನೆಗೆ ಪಂಡಿತರು ಹೋಗಿದ್ದು ರಾಯರ ಅನುಮಾನಕ್ಕೆ ಕಾರಣವಾಗುತ್ತದೆ. ಆದರೆ ಅದರ ಹಿಂದಿರುವ ಉದ್ದೇಶವನ್ನು ಅರಿತ ನಂತರ ಎಲ್ಲಾ ಪಂಡಿತರು ಹೇಳಿದ್ದಂತೆ ಕೇಳಲು ಮುಂದಾದ್ದು ಅವರಲ್ಲಿನ ಐಕ್ಯತೆಯ ಭಾವನೆ ಸೂಚಿಸುತ್ತದೆ.

ಇದೆಲ್ಲವನ್ನು ತಿಳಿದ ರಾಯರು ಮನಸ್ಸಿನಲ್ಲಿ ಗೊಂದಲಕ್ಕೆ ಒಳಗಾಗುತ್ತಾರೆ. ಸಿದ್ದಪ್ಪನೊಂದಿಗೆ ತನ್ನ ಎಲ್ಲಾ ಅನುಮಾನವನ್ನು ಹಂಚಿಕೊಳ್ಳುವ ಮೂಲಕ ಅವನ ಅಭಿಪ್ರಾಯವನ್ನು ತಿಳಿಯುತ್ತಾರೆ. ಇವರೊಂದಿಗೆ ಗೋಪಾಲಕೃಷ್ಣ ಕಾಮತ್‌ರು ಭಾಗಿಯಾಗಿರುವುದು ತಿಳಿಯುತ್ತದೆ. ಕೊನೆಗೆ ಸಿದ್ದಪ್ಪನವರು ತಮ್ಮ ಭಿನ್ನಾಭಿಪ್ರಾಯವನ್ನು ಬಿಟ್ಟು ಅವರೊಂದಿಗೆ ಸೇರಿರುವುದನ್ನು ಕಾಣಬಹುದು. ಗುಡ್ಡೆಶಾಲೆಯ ಸ್ಕೌಟ್‌ನ್ನು ಪಂಡಿತರು ಹಮ್ಮಿಕೊಂಡಿದ್ದ ಸಭೆಗೆ ತಾನೇ ಚಪ್ಪರ ಹಾಕಿಕೊಡುತ್ತೇವೆಂದು ಹೇಳುವ ಮೂಲಕ ಐಕ್ಯತೆಯನ್ನು ಸಾರುತ್ತಾರೆ.

ಒಟ್ಟಾರೆ, ಈ ಕತೆಯ ಮೂಲಕ ಬೊಳುವಾರರು ಎರಡು ಸಮುದಾಯದ ನಡುವೆ ಇರುವ ದ್ವೇಷ, ಕೋಮುವೈಷಮ್ಯಕ್ಕಿಂತ ಮುಸ್ಲಿಂ ಸಮುದಾಯದ ಒಳಗೆ ಇರುವ ದ್ವೇಷ, ಮೇಲು–ಕೀಳು, ಶ್ರೀಮಂತ–ಬಡವ ಎನ್ನುವ ಭಿನ್ನಾಭಿಪ್ರಾಯವನ್ನು ತೋರಿದ್ದಾರೆ. ಎರಡು ಧರ್ಮದವರು ತಮ್ಮೊಳಗಿನ ವೈಮನಸ್ಸನ್ನು ಬಿಟ್ಟು ಸಮಾಜದಲ್ಲಿ ನಾವೆಲ್ಲರೂ ಒಂದಾಗಿ ಬಾಳಬೇಕು ಎಂಬುದನ್ನು ತಿಳಿಸಿದ್ದಾರೆ. ಅಬ್ದುಲ್ಲ ಬ್ಯಾರಿಯ ಮಗನ ಮದುವೆಗೆ ಚಪ್ಪರ ಹಾಕಲಿಲ್ಲ ಎಂಬ ಬೇಸರವನ್ನು ಮರೆತು ಸುಲೇಮಾನ್ ಸಾಹುಕಾರರ ಆಮಂತ್ರಣಕ್ಕೆ ಗೌರವ ಕೊಟ್ಟು ಹೋಗುತ್ತಾನೆ. ಎಲ್ಲಾ ಕಳೆದುಕೊಂಡವರಂತೆ ಕಂಡು ಬಂದ ಟಿ. ಆರ್. ರಾಯರನ್ನು ಬಿಟ್ಟು ಹೋಗುವುದಾಗಿ ತಿಳಿಸಿದಾಗ ಯಾವುದೇ ಐಕ್ಯತೆ ಮನೋಭಾವವಿಲ್ಲದ ಧರ್ಮಕ್ಕೆ ಬೆಲೆ ಕೊಡುವ ವ್ಯಕ್ತಿಯನ್ನು ನಂಬಿ ಪ್ರಯೋಜನವಿಲ್ಲ ಎಂದು ತಿಳಿದು ಎಲ್ಲಾರೊಡನೆ ಏಕಮತೀಯನಾಗಿ ಬಾಳುವುದನ್ನು ಇಷ್ಟಪಡುತ್ತಾರೆ. ಪ್ರಕೃತಿಯ ಕೊಡುಗೆಯಾದ ಬಣ್ಣಗಳಿಗೆ ಜಾತಿ ಸೂಚಕ, ಧರ್ಮ ಸೂಚಕವಾಗಿ ಬಳಸುವುದನ್ನು ವಿರೋಧಿಸಿದ್ದಾರೆ. ಧರ್ಮವನ್ನು ನಂಬಿದ ವ್ಯಕ್ತಿ ಸಮಾಜವನ್ನು ಯಾವ ದೃಷ್ಟಿಯಲ್ಲಿ ಕಾಣುತ್ತಾರೆ. ಅದರಿಂದ ಆಗುವ ಪ್ರಯೋಜನವೇನು ಎಂಬುದನ್ನು ಹೇಳುತ್ತಾರೆ. ಆ ಮನೋಧರ್ಮದ ವ್ಯಕ್ತಿ ತನ್ನ ಒಳಿತನ್ನು ಬಯಸುತ್ತಾನೆ. ವಿನಃ ಅನ್ಯರ ಒಳಿತಲ್ಲ ಎಂಬುದು ಕಂಡುಬರುತ್ತದೆ. ಮೇಲ್ನೋಟಕ್ಕೆ ಐಕ್ಯತೆಯಂತೆ ಕಾಣುವ ಮುಸ್ಲಿಂ ಧರ್ಮದಲ್ಲಿಯೂ ಕೂಡ ಒಳಗೊಳಗೆ ಭಿನ್ನತೆಯಿರುವುದನ್ನು ಸೂಕ್ಷ್ಮವಾಗಿ ತಿಳಿಸಲು ಕತೆಗಾರರು ಯತ್ನಿಸಿದ್ದಾರೆ.

'ಮೀನು ಮಾರುವವನು' ಈ ಕತೆಯಲ್ಲಿ ರಜಾಕ್ ಮತ್ತು ಸುಬ್ರಾಯ ಜೋಯಿಸರ ನಡುವೆ ಸ್ನೇಹ, ಪ್ರೀತಿ ಕಾಳಜಿಗಳನ್ನು ಕಾಣಬಹುದು. ರಜಾಕ್ ಮತ್ತು ಜೋಯಿಸರು ಮೊದಲಿನಿಂದಲೂ ಪರಿಚಯಸ್ಥರು. ಆದ್ರಾಮ ಬ್ಯಾರಿಯ ಸಲಹೆಯಂತೆ ಜೋಯಿಸರ ಮನೆಗೆ ಬಂದ ರಜಾಕ್‌ನನ್ನು ಕಂಡು ಜೋಯಿಸರಿಗೆ ಇವನು ಅವರ ಸ್ನೇಹಿತನೆಂದು ತಿಳಿದಾಗ ಸಂತೊಷಪಡುತ್ತಾರೆ. ಅದರಂತೆಯೇ ಅವರು ಯಾವ ಸಂದರ್ಭದಲ್ಲಿ ನುಡಿದಂತೆ ನಡೆಯುವರೇ ಹೊರೆತು ಸುಳ್ಳು ಹೇಳುವುದಿಲ್ಲ. ಆದರೆ ಈ ಯಾವುದನ್ನು ನಂಬದ ಇವನು, ಅವರ ಮಾತನ್ನು ಕೇಳದೇ ಹೋಗುತ್ತಾನೆ.

ಮೀನು ವ್ಯಾಪಾರಿಯಾಗಿದ್ದ ಅವನಿಗೆ ಕೆಲಸದಲ್ಲಿದ್ದ ಶ್ರದ್ಧೆಯನ್ನು ತಿಳಿಸಿದ್ದಾರೆ. ಕಟ್ಟುನಿಟ್ಟಿನ ಸಮಯ ನಿಷ್ಠೆಯಿಂದಾಗಿ "ರೇಡಿಯೋ ಟೈಂ ರಜಾಕ್" ಎಂದೇ ಕರೆಯುತ್ತಿದ್ದರು.ಜೋಯಿಸರು ದೇವಸ್ಥಾನಗಳಲ್ಲಿ ಪೂಜೆಯ ಸಮಯದಲ್ಲಿ ಭಕ್ತಿ ಮತ್ತು ಆದರವನ್ನು ಕುರಿತು ಹೇಳುವಾಗ ರಜಾಕ್‌ನನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವನನ್ನೇ ಉದಾಹರಣೆಯಾಗಿ ಹೇಳುತ್ತಿದ್ದರು. ರಜಾಕನು ವಾರಕ್ಕೊಂದು ದಿನದಲ್ಲಿ ಅವನು ಮೀನಿನ ವ್ಯಾಪಾರ ಬಿಟ್ಟು ವಿಲಾಸಿ ಜೀವನ ನಡೆಸುತ್ತಿದ್ದ. ಆದರೆ ಯಾರ ಜೊತೆಗೂ ಹೆಚ್ಚು ಮಾತನಾಡುವ ಅಭ್ಯಾಸವಿರಲಿಲ್ಲ. ಜೋಯಿಸರ ಹೆಂಡತಿಗೂ ಅವನ ಮೇಲೆ ಅಷ್ಟೇ ಪ್ರೀತಿ ವಿಶ್ವಾಸ. ಈ ಮೂಲಕ ಎರಡೂ ಸಮುದಾಯಗಳ ನಡುವಿನ ಆತ್ಮೀಯತೆಯನ್ನು ಕಾಣಬಹುದು.

ಜೋಯಿಸರ ಹೆಂಡತಿ ಮತ್ತು ರಜಾಕ್ ತಾಯಿಯು ಒಟ್ಟಿಗೆ ಮದುವೆಯಾದವರು. ತಾಯಿಯು ಸತ್ತ ನಂತರ ರಜಾಕ್ ಯಾರೊಡನೆ ಮಾತು ಆಡುತ್ತಿರಲಿಲ್ಲ. ಹಾಗೇ ಮಾತನಾಡಿದರೆ ಅದು ಆತನ ವ್ಯಾಪಾರ ಬಗ್ಗೆ. ತುಂಬಾ ಚುರುಕಿನ ಈ ರಜಾಕ್ ಬೇರೆಯವರ ವ್ಯಾಪಾರವನ್ನು ನೋಡಿಯೇ ಕಲಿತವನು. ಹೀಗೆ ಸಂಪಾದಿಸಿದ ಹಣದಿಂದ ಸೆಕೆಂಡ್ ಹ್ಯಾಂಡ್ ಅಂಬಾಸಿಡರ್ ಖರೀದಿಸುತ್ತಾನೆ. ರಜಾಕ್ ಕಾರು ಖರೀದಿಸಿ ಮೂರು ತಿಂಗಳ ನಂತರ ಆಕ್ಸಿಂಡೆಂಟ್ ಆಗುತ್ತದೆ ಎಂದು ಜೋಯಿಸರು ತಿಳಿಸಿರುತ್ತಾರೆ. ನಾರಾಯಣ ಪ್ರಭುಗಳು ಅದೇ ಊರಿನ ಅಂಚೆ ಕಛೇರಿಯಲ್ಲಿ ಸಬ್ ಪೋಸ್ಟು ಮಾಸ್ಟರ್ ಆಗಿರುವವರು.ಅವರು ತಮ್ಮ ಧರ್ಮದಲ್ಲಿ ಗಾಢವಾದ ನಂಬಿಕೆಯುಳ್ಳವರು. ಹಾಗೆಯೇ ಇವರು ಸುಬ್ರಾಯರ ಜ್ಯೋತಿಷ್ಯದಲ್ಲಿ ಅಚಲ ನಂಬಿಕೆಯುಳ್ಳವರು. ಧರ್ಮ ಮತ್ತು ದೇವರಲ್ಲಿ ಅಚಲ ನಂಬಿಕೆ ಇರುವ ಅವರು ಮುಸ್ಲಿಂ ಸಮುದಾಯದ ಹುಡುಗನೊಬ್ಬನ ಉದಾಹರಣೆಯನ್ನು ಹೇಳಿದ್ದಕ್ಕೆ ಕಿರಿಕಿರಿಗೊಳ್ಳುತ್ತಾರೆ. ಈ ಪ್ರಭುಗಳೇ ರಜಾಕ್ ಆಕ್ಸಿಂಡೆಂಟ್ ಆದ ಸುದ್ದಿಯನ್ನು ತಿಳಿಸುತ್ತಾರೆ ಈ ವಿಷಯವನ್ನು ತಿಳಿದ ಜ್ಯೋತಿಷ್ಯರು ಕುಸಿದು ಕುಳಿತುಬಿಡುತ್ತಾರೆ. ಇಲ್ಲಿ ಜೋಯಿಸರು ಶಾಕ್ ಆದದ್ದು

ತನ್ನ ಜ್ಯೋತಿಷ್ಯ ನಿಜವಾಯಿತೋ ಎಂದೋ ಅಥವಾ ರಜಾಕ್ ಮೇಲಿನ ಪ್ರೀತಿಯಿಂದಲೋ ಎಂಬುದು ಹೇಳುವುದು ಸಾಧ್ಯವಿಲ್ಲ.

ಪ್ರಭುಗಳು ಎರಡು ಸಮುದಾಯದ ನಡುವೆ ಇರುವ ವ್ಯತ್ಯಾಸ ಸೂಚಿಸುತ್ತಾರೆ. ಆದರೆ ಎರಡು ಒಂದೇ ಎನ್ನುವಂತೆಯೂ ಹೇಳುತ್ತಾರೆ. ಮತ್ತೆ ಜೋಯಿಸರ ಮನೆಗೆ ಹೋಗಲು ಯೋಚಿಸುವ ಅವರು ಒಬ್ಬರೇ ಹೋಗದೇ ತಮ್ಮೊಂದಿಗೆ ಅನಂತ ಭಟ್ಟ ಮತ್ತು ಆದ್ರಾಮ ಬ್ಯಾರಿಯನ್ನು ಕರೆದುಕೊಂಡು ಹೋಗುತ್ತಾರೆ. ಶಾಕ್‌ನಿಂದಾಗಿ ಜೋಯಿಸರು ಮಾತನಾಡದೆ ಸ್ಥಬ್ದರಾಗುತ್ತಾರೆ. ಆದರೆ ರಜಾಕ್ ಮಾತ್ರ ಎಂದಿನಂತೆ ಅವನ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾನೆ. ಈ ಕಥೆಯು ತಿಳಿಸುವುದೆನೆಂದರೆ ಮನುಷ್ಯ ದೇವರು. ಧರ್ಮ, ಜ್ಯೋತಿಷದ ಮೇಲಿನ ಅತಿಯಾದ ನಂಬಿಕೆಯ ಪರಿಣಾಮವನ್ನು ತೋರಿಸಿದ್ದಾರೆ. ಜ್ಯೋತಿಷದಲ್ಲಿ ನಂಬಿಕೆ ಇಲ್ಲದ ರಜಾಕ್ ಅಪಘಾತವಾದರೂ ಮತ್ತೆ ಎಂದಿನಂತೆ ತನ್ನ ಕೆಲಸದಲ್ಲಿ ತೊಡಗುತ್ತಾನೆ. ಆದರೆ ಸುಬ್ರಾಯರು ಜ್ಯೋತಿಷ್ಯ ಎಂಬ ಮೂಢನಂಬಿಕೆಯಿಂದ ಮಾನಸಿಕ ಅಸ್ವಸ್ಥತೆಗೆ ಒಳಗಾಗುತ್ತಾರೆ. ಧರ್ಮ-ದೇವರು ಮೇಲಿನ ಅತಿಯಾದ ನಂಬಿಕೆಯನ್ನು ಹೊಂದಿದ್ದ ಮತ್ತೊಬ್ಬ ವ್ಯಕ್ತಿ ಪ್ರಭುಗಳನ್ನು ಸಹ ಇಲ್ಲಿ ಹೆಸರಿಸಬಹುದು.

'ಓದು' ಈ ಕಥೆಯಲ್ಲಿ ವಿದ್ಯೆ ಎಂಬ ಅಸ್ತ್ರದಿಂದ ಎರಡು ಸಮುದಾಯಗಳ ನಡುವಿನ ಭಿನ್ನಮತವನ್ನು ಸರಿಪಡಿಸುವ ಪ್ರಯತ್ನವನ್ನು ಕಾಣಬಹುದು. ಇದರಲ್ಲಿ ಶ್ಯಾನುಭೋಗ ಸೀತರಾಮ, ಸಿದ್ದಣ್ಣನವರು ಹಿಂದೆ ಇದ್ದಂತೆ ಇಲ್ಲವೆಂಬುದು ಅವರಲ್ಲಾದ ಬದಲವಣೆಯನ್ನು ಸೂಚಿಸುತ್ತದೆ. ಇದೇ ಊರಿಗೆ ವರ್ಗವಾಗಿ ಬಂದ ನಾರಾಯಣಭಟ್ಟರು ಯಾರಿಗೂ ಬೇಡವಾಗಿದ್ದ ಗುಡ್ಡೆ ಶಾಲೆಯನ್ನು ಕೇವಲ ನಾಲ್ಕೈದು ತಿಂಗಳ ಅವಧಿಯಲ್ಲೇ ಊರವರ ಮನೆಮಾತಾಗಿ ಬದಲಾಯಿಸಿದ್ದು ಅವರ ಬುದ್ಧಿವಂತಿಕೆಯನ್ನು ತಿಳಿಸುತ್ತಿದೆ. ಶ್ಯಾನುಭೋಗರ ಹೆಂಡತಿಯು ಅದೇ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರಾದರೂ ಅವರಲ್ಲಿ ಬದಲಾವಣೆಯನ್ನು ತಂದವರು ಇವರೇ. ಅವರ ತಂದೆಯವರು ತೋರಿಸಿಕೊಟ್ಟ ಹಾದಿಯಲ್ಲಿ ನಡೆಯುತ್ತಾ ಹೋಗುವ ಇವರು ಸಮಾಜದ ಬದಲಾವಣೆಗೆ ಪ್ರಮುಖ ಕಾರಣರಾಗಿರುವುದನ್ನು ಕಾಣಬಹುದು. ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುವ ವ್ಯಕ್ತಿ ಉತ್ತಮ ಸಹಜೀವನ ನಡೆಸಲು ನಿರಂತರ ಶ್ರಮಿಸುತ್ತಾನೆ. ಜಾತಿ, ಧರ್ಮ, ಯಾವುದನ್ನು ಲೆಕ್ಕಿಸದೇ ತನ್ನ ಕೆಲಸದಲ್ಲಿ ನಿರತನಾಗುತ್ತಾನೆ. ಇಲ್ಲಿ ಧರ್ಮವನ್ನು ಪರಿಗಣಿಸದೇ ಸಮಾಜದಲ್ಲಿ ಬದಲಾವಣೆಗಾಗಿ ಅವರು ತಮ್ಮೊಂದಿಗೆ ತಮ್ಮ ಸಹಚರನನ್ನು ಕರೆದು ನಡೆಯುತ್ತಾರೆ.

ಶಾಲೆಯಲ್ಲಿ 'ಶಾಲಾ ಶಿಸ್ತು ಸಮಿತಿ'ಯನ್ನು ರಚಿಸುವಲ್ಲಿ ಸದಾನಂದನ ಪಾತ್ರವನ್ನು ಕಾಣಬಹುದು. ಹೀಗೆ ಶಾಲೆಯಲ್ಲಿ ಆದ ಬದಲಾವಣೆ, ಮಕ್ಕಳ ಸಂಖ್ಯೆಯಲ್ಲಿನ ಹೆಚ್ಚಳ ಇವೆಲ್ಲವೂ ಶಿಸ್ತು ಮತ್ತು ಸಂಯಮದಿಂದ ಸಾಧ್ಯ ಎಂಬುವುದು ನಾರಾಯಣ ಭಟ್ಟರು ತೋರಿಸಿಕೊಡುತ್ತಾರೆ. ಆದರೆ ಶಾಲೆಯಲ್ಲಿ ಎಸ್.ಅಬ್ದುಲ್ ಕಾಸಿಂ ಎಂಬ ಹುಡುಗ ದಿನವೂ ಹತ್ತು ಹದಿನೈದು ನಿಮಿಷ ನಿಧಾನವಾಗಿ ಬರುವುದನ್ನು ಗುರುತಿಸುತ್ತಾರೆ. ಆದರೆ ಶುಕ್ರವಾರ ಮಾತ್ರ ಶಾಲೆಯ ಸಮಯಕ್ಕೆ ಬರುತ್ತಾನೆ. ಇದನ್ನು ಗಮನಿಸಿ ಸಮಸ್ಯೆಗೆ ಕಾರಣವನ್ನು ಕಂಡು ಹಿಡಿಯುವಲ್ಲಿ ಯಶಸ್ವಿಯಾಗುತ್ತಾರೆ.

ಅಲ್ಪ ಸಂಖ್ಯಾತರ ಅನಕ್ಷರತೆಗೌ ಕಾರಣವನ್ನು ಇಲ್ಲಿ ಕಾಣಬಹುದು. ಸದಾನಂದ ಹೇಳುವಂತೆ ಇದೂ ನಿನ್ನ ಶಾಲೆಯ ಕನ್ನಡ ಹಾಗೂ ಅವನ ಮದ್ರಾಸದಲ್ಲಿ ಓದಿಸುವ ಅರೇಬಿಕ್ ಭಾಷೆಯ ನಡುವಿನ ಆಯ್ಕೆಯ ಪ್ರಶ್ನೆಯೋ ಅಲ್ಲ. ಒಂದು ಬಗೆಯಲ್ಲಿ ಇದೊಂದು ಧಾರ್ಮಿಕ ಆಯ್ಕೆ ಎಂಬುದನ್ನು ಹೇಳುತ್ತಾನೆ.

ಅವರಿಗೆ ಓದಿಗಿಂತ ಧರ್ಮ ಮುಖ್ಯ ಎಂಬುದನ್ನು ತಿಳಿಸುತ್ತಿದ್ದಾರೆ. ಇದರಿಂದಾಗಿ ಅವರಲ್ಲಿ ಮೌಢ್ಯತೆ, ಅಂಧಶ್ರದ್ಧೆ, ಆಚರಣೆ ಹೆಚ್ಚಿರುವುದನ್ನು ಕಾಣಬಹುದು. ಅವರಿಗೆ ಅರೆಬಿಕ್ ಭಾಷೆಯನ್ನು ಕಲಿಯಬೇಕಾದುದು ಒಂದು ಧಾರ್ಮಿಕ ಅಗತ್ಯವಾಗಿದೆ. ಇದರೊಂದಿಗೆ ಎರಡು ಸಮುದಾಯದ ಭಿನ್ನ ಸಂಸ್ಕೃತಿಯನ್ನು ತಿಳಿಸುತ್ತಿದ್ದಾರೆ. ಆಯ್ಕೆಯ ಸ್ವಾತಂತ್ರ್ಯವೇ ಇಲ್ಲದ ಅವರು ಅವಿದ್ಯಾವಂತರಾಗಿಯೇ ಮುಂದುವರೆಯಲು ಧರ್ಮವೇ ಪ್ರಮುಖ ಕಾರಣವಾಗಿದೆ. ಈ ಧಾರ್ಮಿಕ ನೀತಿ ನಿಯಮಗಳನ್ನು ಕಾಸಿಂನ ಓದಿಗಾಗಿ ಸಡಿಲಗೊಳಿಸುತ್ತಾರೆ. ಇಲ್ಲಿ ಬದಲಾಗುತ್ತಿರುವ ಸಮಾಜದ ಚಿತ್ರಣವನ್ನು ಕಾಣಬಹುದು.   ಸಂಪ್ರದಾಯಬದ್ದವಾದ ನೀತಿ ನಿಯಮವನ್ನು ವ್ಯಕ್ತಿ ಅದನ್ನು ಹಾಳುಮಾಡದಂತೆ ತಿದ್ದಿಕೊಳ್ಳುವುದರ ಮೂಲಕ ಮುಂದುವರೆಯಬಹುದು ಎಂಬುದನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. ವಿದ್ಯೆ ಧಾರ್ಮಿಕ ಆಯ್ಕೆಯಾಗಬಾರದು. ಅದು ಸಾರ್ವತ್ರಿಕವಾಗಿ ಎಲ್ಲರಿಗು ಅನ್ವಯವಾಗುವಂತೆ ಇರಬೇಕು.

ಇಲ್ಲಿ ಕಾಸಿಂನ ತಾಯಿಯು ತಕ್ಕ ಮಟ್ಟಿಗೆ ಓದಿದವಳು. ಆದ ಕಾರಣ ಮಗನ ಓದಿನ ಬಗ್ಗೆ ಕಾಳಜಿಯನ್ನು ಸ್ವಲ್ಪ ಮಟ್ಟಿಗೆ ವಹಿಸುತ್ತಿರುವುದು ಕಾಣಬಹುದು. ಹಾಗೆ ಧಾರ್ಮಿಕ ನಿಯಮವನ್ನು ಚೆನ್ನಾಗಿ ತಿಳಿದವಳಾಗಿದ್ದಳು. ಇಲ್ಲಿ ಒಬ್ಬ ವಿದ್ಯಾರ್ಥಿಯನ್ನು ಸಾಮಾಜಿಕವಾಗಿ ಉತ್ತಮ ಪ್ರಜೆಯನ್ನಾಗಿ ಮಾಡುವಲ್ಲಿ ಮಾಸ್ತರರ ಮತ್ತು ಉಳಿದವರ ಜವಾಬ್ದಾರಿಯನ್ನು ಹೇಳಿದ್ದಾರೆ ಬೋಳುವಾರುರವರು.

ಸಮುದಾಯದವರ ಪರಿಶ್ರಮದಿಂದ ಯಾವುದೇ ಜಾತಿಮತ ಭೇದವಿಲ್ಲದೇ ಒಗ್ಗೂಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದನ್ನು ಕಾಣಬಹುದು. ಖಾನ್‌ರಿಂದ ಸಹಾಯ ಯೋಚಿಸಿ ಮಾಸ್ತರು ಎಲ್ಲಾವನ್ನು ವಿವರವಾಗಿ ಹೇಳುತ್ತಾರೆ. ಆದರಂತೆ ಅವರು ಸಹಾಯ ಮಾಡಲು ಒಪ್ಪಿ ಮುಂದುವರೆಯುತ್ತಾರೆ. ಮುಂದಿನ ಪೀಳಿಗೆಯವರಿಗೆ ವಿದ್ಯೆಯನ್ನು ಕೊಡಿಸುವಲ್ಲಿ ಅವರಿಗೆ ಇರುವ ಕಾಳಜಿಯನ್ನು ಹೇಳುತ್ತಿದ್ದಾರೆ. ಇಲ್ಲಿ ಒಂದು ಸಂದರ್ಭದಲ್ಲಿ ಹೆಣ್ಣು ಮಕ್ಕಳಿಗೂ ಓದಿನ ಅವಶ್ಯಕತೆಯನ್ನು ತಿಳಿಸುತ್ತಿದ್ದಾರೆ. ಸರಕಾರ ನೀಡುತ್ತಿರುವ ಸವಲತ್ತುಗಳ ಸದುಪಯೋಗ ಕುರಿತು ಹೇಳುತ್ತಾರೆ. ಧಾರ್ಮಿಕ ಚೌಕಟ್ಟಿನ ಕಠಿಣ ಅನುಕರಣೆಯಿಂದ ಅವರಲ್ಲಿ ವರ್ಷಕ್ಕೆ ಒಬ್ಬರೋ ಅಥವಾ ಇಬ್ಬರು ಮಾತ್ರವೇ ಶಾಲೆಯ ಮುಖವನ್ನು ನೋಡುತ್ತಾರೆ. ಹೀಗೆ ಎರಡು ಸಮುದಾಯದವರು ಒಟ್ಟುಗೂಡುವ ಮೂಲಕ ಅಬ್ದುಲ್‌ನ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಇಲ್ಲಿ ಧರ್ಮ ಪ್ರಧಾನವಾಗದೆ, ಸಮಾಜಕ್ಕೆ ಬೇಕಾದ ವ್ಯಕ್ತಿಯ ಒಳಿತು ಮುಖ್ಯ. ಎರಡು ಸಮುದಾಯದ ಸೂಕ್ಷ್ಮತೆಯನ್ನು ಅರಿಯುವುದರ ಮೂಲಕ ಒಗ್ಗಟ್ಟನ್ನು ಸಾಧಿಸಬಹುದು. ಇದರಿಂದ ಎಂತಹ ಧಾರ್ಮಿಕ ಸಮಸ್ಯೆಗೂ ಪರಿಹಾರ ಸಾಧ್ಯ. ವಿದ್ಯೆಯಿಂದಾಗಿ ಈ ಎಲ್ಲವನ್ನೂ ಸಾಧ್ಯ ಮಾಡುವಲ್ಲಿ ಶ್ರದ್ಧೆ ಬೇಕೆ ಹೊರತು ಧರ್ಮದಲ್ಲಿನ ಶ್ರದ್ಧೆಯಲ್ಲ.

'ಸ್ವಾತಂತ್ರ್ಯದ ಓಟ' ಈ ಕತೆ ಸ್ವಾತಂತ್ರ್ಯಕ್ಕಾಗಿ ಓಟ ನಡೆಸಿದ ಚಾಂದ್ ಆಲಿಯ ಕಥೆಯನ್ನು ಒಳಗೊಂಡಿದೆ. ಚಾಂದ್ ಆಲೀ, ಮಹಿಂದರ್ ಭಾಭಿ ಮತ್ತು ತನ್ವೀರಳನ್ನು ಇದಲ್ಲಿ ಪ್ರಮುಖಪಾತ್ರವಾಗಿದ್ದಾರೆ. ಈ ಕಥೆಯಲ್ಲಿಯೂ ಎರಡು ಸಮುದಾಯವನ್ನು ಕಾಣಬಹುದು. ಯಾರೋ ಕೆಲವು ಧಾರ್ಮಿಕ ಪ್ರಮುಖರಿಂದ ಇಡೀ ಸಮುದಾಯವೇ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಚಾಂದ್ ಆಲಿ ತನ್ನೊಂದಿಗೆ ಮಹಿಂದರ್ ಮತ್ತು ತನ್ವೀರಳನ್ನು ಪಾಕಿಸ್ತಾನದಿಂದ ಕರೆದೊಯ್ಯಲು ಪಟ್ಟ ಕಷ್ಟವನ್ನು ವರ್ಣಿಸಲಾಗಿದೆ.

ಇವರೆಲ್ಲರೂ ಮೊದಲಿನಿಂದಲೂ ಪರಸ್ಪರ ಪ್ರೀತಿ, ವಿಶ್ವಾಸದಿಂದ ಇದ್ದವರು. ಈ ಕಾರಣಕ್ಕಾಗಿ ಅವರು ಪಾಕಿಸ್ತಾನದಲ್ಲಿ ಇತರ ಸಮುದಾಯದವರನ್ನು ಕೊಲ್ಲುವಾಗ, ಅವರನ್ನು ಪಾರುಮಾಡುವ ಚಾಂದ್ ಆಲಿಯಲ್ಲಿರುವ ಮಾನವೀಯತೆ ಕಾಣಬಹುದು. ಆತನು ತನ್ನ ಸಮುದಾಯದವರಂತೆ ಕಂಡವರನ್ನು ಕೊಲ್ಲುವ ಮನೋಭಾವದವನಾಗಿದ್ದರೆ, ಇವರನ್ನು ಕಾಪಾಡಲು ಮುಂದಾಗುತಿರಲಿಲ್ಲ. ಅವರನ್ನು ಕೊನೆ ಘಟ್ಟ ತಲುಪಿಸುವ ತನಕ ಅವರನ್ನು ಸ್ವಾತಂತ್ರ್ಯಗೊಳಿಸಲು ಅವರೊಂದಿಗೆ ಈತ ಓಡಿ ಸುರಕ್ಷಿತ ಸ್ಥಳಕ್ಕೆ ಸೇರಿಸುತ್ತಾನೆ. ಈ ಕಥೆಯಲ್ಲಿ ಯಾವ ಸಂದರ್ಭದಲ್ಲಿಯೂ ಇವರ ನಡುವೆ

ಭಿನ್ನಮತದವರು ಎಂಬ ಯೋಚನೆ ಬರುವುದಿಲ್ಲ. ಚಾಂದ್ ಆಲಿಗೆ ಸಹಾಯ ಮಾಡಲು ಒಪ್ಪಿದ ಖಾನ್ ಚಾಚರನ್ನು ಇಲ್ಲಿ ನೆನೆಯಬಹುದು. ಕೊನೆಗೆ ಅವರ ಕುಟುಂಬದವರೊಂದಿಗೆ ಸೇರಿಸುವಲ್ಲಿ ಯಶಸ್ವಿಯಾದ ಚಾಂದ್ ಆಲಿ ತನ್ನ ಓಟ ಮುಂದುವರೆಸಲೇ ಬೇಕಾದಂತಹ ಪರಿಸ್ಥಿತಿಗೆ ಒಳಗಾಗುತ್ತಾನೆ.

ಹೀಗೆ ಸಮುದಾಯದವರ ನಡುವಿನ ಘರ್ಷಣೆಯಿಂದ ಮನುಷ್ಯನು ಎಲ್ಲಿಯೂ ಒಂದು ಗಟ್ಟಿಯಾದ ನೆಲೆ ಕಂಡುಕೊಳ್ಳಲು ಸಾಧ್ಯವಾಗದಂತಹ ಸ್ಥಿತಿಯನ್ನು ತಲುಪುತ್ತಾನೆ. ಇಲ್ಲಿ ಬೊಳುವಾರುರವರು ಭಿನ್ನಮತೀಯರ ನಡುವಿನ ವೈಮನಸ್ಸು ಮತ್ತು ಅದೇ ಎರಡು ಮತೀಯರ ನಡುವಿನ ಸ್ನೇಹಭಾವವನ್ನು ಚಿತ್ರಿಸಿದ್ದಾರೆ. ಮಹಿಂದರ್ ಆಲಿ ಬೇರೊಂದು ಸಮುದಾಯದವನು ಎಂದು ತಿಳಿದ ಮೇಲೂ ನಂಬಿ ಅವನನ್ನು ತನ್ನೊಂದಿಗೆ ಕರೆದೊಯ್ಯುವುದು, ಇವೆಲ್ಲವೂ ಮನಷ್ಯನಿಗೆ ಬೇಕಾದ ಬಾಂಧವ್ಯವನ್ನು ಸೂಚಿಸುತ್ತದೆ. ಮಾನವೀಯತೆ ಮುಖ್ಯವೇ ಹೊರತು ಜಾತಿಮತ ಹಾಗೂ ಧರ್ಮವಲ್ಲ. ತನ್ನ ಸಮುದಾಯದವರಿಂದ ಅಪಾಯವನ್ನು ನಿರೀಕ್ಷಿಸಿ ಅವರಿಗೆ ಸಹಾಯಹಸ್ತ ನೀಡಿದ್ದು ಇಲ್ಲಿ ನಿಜವಾಗಿಯೂ ಮನುಷ್ಯ, ಧರ್ಮವನ್ನು ಕಡೆಗಣಿಸಿ ಮನುಷ್ಯ–ಮನುಷ್ಯನ ನಡುವೆ ನಿಕಟ ಸಂಬಂಧವನ್ನು ಬೆಸೆಯುತ್ತದೆ. ಹೀಗೆ ಈ ಕತೆಯಲ್ಲಿ ತನ್ನ ಊರನ್ನು ಬಿಟ್ಟು ಬಂದ ಚಾಂದ್ ಆಲಿ ತನ್ನವರನ್ನು ಸೇರಿಕೊಂಡ ಮೋಹಿಂದರ್ ಮತ್ತು ತನ್ವೀರಳ್‌ನ್ನು ಕಾಣಬಹುದು. ಯಾವ ದೇಶ, ಊರಿಗೆ ಹೋದರು ಬಿಡದ ಭಿನ್ನಮತೀಯ ಭೀತಿಯನ್ನು ಇಲ್ಲಿ ಕಾಣಬಹುದು. ಮನುಷ್ಯ ನಾವೆಲ್ಲರೂ ಒಂದೇ ಎಂದು ತಿಳಿಯುವವರೆಗೂ ಸ್ವಾತಂತ್ರ್ಯಕ್ಕಾಗಿ ಓಡುತ್ತಲೇ ಇರಬೇಕಾಗುತ್ತದೆ.

ಒಟ್ಟಿನಲ್ಲಿ ದೇವರು–ಧರ್ಮ–ಮೌಢ್ಯತೆ ಈ ಅಧ್ಯಾಯವು ಮುಸ್ಲಿಮರು ಏಕದೇವರ ಆರಾಧಕರು ಎಂಬುದನ್ನು ತಿಳಿಸುತ್ತದೆ. ದೇವರು ಧರ್ಮದ ಮೇಲಿನ ಅತಿಯಾದ ನಂಬಿಕೆಯಿಂದ ಮನುಷ್ಯ ಹೇಗೆ ಇತರರನ್ನು ಶೋಷಣೆಗೆ, ಶಿಕ್ಷೆಗೆ ಒಳಪಡಿಸುತ್ತಾನೆ ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಬಡತನದಲ್ಲಿದ್ದರೂ ವಿದ್ಯೆಯನ್ನು ಪಡೆಯಲು ಹಂಬಲಿಸುವ ಅಲ್ಪಸಂಖ್ಯಾತ ಸಮುದಾಯವನ್ನು ಕಾಣಬಹುದು. ಹೆಣ್ಣುಮಕ್ಕಳನ್ನು ಎಲ್ಲಾ ಕಟ್ಟುಪಾಡುಗಳು ಹೇಗೆ ಮಾನಸಿಕ ಅಸ್ವಸ್ಥತೆಯ ಘಟ್ಟವನ್ನು ತಲುಪುವಂತೆ ಮಾಡುತ್ತದೆ ಎಂಬುದನ್ನು ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಕೊನೆ ಟಿಪ್ಪಣಿ:-

೧.ಆಕಾಶಕ್ಕೆ ನೀಲಿ ಪರದೆ ಕಥಾಸಂಕಲನ : ಬೊಳುವಾರು ಮಹಮದ್ ಕುಂಞ :ಪ್ರಗತಿ ಗ್ರಾಫಿಕ್ಸ್ ಬೆಂಗಳೂರು, ೨೦೦೮ ಅಖಿರತ್ ಕಥೆಯ ಪು-೧೧

೨. ಅದೇ ಪಠ್ಯ - ಪುಟ-೧೯

೩. ಜನ್ನತ್ ಕಥೆಯ ಪುಟ-೪೩

೪.ಅದೇ ಪಠ್ಯ-ಪುಟ-೪೪

೫. ಇದ್ದತ್ ಕಥೆಯ ಪುಟ -೫೬

೬. ಅದೇ ಪಠ್ಯ -ಪುಟ-೫೭

೭. ಅಂಕ ಕಥಾ ಸಂಕಲನದ ಅಂಕ ಕಥೆಯ ಪುಟ -೧೧೨

೮. ಅದೇ ಪಠ್ಯ-ಪುಟ-೧೧೩

೯.ಅದೇ ಪಠ್ಯ-ಪುಟ-೧೧೪

೧೦.ಅದೇ ಪಠ್ಯ-ಪುಟ-೧೧೬

೧೧. ಒಂದು ತುಂಡು ಕಥಾ ಸಂಕಲನ : ಕಾಮಧೇನು ಪ್ರಕಾಶನ : ೧೯೯೬ ಒಂದು ತುಂಡು ಗೋಡೆ ಕಥೆಯ ಪುಟ -೮

೧೨. ಅದೇ ಪಠ್ಯ -ಪುಟ ೧೧೯

೧೩. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ -೪, ಪು.೧೨೯

ಅಧ್ಯಾಯ – ೫

ಮುತ್ತುಪ್ಪಾಡಿ ಎಂಬ ಕಾಲ್ಪನಿಕ ಪ್ರದೇಶದ ಚಿತ್ರಣ

ಅಲ್ಪಸಂಖ್ಯಾತ ವರ್ಗದಿಂದ ಬಂದು ತನ್ನ ಜೀವನವನ್ನು ಜನ ಸಮೂಹಕ್ಕೆ ಪರಿಚಯಿಸಲು ಪ್ರಯತ್ನಿಸಿದ ಮೊಹಮ್ಮದ್‌ರವರಿಗೆ ಬರವಣಿಗೆಯ ಹಿಂದೆ ತನ್ನ ಜನ ಸಮುದಾಯವನ್ನು ಓದುವಂತೆ ಪ್ರೇರೇಪಿಸುವ ಹಾಗೂ ಆತ್ಮ ವಿಮರ್ಶೆ ಮಾಡುವಂತೆ ಒತ್ತಾಯಿಸುವ ಗುರಿ ಇತ್ತು. ಹಾಗಾಗಿ ಅವರಿಗೆ ತನ್ನ ಸಮುದಾಯದ ನೋವು, ನಲಿವು, ಅನಿಷ್ಟ ಪದ್ಧತಿಗಳು ಈ ಎಲ್ಲವನ್ನೂ ವಿಚಾರಕ್ಕೊಳಪಡಿಸಲು ಸಾಧ್ಯವಾಯಿತು.

'ಅವರೇ ಹೇಳುವಂತೆ ಮುತ್ತುಪ್ಪಾಡಿ ಊರ ತುಂಬ ಮನುಷ್ಯರನ್ನು ಹುಟ್ಟಿಸಿದೆ; ಅವರು ನಂಬಲೆಂದು ದೇವರುಗಳನ್ನು ಸೃಷ್ಟಿಸಿದೆ. ಪೂಜಿಸಲು ಮಂದಿರ, ಪ್ರಾರ್ಥಿಸಲು ಮಸೀದಿ, ಓದಲು ಶಾಲೆ, ಕವಾಯತಿಗೆ ಮೈದಾನ, ಈಜಲು ಹೊಳೆ, ಹಾರಲು ಕೆರೆ, ಮಲಗಲು ಆಸ್ಪತ್ರೆ, ಅಳಲು ಸ್ಮಶಾನ, ಹೂಳಲು ಕಬರ್‌ಸ್ಥಾನ, ಆಳಲು ಪೊಲೀಸ್– ಏನೇನು ಬೇಕೋ ಅದೆಲ್ಲವನ್ನು ಒದಗಿಸಿದೆ. ನಂತರ ಮುತ್ತುಪಾಡಿಯ ಮನುಷ್ಯರಿಗೆ ಸ್ವಾತಂತ್ರ್ಯ ಕೊಟ್ಟೆ. ಅವರನ್ನೆಲ್ಲ ಅವರಿಷ್ಟದಂತೆ ಬದುಕಲು ಬಿಟ್ಟು, ಅವರದೇ ಕತೆ ಬರೆದು ಪತ್ರಿಕೆಗಳಿಗೆ ಕಳುಹಿಸಲಾರಂಭಿಸಿದೆ' (ದೇವರುಗಳ ರಾಜ್ಯದಲ್ಲಿ).

ಅವರು ಚಿತ್ರಿಸಿರುವ ಸ್ವಾತಂತ್ರ್ಯ ಜನಜೀವನವನ್ನು ಅವರ ಎಲ್ಲಾ ಕಥೆಯಲ್ಲಿ ಕಾಣಬಹುದು. ಈ ಊರನ್ನು ಎಲ್ಲರೂ ಕಾಣಲು ನೆರವಾದ ಪತ್ರಿಕೆಗಳನ್ನು ಇಲ್ಲಿ ನೆನೆಯಬಹುದು. ಪ್ರಮುಖವಾಗಿ ೪ ಕಥೆಗಳನ್ನು ವಿಮರ್ಶೆಗೆ ಒಳಪಡಿಸಿದ್ದೇನೆ. 'ದೇವರುಗಳ ರಾಜ್ಯದಲ್ಲಿ' ಕಥಾಸಂಕಲನದ ಅದೆ ಹೆಸರಿನ ಕಥೆಯಲ್ಲಿ, ದೇವರ ಅಪೇಕ್ಷೆಯಂತೆ ಸೃಷ್ಟಿಯಾದ ಊರಾಗಿ ಮುತ್ತುಪ್ಪಾಡಿಯನ್ನು ಕಾಣಬಹುದು. ಈ ಒಂದು ನೆಲದಲ್ಲಿಯೇ ದೇವಾಲಯ, ಈಗರ್ಜಿ, ಮಸೀದಿ ಸೃಷ್ಟಿಸಿ ಧರ್ಮದ ಹೆಸರಿನಲ್ಲಿ ಮನುಷ್ಯ ಮಾಡುವ ಕಾರ್ಯಗಳನ್ನು ಚಿತ್ರಿಸುತ್ತಾ ಹೋಗಿದ್ದಾರೆ.

ಕೇವಲ ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯವನ್ನು ಮಾತ್ರವಲ್ಲ, ಕ್ರೈಸ್ತ ಅಲ್ಪಸಂಖ್ಯಾತ ಸಮುದಾಯವನ್ನೂ ನೋಡಬಹುದು. ಪ್ರಾರಂಭದಲ್ಲಿ ಒಂದು ಮರದ ಕಾರ್ಖಾನೆಯ ಚಿತ್ರಣ ನೀಡಿದ್ದಾರೆ. ಇಲ್ಲಿಯೇ ಉದ್ಯೋಗ ಮಾಡುತ್ತಿದ್ದ ವ್ಯಕ್ತಿ "ದೇವರ ಇಚ್ಛೆಯಂತೆಯೇ"

ಆರೋಗ್ಯವಂತನಾಗಿದ್ದನೆಂದು ಹೇಳುತ್ತಾರೆ. ಮನುಷ್ಯನು ಬಡವ ಮತ್ತು ಶ್ರೀಮಂತನಾಗುವುದು ದೇವರ ಇಚ್ಛೆಯಂತೆ, ಹೊರತು ಅವನ ಇಚ್ಛೆಯಂತೆ ಅಲ್ಲ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ.

ನಂಬಿಕೆಯಾಗಿ ಸೃಷ್ಟಿಯಾದ ದೇವರು ಎಲ್ಲವನ್ನೂ ನಿಯಂತ್ರಿಸುವ ಅಮೂರ್ತ ಶಕ್ತಿಯಾಗಿ ಇಲ್ಲಿ ಕಂಡು ಬಂದಿದೆ. ಇದೆಲ್ಲವೂ ಮನುಷ್ಯನ ತಂತ್ರ ಮತ್ತು ಆಯುಧವಾಗಿ ಬೇರೆ ಮನುಷ್ಯನ ನಿಯಂತ್ರಣ ಅಸ್ತ್ರವಾಗಿರುವುದನ್ನು ಇಲ್ಲಿ ಕಾಣಬಹುದು. ಮುಂದೆ ಕಾರ್ಖಾನೆಯಲ್ಲಿ ಆಕಸ್ಮಿಕವಾಗಿ ಕಾಲು ಕಳೆದುಕೊಂಡ ಜೋಸೆಫ್ ಬೇರೊಂದು ಊರಿಗೆ ಪ್ರಯಾಣಿಸುತ್ತಾನೆ. ತನ್ನ ಊರಿನಲ್ಲಿ ಸಾಧ್ಯವಾಗದ ಕೆಲಸವನ್ನು ದೇವರ ಹೆಸರಿನಲ್ಲಿ ಮಾಡುವ ವೃತ್ತಿನಿರತನಾಗುತ್ತಾನೆ. ತನ್ನ ಊರನ್ನು ಬಿಟ್ಟು ಬೇರೆ ಊರಿಗೆ ಹೋದ ಮಾತ್ರಕ್ಕೆ ಬದಲಾಗದ 'ದೇವರು' ಮತ್ತು 'ಧರ್ಮ' ಚಿತ್ರಣವನ್ನು ನೀಡುತ್ತಾರೆ. ದೇವರ ಹೆಸರಿನಲ್ಲಿ ಭಿಕ್ಷೆ ಬೇಡುವುದಕ್ಕೆ ಪ್ರಾರಂಭಿಸುತ್ತಾನೆ. ಅದನ್ನೆ ಒಂದು ವೃತ್ತಿಯಾಗಿ ಮುಂದುವರೆಸಿಕೊಂಡು ಹೋಗುತ್ತಾನೆ.

ಈಗರ್ಜಿಯಲ್ಲಿ ಆಶ್ರಯ ಪಡೆದ ಅವನಿಗೆ ಎರಡು ಹೆಣಗಳನ್ನು ಕಾಣುವವರೆಗೂ ಯಾವುದೇ ಆತಂಕವಿರಲಿಲ್ಲ. "ದೇವರು ಹೇಳಿದನು ಎರಡು ಮರಣವಾಗಲಿ; ಇಬ್ಬರು ಸತ್ತು ಹೋದರು". ಎಲ್ಲವೂ ದೇವರ ಅಣತಿಯಂತೆಯೇ ನಡೆಯುತ್ತದೆ ಎಂದು ನಂಬಿದ ಜೋಸೆಫ್, ತನ್ನ ಸಮುದಾಯದ ವ್ಯಕ್ತಿಯೋರ್ವ ಮರಣ ಹೊಂದಿದಾಗ ಯಾರು ಕೂಡ ಮೃತನ ಅಂತ್ಯ ಸಂಸ್ಕಾರ ಮಾಡಲು ಮುಂದೆ ಬಾರದಿರುವ ಸಂದರ್ಭದಲ್ಲಿ ಬೇರೊಂದು ಧರ್ಮಕ್ಕೆ ಮತಾಂತರವಾಗುತ್ತಾನೆ. ಆ ಧರ್ಮದ ಅಂತರ್ಯ ತಿಳಿದ ನಂತರ ಮನುಷ್ಯನ ವ್ಯಕ್ತಿತ್ವದಲ್ಲಿನ ಬದಲಾವಣೆಯನ್ನು ಕಾಣಬಹುದು. ಕೇವಲ ನಂಬಿಕೆಯಾಗಿ ಉಳಿಯಬೇಕಾದ ಧರ್ಮ ಅದನ್ನು ಹೊರತುಪಡಿಸಿ ಎಲ್ಲಾ ಕ್ಷೇತ್ರವನ್ನು ಪ್ರವೇಶಿಸಿದಾಗ ಏನು ಮಾಡುವುದನ್ನು ತಿಳಿಯದೇ ಹೋಗುತ್ತಾನೆ. ಅನಂತರ ಅವನಿಗೆ ಈ ಎಲ್ಲಾ ತಿಳಿದು ತಾನು ಮುಸ್ಲಿಂ ಅಥವಾ ಕ್ರೈಸ್ತನಾದ ಮಾತ್ರಕ್ಕೆ ತನ್ನ ಜೀವನ ಬದಲಾಗುವುದಿಲ್ಲ, ಕೇವಲ ಧರ್ಮದ ಸ್ವರೂಪ ಮಾತ್ರವೇ ಬದಲಾಗುವುದನ್ನು ಇಲ್ಲಿ ಕಾಣಬಹುದು. ಮನುಷ್ಯನ ನಂಬಿಕೆಯಾಗಬೇಕಾದ ಈ ಒಂದು ಅಂಶ ಅವನನ್ನು ನಿಯಂತ್ರಿಸುವ ಅಸ್ತ್ರವಾಗಿರುವುದನ್ನು ಕತೆಯಿಂದ ತಿಳಿದುಬರುತ್ತದೆ.

'ದೇವರು ಪವಿತ್ರ ಗ್ರಂಥದಲ್ಲಿ ಬರೆದು ಇಟ್ಟಿದ್ದನು. ಅಲ್ಲಾಹು ನಿಮಗೆ ಭೂಮಿಯನ್ನು ಹಾಸಿಗೆಯನ್ನಾಗಿಯೂ, ಆಕಾಶವನ್ನು ಮೇಲ್ಛಾವಣಿಯನ್ನಾಗಿಯೂ ರಚಿಸಿ ಕೊಟ್ಟನು. ಅವನು ನಿಮಗಾಗಿ ಸುಂದರ ಸ್ವರ್ಗವನ್ನು ನಿರ್ಮಿಸಿರುತ್ತಾನೆ...ಆಮೇನ್. (ಪು.೩೯)

ಮೊದಲು ಜೋಸೆಫ್ ಆಗಿದ್ದ ರೆಹಮಾನ ಧರ್ಮದಲ್ಲಿನ ಹುಳುಕುಗಳನ್ನು ಕಂಡು ಮುಸ್ಲಿಂ ಧರ್ಮಕ್ಕೆ ಮತಾಂತರವಾಗುತ್ತಾನೆ. ಆದರೆ ಆ ಧರ್ಮದಲ್ಲಿನ ನಿಜ ಸ್ವರೂಪವನ್ನು ಕಂಡು, ದೇವರು, ಧರ್ಮ ಮನುಷ್ಯನಿಗೆ ಕೇವಲ ನಂಬಿಕೆ ಮಾತ್ರ ಎಂದು ಗ್ರಹಿಸುತ್ತಾನೆ. ಮುತ್ತುಪ್ಪಾಡಿ ದೇವರ ಇಚ್ಛೆಯಂತೆ ಸೃಷ್ಟಿಯಾದ ಊರಾಗಿ ಕಂಡು ಬರುತ್ತದೆ. ನಂತರ ಕಥೆ ಬೆಳೆಯುತ್ತಾ ಹೋದಂತೆ ದೇವರು ಸೃಷ್ಟಿಸಿದ ಮನುಷ್ಯನಿಂದಾಗಿ ಊರಿನ ಸ್ವರೂಪದಲ್ಲಿ ಬದಲಾವಣೆಯಾಗುತ್ತದೆ. ಎಲ್ಲಾ ಮನುಷ್ಯನ ಇಷ್ಟದಂತೆ ನಡೆಯುವ ಊರಾಗಿ ಕೊನೆಗೆ ಕಂಡುಬರುತ್ತದೆ.

'ಗುಟ್ಟೊಂದು ಹೇಳಿದರೆ' ಕಥೆಯಲ್ಲಿ ಹಿಂದೆ ಧರ್ಮ ಗುರುಗಳು ಹೀಗೆಯೇ ಇರಬೇಕು ಎಂಬ ಬದಲಾದ ಚಿತ್ರಣವನ್ನು ಕಾಣಬಹುದು. ವಯಸ್ಸಾಗಿದೆ ಎಂಬ ಕಾರಣಕ್ಕಾಗಿ ಕುರಾನು ಪಾಠ ಹೇಳಿಕೊಡುವುದರಿಂದ ನಿವೃತ್ತಿ ಹೊಂದಿದ್ದ ಹಸನ್ ಮುಕ್ರಿಯಾರವರನ್ನು ಇಲ್ಲಿ ಕಾಣಬಹುದು. ಊರಿನ ಸಾಹುಕಾರನಿಗೆ ತಿಳಿಯದ ಅನೇಕ ಮುಖ್ಯ ಸಂಗತಿಗಳು ಕಥೆಯ ಇನ್ನೊಂದು ಪಾತ್ರವಾದ ರಹೀಮನಿಗೆ ತಿಳಿದಿರುತ್ತದೆ. ಓದಿನಲ್ಲಿ ಹಿಂದುಳಿದಿದ್ದರೂ ಊರಿನಲ್ಲಿ ಧರ್ಮ ಗುರುವಿನ ಕೆಟ್ಟ ಕೆಲಸಗಳನ್ನು ಬಯಲಿಗೆಳೆಯುವುದರಲ್ಲಿ ಖಾದರ್ ಎಂಬ ವಿದ್ಯಾರ್ಥಿ ಯಶಸ್ವಿಯಾಗುತ್ತಾನೆ. ಆದರೆ ಈ ಆರೋಪ ಅವನ ಮೇಲೆಯೇ ಬರುವುದು ಪ್ರಮುಖ ಅಂಶವಾಗಿದೆ.

ಹೊಸದಾಗಿ ಶಾಲೆಗೆ ಕುರಾನು ಕಲಿಸುವ ಗುರುವಾಗಿ ಬಂದವನ ಅನಾಚಾರವನ್ನು ಧೈರ್ಯವಾಗಿ ಹೇಳಲು ಸಾಧ್ಯವಾಗದ ಅವರ ಜನರು "ನಿಮ್ಮ ಮನೆಯಲ್ಲಿ ಕೋವಿ ಉಂಟೂಂತ ಕಾಣ್ತದೆ. ಅಲ್ವಾ?"(ಪು.೭೫) ಎಂದು ಪ್ರಶ್ನಿಸುತ್ತಾರೆ. ಮೇಲ್ವರ್ಗದ ಅಸ್ತ್ರವಾದ ಕೋವಿಯಿಂದ ಸಮೂಹದಲ್ಲಿನ ಅನ್ಯಾಯಗಳನ್ನು ತೋರಲು ಹಿಂಜರಿಯುವ ಕೆಳವರ್ಗದ ಸಮಾಜದ ಚಿತ್ರಣವನ್ನು ಮತ್ತು ಇತರ ಎಲ್ಲ ಅಂಶಗಳನ್ನು ಅವರ ಕಾಲ್ಪನಿಕ ಊರಿನಲ್ಲಿ ಕಾಣಬಹುದು. ಗುರುವಿನ ಸ್ಥಾನದಿಂದ ಕೆಳಗೆ ಇಳಿಸಲು ವಯಸ್ಸು ಕೇವಲ ಕಾರಣವಾಗಿದ್ದನ್ನು ನೋಡಬಹುದು. ಅವರ ಮುಂದಿನ ಜೀವನದ ಬಗ್ಗೆ ವಿವೇಚಿಸುತ್ತಾ ಖಾದರ್ ತನ್ನ ದುಃಖವನ್ನು ರಹೀಮನ ಮುಂದೆ ಹೇಳುತ್ತಾ, ಆ ಒಂದು ಊರಿನ ಧರ್ಮದ ಮತ್ತೊಂದು ಮುಖವನ್ನು ಅನಾವರಣ ಮಾಡುತ್ತಾನೆ.

"ನಮ್ಮ ಶಾಸ್ತ್ರದಲ್ಲಿ ಉಂಟಂತೆ, ಸೂಳೆಗಾರಿಕೆ ಮಾಡಿದವರನ್ನು ಕಲ್ಲಿನಿಂದ ಹೊಡೆದು ಕೊಲ್ಬೇಕು ಅಂತ, ನೋಡುವ ಯಾರಿಗೆ ಯಾರು ಕಲ್ಲು ಬೀಸಾಡ್ತಾರೆ ಅಂತ." (ಪು.೭೬) ಶಾಸ್ತ್ರ ಕುರಿತು ಹೇಳುತ್ತಾ, ಧರ್ಮ ಶಾಸ್ತ್ರದ ಕಟ್ಟುಪಾಡನ್ನು ಕೆಳವರ್ಗದ ಜನತೆ ಮಾತ್ರವೇ ಪಾಲಿಸಬೇಕು ಎಂಬ ನಿಯಮಗಳಾಗಿರುವುದನ್ನು ಇಲ್ಲಿ ಕಾಣಬಹುದು. ಈ ಮೇಲಿನ ಮಾತುಗಳನ್ನು ಖಾದರ್ ಕೋಪದಲ್ಲಿ

ಹೇಳುತ್ತಾನೆ. ಆ ಒಂದು ಧರ್ಮದ ತಪ್ಪನ್ನು ಬಯಲು ಮಾಡಲು ಹೋಗಿ ಅದರಲ್ಲಿ ತಾನೇ ಸಿಕ್ಕಿಕೊಳ್ಳುವುದನ್ನು ಇಲ್ಲಿ ಕಾಣಬಹುದು. ಗುರುವನ್ನು ಕೊಲ್ಲಲು ಹೋಗಿ ಸೆರೆಸಿಕ್ಕ ಖಾದರ್‌ಗೆ ಸಹಾಯ ಮಾಡಿದ್ದು ರಹೀಮ. ಕಾರಣ ಗುರುವಿನ ಸತ್ಯವೇನೆಂಬುದು ಅವನಿಗೆ ತಿಳಿದಿತ್ತು. ಧರ್ಮದ ಪವಿತ್ರ ಗ್ರಂಥ ಕುರಾನನ್ನು ಬೋಧಿಸುವ ಗುರುವಿನ ಚಿತ್ರಣದಿಂದ ತನ್ನ ಇಚ್ಛೆಯಂತೆ ಬದುಕಲು ಬಿಟ್ಟ ಮನುಷ್ಯನ ದುರ್ವರ್ತನೆಯನ್ನು ಕಾಣಬಹುದು. ಬೊಳುವಾರುರವರು ತನ್ನ ಇಚ್ಛೆಯಂತೆ ಬದುಕಲು ಬಿಟ್ಟು ಜನರ ಜೀವನ ಹೇಗಿತ್ತು ಎಂಬುವುದನ್ನು ಮುತ್ತುಪ್ಪಾಡಿಯ ಕಾಲ್ಪನಿಕ ಊರಿನ ಮೂಲಕ ಚಿತ್ರಿಸಿದ್ದಾರೆ.

'ಆಕಾಶಕ್ಕೆ ನೀಲಿ ಪರದೆ' ಸಂಕಲನದ ಇಬಾದತ್ ಕಥೆಯಲ್ಲಿ ಮುತ್ತುಪ್ಪಾಡಿ ಊರಿನಲ್ಲಿ ಮೂರು ಹೊತ್ತು ಊಟಕ್ಕೆ ಗತಿಯಿಲ್ಲದ ಮನೆಗಳನ್ನು ಕಾಣಬಹುದು. ಆದರೆ ಅದೇ ಊರಿನಲ್ಲಿ ಕಾರಿನಲ್ಲಿ ಓಡಾಡುವ ಜುಮ್ಮಾ ಮಸೀದಿಯ ಜಮಾತ್ ಅಧ್ಯಕ್ಷ 'ಹಾಜಿ ಅಬ್ದುಲ್ ರೆಹಮಾನ್ ಸಾಹೇಬರ'ರ ಐಷರಾಮಿ ಜೀವನದ ಚಿತ್ರಣವಿದೆ. ಇದು ಆ ಊರಿನ ಬಡವರ ಜೀವನಕ್ಕೆ ತದ್ವಿರುದ್ಧವಾಗಿದೆ. ಉಳ್ಳಾಲದಿಂದ ಬಂದ ಅವುಲಿಯಾರವರಿಂದ ಊರಿನ ಚಿತ್ರಣ ಸ್ವಲ್ಪ ಮಟ್ಟಿಗೆ ಬದಲಾಗುವುದನ್ನು ಕಾಣಬಹುದು. ಈ ಅವುಲಿಯಾರವರಿಂದ ಮೇಲಿನ ಊರಿನ ಚಿತ್ರಣ ಬದಲಾದದ್ದು ಮಾತ್ರವಲ್ಲದೆ, ತಮ್ಮ ಮಂತ್ರಶಕ್ತಿಯಿಂದ ಕೆಲವೊಂದು ಕಾಯಿಲೆಯನ್ನು ವಾಸಿ ಮಾಡುವುದನ್ನು ಕಾಣಬಹುದು. ಅವರ ಪವಾಡಕ್ಕೆ ಆ ಊರಿನ ಮೌಲವಿಯವರಾದ ಇಮಾಂ ಇಬ್ರಾಹಿಂ ಕೂಡ ಮರುಳಾಗುತ್ತಾರೆ. ಅದೇ ಊರಿನ ಕಸಾಯಿ ಖಾದರ್‌ನು ಕಡ್ಲೆಮಿಠಾಯಿ ಅವುಲಿಯಾರನ್ನು ಕಂಡು ಹೆದರುತ್ತಾನೆ. ಏಕೆಂದರೆ ಅವುಲಿಯಾರರು ಕಡ್ಲೆಮಿಠಾಯಿಯನ್ನು ಬಿಟ್ಟು ಬೇರೆಯದನ್ನೂ ಅಪರೂಪಕ್ಕೆ ಸ್ವೀಕರಿಸುತ್ತಿದ್ದರು. ಆ ಮಟನ್ ಸ್ಟಾಲ್ ವ್ಯಾಪಾರಿ ಖಾದರ್ ಸ್ವಭಾವದಲ್ಲಿ ಒರಟ, ಮುಖವನ್ನು ಯಾವಾಗಲೂ ಸಿಂಡರಿಸಿಕೊಂಡೇ ಇರುತ್ತಿದ್ದ. ಊರಿನ ಎಲ್ಲ ಹೊಡೆದಾಟದಲ್ಲಿ ಪ್ರಮುಖವಾಗಿ ಭಾಗವಹಿಸುತ್ತಿದ್ದ.

ಮುತ್ತುಪ್ಪಾಡಿ ಜಮಾತಿನ ಪ್ರೆಸಿಡೆಂಟ್ ಹಾಗೂ ಟಿಂಬರ್ ಕಂಟ್ರಾಕ್ಟರ್ ಉಮ್ಮರಬ್ಬನವರ ಬಲಗೈ ಎಂದೇ ಹೆಸರಾಗಿದ್ದವನು. ಊರಿನ ಜಮಾತ್ ಮುಖ್ಯರು ಮತ್ತು ಶ್ರೀಮಂತರಿಂದ ಹಾಳಾದ ಖಾದರ್ ಮುಂದೆ ಅವುಲಿಯಾರಿಂದ ತಾನು ಮಾತ್ರ ಬದಲಾಗದೆ, ಊರಿನ ಚಿತ್ರಣವನ್ನೇ ಬದಲಾಯಿಸುತ್ತಾನೆ. ಮುತ್ತುಪ್ಪಾಡಿಯ ಕಸಾಯಿ ಗಲ್ಲಿಯಲ್ಲಿ ವಾಸಿಸುತ್ತಿದ್ದ ಕೆಳವರ್ಗದ ಚಿತ್ರಣ ಹೀಗಿದೆ. " ಮಸೀದಿಯ ಕಾಂಪೌಂಡ್ ಗೋಡೆಯಿಂದ ಆರಂಭವಾಗಿ ಕೆಳಗಡೆ ಕೆರೆಯ ತನಕವೂ ಪರಸ್ಪರ ಅಂಟಿಕೊಂಡಂತಿರುವ ಗುಡಿಸಲುಗಳ ನಡುವಿನ ತಟ್ಟು ದಿನ್ನೆಗಳನ್ನೇ ಬೀದಿಗಳೆನ್ನಬಹುದಾದರೆ,

ಕಸಾಯಿ ಗಲ್ಲಿಯಲ್ಲಿ ಎಲ್ಲಾ ಮನೆಗಳ ಸುತ್ತಲೂ ಬೀದಿಗಳೇ, ಈ ಬೀದಿಗಳ ತುಂಬ ಕೋಳಿಗೂಡು, ಆಡಿನ ಇಕ್ಕೆ, ಮಕ್ಕಳ ಹೇಲು, ಸ್ನಾನದ ನೀರು, ಮುಸುರೆಯ ಕೆಸರು, ಮೂತ್ರದ ಕೊಚ್ಚೆ ಮತ್ತು ಎಲ್ಲದರ ನೇತಾರನೆಂಬಂತೆ ಕಸಾಯಿಖಾನೆಯ ಕೆಂಪುರಕ್ತ ವಿವಿಧ ವಿನ್ಯಾಸಗಳೊಂದಿಗೆ ಬಿಸಿಲಿಗೆ ಹೊಳೆಯುತ್ತವೆ. ಎಲ್ಲವೂ-ಎಲ್ಲಾ ಮನೆಗಳನ್ನೂ ಬಳಸಿಕೊಂಡೇ ಹರಿಯುತ್ತಾ ತಗ್ಗಿನ 'ಕುಂಟಲಕೆರೆ'ಯನ್ನು ತುಂಬುತ್ತವೆ. (ಪು೧೦೩) ಈ ಮೇಲಿನ ಮಾತು ಮುತ್ತುಪ್ಪಾಡಿಯ ಪರಿಸರದ ಹಾಗೂ ಬಡತನದ ಚಿತ್ರಣವನ್ನು ಕೊಡುತ್ತದೆ. ಊರಿನ ಅಧಿಕಾರಿಗಳಿಂದ ಯಾವುದೇ ರೀತಿಯ ಸಹಾಯ ಜನರಿಗೆ ಆಗುತ್ತಿರಲಿಲ್ಲ ಎಂಬುದನ್ನು ಈ ಕತೆಯು ತಿಳಿಸಿಕೊಡುತ್ತದೆ.

ಊರಿನ ಈ ಮೇಲಿನ ಚಿತ್ರಣವನ್ನು ಬದಲಾಯಿಸಲು ಅಧ್ಯಕ್ಷರಾದ ಹಾಜಿಯವರಿಂದ ಸಾಧ್ಯವಿಲ್ಲ ಎಂಬುದನ್ನು ಅವುಲಿಯಾ ಅವರು ಅರಿತು, ಅದಕ್ಕಾಗಿ ಖಾದರನನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ವಿದ್ಯೆಯಿಲ್ಲದೆ ಈ ಜನರು ತಮ್ಮ ಪರಿಸರವನ್ನು ಶುಭ್ರವಾಗಿ ಇಟ್ಟುಕೊಳ್ಳಬೇಕು ಎಂಬುದನ್ನು ಅವುಲಿಯಾ ಅವರು ಖಾದರ್‌ನನ್ನು ಬದಲಾಯಿಸುವುದರ ಜೊತೆಗೆ ಊರಿನ ಕೆಲಸದಲ್ಲಿ ತಾವೂ ಭಾಗಿಯಾಗುತ್ತಾರೆ.

ಖಾದರ್ ಊರಿನ ಕುಂದುಕೊರತೆಯನ್ನು ತಿಳಿದು ಸರಿ ಮಾಡಲು ಮುಂದಾದಾಗ ಹಾಜಿಯವರಿಗೆ ಸೀತಣ್ಣ ಶೆಟ್ರು ಹಿಂದೆಯೇ ಈ ವಿಚಾರವನ್ನು ಹೇಳಿರುವಾಗ ಅವರು ಅದರ ಕಡೆಗೆ ಗಮನ ಕೊಡದೇ ಇರುವ ವಿಚಾರವನ್ನು ಕುರಿತು ಈ ರೀತಿ ಹೇಳುತ್ತಾರೆ. "ಯಾವತ್ತೋ ಆಗಬೇಕಾಗಿದ್ದ ಕೆಲಸ ; ಎರಡು ವರ್ಷದ ಕೆಳಗೆ ನಾನು ನಿಮಗೆ ಹೇಳಿದ್ದೆ. ಹೇಗಾದರೂ ಮಾಡಿ ಸ್ವಲ್ಪ ಹಣ ವಂತಿಗೆ ಮಾಡಿಕೊಡಿ. ಆ ಕಸಾಯಿಗಲ್ಲಿಗೆ ಮೂಗು ಬಿಟ್ಟುಕೊಂಡು ಜನ ಹೋಗುವ ಹಾಗೆ ಏನಾದರೂ ಮಾಡೋಣ ಅಂತ. ಆ ದಿನ ತಹಸೀಲ್ದಾರರು ಬಂದಿದ್ದಾಗ ಪಂಚಾಯತಿನ ಮಾನ ಹರಾಜು ಹಾಕಿದ್ರು. ಅಂದ್ರೆ ಇಂಥಹದ್ದನ್ನೆಲ್ಲ ಲೋಕಲ್ ಸಪೋರ್ಟ ಇಲ್ಲದೆ ಮಾಡಲಿಕ್ಕೆ ಆಗುವುದಿಲ್ಲ. ಈಗ ನೋಡಿ, ಆ ಖಾದರ್‌ನ ಲೀಡರ್‌ಶಿಪ್‌ನಲ್ಲಿ ಕಸಾಯಿಗಲ್ಲಿಯ ಸುತ್ತ ಕಣಿ ಕಡಿದು ನೀರು ಹೋಗುವ ಕಾಲುವೆ ಮಾಡಲು ಅಂತ ಎರಡೂವರೆ ಸಾವಿರ ಸ್ಯಾಂಕ್ಷನ್ ಆಗಿಬಿಟ್ಟಿತು. ನೀವು ನೋಡ್ತಾ ಇರಿ, ಮುಂದಿನ ಸರ್ತಿ ಪಂಚಾಯ್ತಿ ಮೆಂಬರ್ರು ಅಂತ ಓಟಿಗೆ ನಿಂತರೆ ಎದುರಿದ್ದವನ ಡೆಪೊಸಿಟ್ ನಿಲ್ಲಲಿಕ್ಕಿಲ್ಲ." (ಪು ೧೧೯) ಈ ಮಾತುಗಳಿಂದ ತಮ್ಮ ಓಟುಗಳಿಗಾಗಿ ಜನರಿಗೆ ಉಪಕಾರ ಮಾಡುವ ಹುನ್ನಾರವನ್ನು ಇಲ್ಲಿ ಕಾಣಬಹುದು. ತಮ್ಮ ಉನ್ನತಿಯ ಕಡೆಗೆ ಮೇಲ್ವರ್ಗದವರ ಗಮನ ಸೆಳೆದಿರುವುದನ್ನು ತಿಳಿದು ಬರುತ್ತದೆ.

ಆದರೆ ಇಂಥಹ ಪರಿಸ್ಥಿತಿಯಲ್ಲಿ ಇದ್ದವರಿಗೆ ಅವಧೂತನಾಗಿ ಬಂದ ಅವುಲಿಯಾವರು ಕಸಾಯಿಗಲ್ಲಿಯ ಕೆಲಸದಲ್ಲಿ ಅನುಭವವವಿರುವಂತೆ ತಲ್ಲೀನರಾಗುತ್ತಾರೆ. ಈ ಊರಿನ ಅಧ್ಯಕ್ಷರಿಗೆ ಇರಬೇಕಾದ ಜವಬ್ದಾರಿ ಏನು ಎಂಬುದನ್ನು ಇವರು ತಮ್ಮ ಕೆಲಸದ ಮೂಲಕ ಪರೋಕ್ಷವಾಗಿ ಹೇಳುತ್ತಿರುವಂತಿದೆ. ಅವುಲಿಯಾರರು ಕೇವಲ ತಮ್ಮ ಧರ್ಮಕಾರ್ಯದಲ್ಲಿ ಮಾತ್ರವೇ ಭಾಗವಹಿಸಬೇಕು ಎಂದು ಮಾದರಿಯನ್ನು ಈ ಊರಿನ ಅವುಲಿಯಾರರು ಬದಲಾಯಿಸುತ್ತಾರೆ.

ಅಲ್ಲದೇ ಅವರು ಕೂಲಿಗೆ ಹೋಗಿ ಗಂಡಸರೆಲ್ಲಾ ಅವರಿಗಾಗಿ ಮಾಡಿದ ಸ್ನಾನದ ಕೋಣೆಯಲ್ಲಿ ಸ್ನಾನವಾದ ಬಳಿಕವಷ್ಟೇ ಮನೆಗೆ ಹೋಗುವಂತೆ ಆಜ್ಞಾಪಿಸುವ ಮೂಲಕ ಅವರಿಗೆ ಶುಚಿತ್ವದ ಬಗ್ಗೆ ತಿಳಿಸುತ್ತಾರೆ. ಅವರು ಸ್ನಾನ ಮಾಡದೇ ಹೋದರೆ 'ಇಬ್ಲೀಸಿ' (ಪಿಶಾಚಿ) ಕನಸಿನಲ್ಲಿ ಬರುವುದೆಂದು ಹೇಳಿದರ ಪರಿಣಾಮವಾಗಿ ಅವುಲಿಯಾರವರ ಮಾತು ಮೀರಿ ಗಂಡನಿಗೆ ಅನ್ನ ಬಡಿಸಲು ಯಾವ ಹೆಂಗಸು ಧೈರ್ಯ ಮಾಡುತ್ತಾಳೆ? ನಂತರ ಊರಿನ ಜಮಾಹಿತನ ಜನರಲ್ ಬಾಡೀ ಕಲಾಪದಲ್ಲಿ ಖಾದರ್ ಅವುಲಿಯಾ ಅವರು ಊರಿಗೆ ಬಂದಿದರಿಂದ ಹಾಜಿಯಾರಂತೆ ನಾವು ಇವತ್ತು ಒಬ್ಬ ಮನುಷ್ಯ ಅಂತ ಆಗಿದ್ದು ಎಂದು ಹೇಳುತ್ತಾನೆ. ಕಸಾಯಿ ಗಲ್ಲಿಯ ಪಾಯಿಖಾನೆಗಾಗಿ ಕಬರ್‌ಸ್ಥಾನದ ಸ್ವಲ್ಪ ಜಾಗ ಕೇಳಿದ್ದಕ್ಕಾಗಿ ಅಸಮಾಧಾನಗೊಳ್ಳುವ ಹಾಜಿಯವರನ್ನು ಕಾಣಬಹುದು. ಆದರೆ ಇಲ್ಲಿ ಒಪ್ಪದ ಹಾಜಿಯಾವರು ಇಮಾಂ ಇಬ್ರಾಹಿಂ ಮೌಲ್ವಿಯವರನ್ನು ಕೇಳಿ ಹೇಳುವುದಾಗಿ ತಿಳಿಸಿದರೆ ಹೊರತು ಅದರಲ್ಲಿಯೂ ಸೋಲುತ್ತಾರೆ. ಅವುಲಿಯಾರರು ಖಾದರ್‌ನ ಮೂಲಕ ಹಾಜಿಯವರ ಮನಸ್ಥಿತಿಯನ್ನು ಸ್ಪಷ್ಟಪಡಿಸುವಲ್ಲಿ ಯಶಸ್ವಿಯಾಗಿ ಅವರನ್ನು ಬದಲಾಯಿಸುವ ಚಿತ್ರಣವನ್ನು ಈ ಕಥೆಯಲ್ಲಿ ಕಾಣಬಹುದು. ಮುತ್ತುಪ್ಪಾಡಿ ಊರಿನ ಯುವಕ ಖಾದರ್ ತನ್ನ ವರ್ತನೆಯನ್ನು ಮಾತ್ರವಲ್ಲದೆ ಪೂರ್ಣ ಊರಿನ ಚಿತ್ರಣವನ್ನು ಅವುಲಿಯಾರರ ಸಹಾಯದಿಂದ ಬದಲಾಯಿಸುವಲ್ಲಿ ಯಶಸ್ವಿಯಾದನು.

'ಅಂಕ' ಸಂಕಲನದ 'ಕಪ್ಪು ಕಲ್ಲಿನ ಸೈತಾನ' ಕಥೆಯಲ್ಲಿ ಕೆಳವರ್ಗಕ್ಕೆ ಸೇರಿದ ಜನರು ವಾಸಿಸುತ್ತಿರುವ ಮುತ್ತುಪ್ಪಾಡಿಯ ಚಿತ್ರಣವನ್ನು ಮಾತ್ರವಲ್ಲದೆ ವರ್ಗ ಪ್ರಜ್ಞೆಯನ್ನೂ ಕಾಣಬಹುದು. ಬಡತನದಿಂದ ರೇಷನ್ ಕಾರ್ಡಿಗಾಗಿ ಕುಂಞಪಾತುಮ್ಮ ಮಾಡುವ ಪ್ರಯತ್ನವು ಬೇರೊಂದು ತಿರುವು ಪಡೆಯುತ್ತದೆ. ಕುಂಞಪಾತುಮ್ಮಳ ಗುಡಿಸಲ ಬಳಿ ನಿಂತು ನೋಡಿದರೆ ಮುತ್ತುಪ್ಪಾಡಿ ಗ್ರಾಮ ಅರ್ಧ ಕಾಣುತ್ತಿತ್ತು. ಆದರೆ ಅವಳ ಮನೆ ಮಾತ್ರ ಇದ್ದೂ ಇಲ್ಲದಂತಿತ್ತು. ಮುತ್ತುಪ್ಪಾಡಿಯ ಈ ಬಡ ಕುಟುಂಬ ರೇಷನ್ ಕಾರ್ಡಿನ ನಿರೀಕ್ಷೆಯಲ್ಲಿ ಹಲವಾರು ಯೋಜನೆಯನ್ನು ಹಾಕಿಕೊಂಡಿರುತ್ತದೆ.

ಅದರೊಂದಿಗೆ ಅವರ ಮನೆ ಸದಸ್ಯರ ದುಃಖತಃಪ್ತ ಮನಸ್ಥಿತಿಯನ್ನು ಇಲ್ಲಿ ಕಾಣಬಹುದು. ಆ ಮನೆಯಲ್ಲಿ ಕುಂಞಪಾತುಮ್ಮ, ಆಕೆಯ ಹಿರಿಯ ಮಗಳು ಹಾಗೂ ನಾಲ್ಕು ಮಕ್ಕಳ ತಾಯಿ ವಿಧವೆ ಸಾರಮ್ಮ, ಒಂದು ಹೆಣ್ಣು ಮಗುವನ್ನು ಗುಡಿಸಲು ಸಂಖ್ಯೆಗೆ ಸೇರಿಸಿ ಊರು ಬಿಟ್ಟು ಬೊಂಬಾಯಿಗೆ ಓಡಿದ್ದ ಕುಂಞಪಾತುಮ್ಮಳ ಮಗ ಖಾದರ್ ನನ್ನ ಹೆಂಡತಿ ಸಕೀನಾ ಮತ್ತು ಮದುವೆಗೆ ಅಗತ್ಯದ ವಯಸ್ಸು ತಲುಪಿರುವ ಕಿರಿಯ ಮಗಳು ಅಲಿಮಾ ಇವರೆಲ್ಲರನ್ನೂ ಇಲ್ಲಿ ಕಾಣಬಹುದು. ಇಂತಹ ಜನಸಂಖ್ಯೆಯಿಂದ ಕೂಡಿದ ಬೀಡಿ ಕಟ್ಟುವ ಬಡಕುಟುಂಬಕ್ಕೆ ಒಂದು ಮನೆಗೆ ಒಂದು ತಿಂಗಳಿಗೆ ಇಪ್ಪತ್ತು ಕಿಲೋ ಅಕ್ಕಿಯೆಂದು ತಿಳಿದಾಗ ಆಶ್ಚರ್ಯಗೊಳ್ಳುತ್ತಾರೆ. ಅದಕ್ಕಾಗಿ ಕುಂಞಪಾತುಮ್ಮಳ ಮಗಳು ಸಾರಮ್ಮ ಕಾಲಿನ ಬೆಳ್ಳಿಯ ಗೆಜ್ಜೆಯನ್ನು ಐವತ್ತು ರೂಪಾಯಿಗೆ ಅಡವಿಟ್ಟು ತನ್ನದೇ ಒಂದು ಬೇರೆ ಮನೆ ಮಾಡಿಕೊಳ್ಳುತ್ತಾಳೆ. ಆದರೆ ಅವರೆಲ್ಲರ ಪರಿಶ್ರಮ ವ್ಯರ್ಥವಾಗುತ್ತದೆ. ಬಡವರಿಗೆ ಪ್ರಮುಖವಾಗಿ ಬೇಕಾದ ಮೂಲಭೂತ ಆವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲವಾದ ಸರ್ಕಾರದ ಚಿತ್ರಣವನ್ನು ಮುತ್ತುಪ್ಪಾಡಿಯಲ್ಲಿ ಕಾಣಬಹುದು.

ಬೀಡಿ ಕಟ್ಟಿ ಹೊಟ್ಟೆ ಹೊರೆಯುತ್ತಿದ್ದ ಇವರು ಪಂಚಾಯಿತಿ ಆಫೀಸರಿನ ನೀರಿಕ್ಷೆಯಲ್ಲಿರುತ್ತಾರೆ. "ಹೋ ಬಂದರು!"(ಪು. ೩೧) ಸಕೀನ ಹೇಳಿದ ಮಾತಿನಿಂದ ಎಲ್ಲರಿಗೂ ಸಂತೋಷವಾಗುತ್ತದೆ. ಇದರಿಂದ ಅವರು ದೇವದೂತರಂತೆ ಕಂಡುಬರುತ್ತಾರೆ. ಕುಂಞಪಾತುಮ್ಮಳಿಗೆ ಯತೀಮ್ ಹುಡುಗರಿಗೆ ಸಹಾಯ ಮಾಡಲೆಂದು ಚಂದಾ ಎತ್ತಲು ಬಂದವರು ಎಂದು ತಿಳಿದ ಮೇಲೆ ಅವರಿಗೆ ಆಘಾತವಾಗುತ್ತದೆ. "ಹೌದು ಮಗ. . . ಎರಡು ವಾರದಿಂದ ಕಾಯ್ತಾ ಕುತಿದ್ದೇವೆ. ಯಾರು ಬರಲೇ ಇಲ್ಲ. ಈ ವಾರದಲ್ಲಿ ಖಂಡಿತ ಬರಬಹುದು ಅಂತ ನಾರಾಣಣ್ಣ ಹೇಳಿದ್ರು, ಎಂದು ಹೇಳಿದ ಮುದುಕಿ ತನ್ನ ಸ್ವರವನ್ನು ಇನ್ನಷ್ಟು ತಗ್ಗಿಸಿ ನಿನ್ಗೆ ಅವರ ಗೊತ್ತು ಉಂಟ ಮಗಾ?" (ಪು.೩೫) ಎಂದು ಪ್ರಶ್ನಿಸುವಲ್ಲಿ ಅವರ ಬಡತನ ಸ್ಥಿತಿ ವ್ಯಕ್ತವಾಗುತ್ತದೆ.

ಹೀಗೆ ಇಂತಹ ಅನೇಕ ಬಡವರ ಮನೆಗಳು ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಹಾದಿಕಾಯುತ್ತಿರುವಾಗ ಅದು ಸಿಗದೇ ಹೋದರೆ ಅವರ ಮನಸ್ಥಿತಿ ಹೇಗಿರುತ್ತದೆ ಎಂದು ಊಹಿಸಲು ಸಾಧ್ಯವಿಲ್ಲ. ಇಲ್ಲಿ ಕುಂಞಪಾತುಮ್ಮಳಿಗೆ 'ಅಲ್ಲಿನ ಬೆಟ್ಟ ಗುಡ್ಡ, ಮೇಲಿನ ಕಪ್ಪುಸೈತಾನ, ಸೋಗೆಯ ಗುಡಿಸಲುಗಳ ಮೇಲೆ ಎರಗುವುದನ್ನು ನೋಡಲು ಭಯ ಪಟ್ಟು ಕಣ್ಣು ಮುಚ್ಚಿಕೊಳ್ಳುತ್ತಾಳೆ'.(ಪು.೩೬) ಈ ವಾಕ್ಯವು ಮುಂದೆ ಇನ್ನೂ ಅನುಭವಿಸ ಬೇಕಾಗಿರುವ ತನ್ನ ಬಡತನದ ಕರಾಳಸ್ಥಿತಿಯನ್ನು ಕಾಣಲು ಸಾಧ್ಯವಾಗದೇ ಕಣ್ಣು ಮುಚ್ಚಿಕೊಂಡಂತೆ ಕಂಡು ಬರುತ್ತದೆ.

ಬಡತನ ಎಂಬ ಸೈತಾನನಿಂದ ಬೆಳಗು ಕಾಣಲು ಪರಿತಪಿಸುತ್ತಿರುವ ಮುತ್ತುಪ್ಪಾಡಿ ಊರಿನಲ್ಲಿ ವಾಸಿಸುತ್ತಿರುವ ಕುಟುಂಬದ ಚಿತ್ರಣವನ್ನು ಈ ಕಥೆಯಲ್ಲಿ ಬೋಳುವಾರರವರು ಚಿತ್ರಿಸಿದ್ದಾರೆ. ನೆಮ್ಮದಿಯ ಬದುಕು ಬಡವರಿಗೆ ಮರೀಚಿಕೆಯಂತೆ ಇಲ್ಲಿ ಕಂಡುಬರುತ್ತದೆ.

ಈ ಅಧ್ಯಾಯದಲ್ಲಿ ಮುತ್ತುಪ್ಪಾಡಿ ಎಂಬ ಕಾಲ್ಪನಿಕ ಪ್ರದೇಶವನ್ನು ಸೃಷ್ಟಿಸಿ ಜನರು ತಮ್ಮ ಇಚ್ಛೆಯಂತೆ ಇರಲು ಬಿಟ್ಟ ಮಹಮದ್‌ರವರು ಈ ಊರು ವಾಸ್ತವ ಪ್ರಪಂಚಕ್ಕೆ ಹತ್ತಿರವಾಗಿ ಇದನ್ನು ಚಿತ್ರಿಸಿದ್ದಾರೆ. ಅಲ್ಲಿನ ಜನರು ವಾಸ್ತವ ಪ್ರಪಂಚದ ನೋವು, ನಲಿವು, ಬಡತನ, ಧರ್ಮ, ಮೌಢ್ಯತೆ ನಡುವೆಯೇ ಬದುಕುತ್ತಿರುವುದನ್ನು ಈ ಅಧ್ಯಾಯದಲ್ಲಿ ಕಾಣಬಹುದು.

ಕೊನೆಟಿಪ್ಪಣಿ:-

೧.'ದೇವರುಗಳ ರಾಜ್ಯದಲ್ಲಿ' ಕಥಾಸಂಕಲನದ 'ದೇವರುಗಳ ರಾಜ್ಯದಲ್ಲಿ' ಕತೆಯ ಪು.-೩೮.

೨. ಅದೇ ಸಂಕಲನದ 'ಗುಟ್ಟೊಂದು ಹೇಳಿದರೆ' -ಪು.೭೫ ಅದೇ-ಪು.೭೬

೩. 'ಆಕಾಶಕ್ಕೆ ನೀಲಿ ಪರದೆ' ಕಥಾಸಂಕಲನದ ಇಬಾದತ್ ಕತೆಯ ಪು.೧೧೯.

ಅದೇ-ಪು. ೧೧೯.

೪. 'ಅಂಕ'ಕಥಾ ಸಂಕಲನದ 'ಕಪ್ಪು ಕಲ್ಲಿನ ಸೈತಾನ'-ಪು.೩೧ ಹಾಗೂ ೩೬.

ಸಮಾರೋಪ

"ಬೊಳುವಾರು ಮಹಮದ್ ಕುಂಞಿ ಕತೆಗಳಲ್ಲಿ ಸಾಮಾಜಿಕ ಮುಖಾಮುಖಿ" ಎಂಬ ಈ ಅಧ್ಯಯನವನ್ನು ಅವಲೋಕಿಸಿ ನೋಡಿದಾಗ ಬೊಳುವಾರು ಅವರ 'ದೇವರುಗಳ ರಾಜ್ಯದಲ್ಲಿ', 'ಅಂಕ' 'ಆಕಾರಕ್ಕೆ ನೀಲಿ ಪರದೆ' 'ಒಂದು ತುಂಡು ಗೋಡೆ' ಕಥಾಸಂಕಲನಗಳಲ್ಲಿ ಅಲ್ಪಸಂಖ್ಯಾತ ಸಮುದಾಯ, ಸ್ತ್ರೀಸಮಾಜ, ಧರ್ಮ, ದೇವರು ಹಾಗೂ ಮೌಢ್ಯತೆಯ ಅಂಶಗಳಿರುವುದು ಕಂಡುಬರುತ್ತದೆ.

"ದೇವರುಗಳ ರಾಜ್ಯದಲ್ಲಿ" ಕಥಾಸಂಕಲನದಲ್ಲಿ ಧರ್ಮದ ವಿವಿಧ ಮುಖಗಳನ್ನು ಕಾಣಬಹುದು. ಧರ್ಮದ ಚೌಕಟ್ಟನ್ನು ಮೀರಿದ ಜನಸಮುದಾಯವನ್ನು ಹಾಗೂ ಮನುಷ್ಯನಲ್ಲಿರುವ ಮೌಢ್ಯತೆಯನ್ನು ಈ ಸಂಕಲನದಲ್ಲಿ ನೋಡಬಹುದು. ದೇವರು ಧರ್ಮದ ಹೆಸರಿನಲ್ಲಿ ಮನುಷ್ಯನ ಆಚಾರ-ವಿಚಾರಗಳನ್ನು ಇಲ್ಲಿ ಕಾಣಬಹುದು. ಧರ್ಮ-ದೇವರ ಹೆಸರಿನಲ್ಲಿ ಮನುಷ್ಯ ಹೇಗೆ ಶೋಷಣೆಗೆ ಒಳಗಾಗುತ್ತಾನೆ ಎಂಬುದನ್ನು ಇಲ್ಲಿ ಕಾಣಬಹುದು. ದೇವರು-ಧರ್ಮ-ಮೌಢ್ಯತೆಯಲ್ಲಿ, ದೇವರು ಒಂದು ನಂಬಿಕೆ ಎಂಬುದನ್ನು ತಿಳಿಸುತ್ತದೆ.

ಅಲ್ಪಸಂಖ್ಯಾತ ಸಮುದಾಯದಲ್ಲಿ ಮುಸ್ಲಿಂ ಸಮುದಾಯವು ಅತಿದೊಡ್ಡ ಅಲ್ಪಸಂಖ್ಯಾತ ಸಮುದಾಯವಾಗಿದೆ ಎಂಬುದರ ಚಿತ್ರಣ ಕಾಣಬಹುದು. ಅಸ್ಪೃಶ್ಯತೆಯಿಂದ ಹೊರ ಬಂದು ವಿದ್ಯೆ ಕಲಿಕೆಯಲ್ಲಿ ನಿರತರಾದಂತಹ ಸಮುದಾಯವನ್ನು ಕಾಣಬಹುದು. ಅವರ 'ಒಂದು ತುಂಡು ಗೋಡೆ' ಕಥಾಸಂಕಲನವನ್ನು ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಎರಡು ಸಮುದಾಯದ ಚಿತ್ರಣವನ್ನು ಕಾಣಬಹುದು. ವಿದ್ಯೆಯ ಕಡೆಗೆ ತುಡಿಯುತ್ತಿರುವ ಸಮುದಾಯವನ್ನು ನಾವಿಲ್ಲಿ ಗುರುತಿಸಬಹುದು. ಅದಕ್ಕಾಗಿ ಸಹಕರಿಸುವ ಸಮುದಾಯದ ಚಿತ್ರಣವನ್ನು ನೀಡಿದ್ದಾರೆ.

"ಅಲ್ಪಸಂಖ್ಯಾತ ಸ್ತ್ರೀ ಸಮುದಾಯ"ದ ಮೂಲಕ ಸ್ತ್ರೀ ಸಮಾಜವನ್ನು ಬಿಂಬಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅವರ 'ಅಂಕ' ಕಥಾಸಂಕಲನದಲ್ಲಿ ರುಖಿಯಾ ಕತೆಯ ಮೂಲಕ ಹಾಗೂ "ದೇವರುಗಳ ರಾಜ್ಯದಲ್ಲಿ" ಕಥಾಸಂಕಲನದ ಮುತ್ತೇಚ್ಚರದ ಮುನ್ನುಡಿ ಕತೆಯ ಮೂಲಕ ಅನಕ್ಷರಸ್ಥ ಸ್ತ್ರೀಯು ತನ್ನ ಸಮಾಜದಲ್ಲಿ ನಡೆಯುವ ದಬ್ಬಾಳಿಕೆಯ ವಿರುದ್ಧ ತಿರುಗಿ ಬೀಳುತ್ತಾಳೆ ಎಂಬುದರ ಚಿತ್ರಣವನ್ನು ನೀಡಿದ್ದಾರೆ. ಸಾರಾ ಅಬೂಬಕ್ಕರ್‌ರವರ ಕತೆಗಳಲ್ಲಿ ಹೆಣ್ಣಿನ ಶೋಷಣೆಯ ಚಿತ್ರಣವನ್ನು

ಕಾಣಬಹುದು. ಅವರ 'ಚಪ್ಪಲಿಗಳು' ಕಥಾ ಸಂಕಲನದ ಶೀರ್ಷಿಕೆಯೇ ಹೆಣ್ಣಿನ ಸ್ಥಾನಮಾನ ಕುರಿತು ಅವರ ಧರ್ಮದಲ್ಲಿ ಹೇಗಿದೆ ಎಂಬುದನ್ನು ತಿಳಿಸುತ್ತದೆ.

ಗಂಡು-ಹೆಣ್ಣು ಸಂಬಂಧಗಳ ಚಿತ್ರಣವನ್ನು 'ಆಕಾಶಕ್ಕೆ ನೀಲಿ ಪರದೆ' ಕಥೆಯಲ್ಲಿ ಕಾಣಬಹುದು. ಗಂಡು-ಹೆಣ್ಣಿನ ಸಂಬಂಧದ ದಾಂಪತ್ಯದ ಆಕರ್ಷಣೆ, ಮನಸ್ತಾಪವನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಇನ್ನೂ ಹಲವು ಕತೆಗಳಲ್ಲಿ 'ಗಂಡು-ಹೆಣ್ಣಿ'ನ ಸಂಬಂಧದ ಚಿತ್ರಣವನ್ನು ಕಾಣಬಹುದು.

ಅವರ ಎಲ್ಲ ಕಥಾಸಂಕಲನದಲ್ಲಿಯೂ 'ಮುತ್ತುಪ್ಪಾಡಿ' ಎಂಬ ಕಾಲ್ಪನಿಕ ಪ್ರದೇಶದ ಚಿತ್ರಣವನ್ನು ಕಾಣಬಹುದು. 'ದೇವರುಗಳ ರಾಜ್ಯದಲ್ಲಿ 'ಅಂಕ' 'ಆಕಾಶಕ್ಕೆ ನೀಲಿಪರದೆ' 'ಒಂದು ತುಂಡುಗೋಡೆ' ಕಥಾಸಂಕಲನದಲ್ಲಿ ಕಾಣಬಹುದು.

ಅಸ್ಪೃಶ್ಯತೆ, ಬಡತನ, ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಸೋತಿರುವ ಸರ್ಕಾರ, ಧರ್ಮದ ಗ್ರಂಥ ಭೋಧಿಸುವ ಗುರುಗಳ ಚಿತ್ರಣ, ಮೇಲ್ವರ್ಗ ಮತ್ತು ಕೆಳವರ್ಗದಲ್ಲಿರುವ ತಾರತಮ್ಯ ಮೊದಲಾದ ವಿಷಯಗಳನ್ನು ತಿಳಿಸಲಾಗಿದೆ.

ಒಟ್ಟಿನಲ್ಲಿ ಬೊಳುವಾರು ಅವರ ಕಥೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯ, ಸ್ತ್ರೀ ಸಮಾಜ, ಗಂಡು-ಹೆಣ್ಣಿನ ಸಂಬಂಧ, ದೇವರು, ಧರ್ಮ-ಮೌಢ್ಯತೆಗಳ ಚಿತ್ರಣ ಹಾಗೂ ಮುತ್ತುಪ್ಪಾಡಿ ಎಂಬ ಕಾಲ್ಪನಿಕ ಅಂಶಗಳನ್ನು ಸಮಾಜದ ನೆಲೆಯಲ್ಲಿ ವಿಶ್ಲೇಷಿಸುವ ಮೂಲಕ ಅದನ್ನು ಸಾಮಾಜಿಕವಾಗಿ ಮುಖಾಮುಖಿಯಾಗಿಸಿದ್ದಾರೆ ಎಂಬುದನ್ನು ಕಾಣಬಹುದು.

ಪರಾಮರ್ಶನ ಗ್ರಂಥಗಳು

೧. ಅಲ್ಪಸಂಖ್ಯಾತರು : ಟಿ.ನಾಗರಾಜು ಎಂ.ಎ: ಚೇತನ ಬುಕ್ ಹೌಸ್ ಪ್ರಕಾಶನ: ೧೯೯೯.

೨. ಭಾರತೀಯ ಸಮಾಜ : ಕೆ.ಭೈರಪ್ಪ ಎಂ.ಎ: ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪನಿ ಪ್ರಕಾಶನ, ೧೯೯೭.

೩. ಮಹಿಳಾ ಅಧ್ಯಯನ : ನೇಮಿಚಂದ್ರ: ಅಂಕಿತ ಪುಸ್ತಕ ಪ್ರಕಾಶನ, ೨೦೦೧.

೪. ಕತ್ತಿಯಂಚಿನ ದಾರಿ : ರಹಮತ್ ತರೀಕೆರೆ, ೨೦೦೬.

೫. ಮೂರು ದಲಿತ ಕಮ್ಮಟಗಳು, ದಾಖಲಿಸಿದವರು. ಕೆ.ಆರ್. ದುರ್ಗಾದಾಸ್ ಹಾಗೂ ಜಿ.ವಿ.ಆನಂದಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೬.

೬. ಕನ್ನಡ ಸಾಹಿತ್ಯ ಮತ್ತು ಪ್ರಭುತ್ವ : (ವಿವಿಧ ಲೇಖಕರು) ಕರ್ನಾಟಕ ಸಾಹಿತ್ಯ ಆಕಾಡೆಮಿ, ಬೆಂಗಳೂರು ೧೯೯೩.

೭. ಮಹಿಳಾ ಸಾಹಿತ್ಯ ಸಮೀಕ್ಷೆ: ಪ್ರಧಾನ ಸಂಪಾದಕರು, ಶ್ರೀಮತಿ ಆರ್ಯಾಂಭ ಪಟ್ಟಾಭಿ: ಸಂವಹನ ಪ್ರಕಾಶನ, ೨೦೦೪.

೮. ಹೊಸಗನ್ನಡ ಸಾಹಿತ್ಯ ಚರಿತ್ರೆ: ಎಲ್. ಎಸ್. ಶೇಷಗಿರಿರಾವ್, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು ೧೯೮೮.

೯. ದೇವರುಗಳ ರಾಜ್ಯದಲ್ಲಿ: ಬೊಳುವಾರು ಮಹಮದ್ ಕುಂಞ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೮.

೧೦.ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ; ಸಂ.ಜಿ.ಎಸ್.ಅಮೂರ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೦೪.

೧೧.ಸಾಹಿತ್ಯ ಸಮ್ಮುಖ: ನಿ.ಮುರಾರಿ ಬಲ್ಲಾಳ: ಮುದ್ರಣ ರಾಜೇಶ್ ಪ್ರಕಾಶನ, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ, ೨೦೦೨.

೧೨.ಕನ್ನಡ ಕಥನ ಸಾಹಿತ್ಯ ಸಣ್ಣಕತೆ:ಸಂ. ಜಿ.ಎಸ್.ಅಮೂರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೧೩.ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂಡಾಯ, ಡಾ.ಚಂದ್ರಕಾಂತ್ ವಿ.ಚವ್ಹಾಣ್.

ಕರ್ನಾಟಕ ಮುಸ್ಲಿಂ ಜಾನಪದ: ಡಾ॥ ಷಹಸೀನಾ ಬೇಗಂ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.

೧೪.ಬೊಳುವಾರು ಮಹಮದ್ ಕುಂಞಿ ಆಯ್ದ ಕಥೆಗಳು: ಡಿ.ಕೆ.ಶ್ಯಾಮಸುಂದರರಾವ್, ಕಾಮಧೇನು ಪ್ರಕಾಶನ, ಬೆಂಗಳೂರು.

೧೫. ಮಹಿಳೆ ಬಿಡುಗಡೆಯ ಹಾದಿಯಲ್ಲಿ: ಎನ್.ಗಾಯತ್ರಿ

೧೬.ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ: ಡಾ.ಎಚ್.ಎಸ್.ಶ್ರೀಮತಿ, (ವಿವಿಧ ಲೇಖಕರು), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೬.ಬಂಡಾಯ ಸಾಹಿತ್ಯ ಸಂವೇದನೆ: ಡಾ.ರಂಗರಾಜ ವನದುರ್ಗ.

೧೭.ಕನ್ನಡದ ದಲಿತ ಸಾಹಿತ್ಯ: ಡಾ. ಅರ್ಜುನ ಗೂಳಸಂಗಿ.

೧೮.ಎದೆಯ ಹಣತೆ: ಬಾನುಮುಷ್ತಾಕ್.

೧೯.ಸ್ತ್ರೀಸಂವೇದನೆಯಲ್ಲಿ ಕನ್ನಡ ಕಥನ: ಎಲ್.ಜಿ.ಮೀರಾ.

೨೦.ಚಂದ್ರಗಿರಿ ತೀರದಲ್ಲಿ: ಸಾರಾ ಅಬೂಬ್ಕರ್.

೨೧.ಚಪ್ಪಲಿಗಳು: ಸಾರಾ ಅಬೂಬ್ಕರ್, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೨.ಸ್ತ್ರೀವಾದಿ ಸಾಹಿತ್ಯ ವಿಮರ್ಶೆ : ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.

೨೩.ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ :ಸಂ. ಬರಗೂರು ರಾಮಚಂದ್ರಪ್ಪ(ವಿವಿಧ ಲೇಖಕರು) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೪. ಲೇಖನಗುಚ್ಛ: ಸಾರಾ ಅಬೂಬಕ್ಕರ್, ಚಂದ್ರಗಿರಿ ಪ್ರಕಾಶನ, ೧೯೯೭.

೨೫.ಸಮಾಜ ಶಾಸ್ತ್ರದ ಪ್ರಾಥಮಿಕ ತತ್ವಗಳು ಮತ್ತು ಸಾಮಾಜಿಕ ಚಿಂತನೆ – ಸಂಪುಟ೧, ಚ.ನ.ಶಂಕರ್‌ರಾವ್, ಜೈ ಭಾರತ ಪ್ರಕಾಶನ, ಮಂಗಳೂರು.

೨೬.ವಜ್ರಪ್ರಭೆ: ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ.

೨೭.ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ–೪; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮.ಕನ್ನಡ ಸಾಹಿತ್ಯ ಕೋಶ: ರಾಜಪ್ಪ ದಳವಾಯಿ,ಶ್ರೀ ರಾಘವೇಂದ್ರ ಪ್ರಕಾಶನ, ಬೆಂಗಳೂರು.

೨೯.ನಡೆದದ್ದೆ ದಾರಿ: ವೀಣಾ ಶಾಂತೇಶ್ವರ್, ಸುಂದರ್ ಪ್ರಕಾಶನ, ಧಾರವಾಡ.

೩೦.ಮಹಿಳೆ ಸಾಹಿತ್ಯ, ಸಮಾಜ -ವಿಜಯ ದಬ್ಬೆ,ರಚನಾ ಪ್ರಕಾಶನ, ಮೈಸೂರು